

ಶ್ರೀಶಾರದಾದೇವಿ

ಪ್ರಚಾರ ಪುಸ್ತಕಮಾಲೆ–೧೪೧

ಶ್ರೀಶಾರದಾದೇವಿ

ಸ್ವಾಮಿ ಸೋಮನಾಥಾನಂದ

1988

ಮೊದಲನೆಯ ಮುದ್ರಣ—೧೯೬೫

ಎರಡನೆಯ ಮುದ್ರಣ—೧೯೭೦

೫,೦೦೦ ಪ್ರತಿಗಳು

ಮೂರನೆಯ ಮುದ್ರಣ—೧೯೮೮

೧೦,೦೦೦ ಪ್ರತಿಗಳು

ಬೆಲೆ : ರೂ. ೧-೦೦

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-6

ಮುದ್ರಕರು

ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು-6

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾ ನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶ ಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿ ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ, ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳಿವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲಸಿ, ಸಾಮಾನ್ಯಜನರಂತೆಯೇ ಇದ್ದು

ಕೊಂಡು, ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಿಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ; ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲ ಭಾವನೆ ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು ಓದಿ ತಿಳಿವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೆ ಭೌತವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ; ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ

ಮುಂತಾದ ವಿಷಯಗಳನ್ನು ಕುರಿತ ನೂರ ನಲವತ್ತು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಸ್ವಾಮಿ ಸೋಮನಾಥಾನಂದ ಅವರ 'ಶ್ರೀಶಾರದಾದೇವಿ' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ಕೆ. ಎಲ್. ಶ್ರೀಮಾಲಿ
ವೈಸ್-ಛಾನ್ಸಲರ್

ವಿಷಯಸೂಚಿಕೆ

೧ ಬಾಲ್ಯ

ಬಂಗಾಳ ಪ್ರಾಂತ್ಯದಲ್ಲಿ ಹೂಗ್ಲಿ ಜಿಲ್ಲೆಗೆ ಸೇರಿದ ಜಯರಾಮ ವಟಿ ಎಂಬ ಸುಂದರ ಗ್ರಾಮವಿತ್ತು. ಆ ಹಳ್ಳಿಯ ಪಕ್ಕದಲ್ಲಿಯೇ ಆಮೋದರಾ ಎಂಬ ಸಣ್ಣ ನದಿ ಹರಿಯುತ್ತಿದೆ. ಸುಮಾರು ನೂರು ಮನೆಗಳ ಸುಂದರ ಗ್ರಾಮ. ಬೇಸಾಯಗಾರರೆ ಅಧಿಕ. ಆ ಸಣ್ಣ ಹಳ್ಳಿಯ ಬೇಸಾಯಗಾರರಿಗೆ ಬೇಕಾದ ಬಡಗಿ ಕಮ್ಮಾ ರರ ಕೆಲವು ಒಕ್ಕಲುಗಳು ಇದ್ದವು. ಆ ಊರಿನಲ್ಲಿ ಬ್ಯಾನರ್ಜಿ ಮತ್ತು ಮುಖರ್ಜಿ ಎಂಬ ಎರಡು ಬ್ರಾಹ್ಮಣ ಸಂಸಾರಗಳಿದ್ದವು. ಮುಖರ್ಜಿ ಮನೆತನಕ್ಕೆ ಸೇರಿದ ರಾಮಚಂದ್ರಮುಖ್ಯೋಪಾ ಧ್ಯಾಯ ಮತ್ತು ಶ್ಯಾಮಸುಂದರದೇವಿ ಎಂಬ ಬ್ರಾಹ್ಮಣ ಕುಟುಂಬವಿತ್ತು. ರಾಮಚಂದ್ರ ಮುಖ್ಯೋಪಾಧ್ಯಾಯರು ವಿದ್ವಾಂಸರು, ದೈವಭಕ್ತರು ಮತ್ತು ಸಾತ್ತ್ವಿಕಜೀವಿ ಎಂದು ಆ ಊರಿನಲ್ಲಿ ಪ್ರಖ್ಯಾತರಾಗಿದ್ದರು. ಅವರ ಹೆಂಡತಿಯಾದ ಶ್ಯಾಮ ಸುಂದರೀದೇವಿ ಆ ಹಳ್ಳಿಯವರಿಗೆಲ್ಲಾ ಕಷ್ಟದಲ್ಲಿ ನೆರವಾಗುವ ಅವರ ಸುಖದಲ್ಲಿ ಸಂತೋಷಪಡುವ ಜೀವಿಯಾಗಿ ಬೆಳೆಯು ತ್ತಿದ್ದರು.

ಜಯರಾಮವಟಿಗೆ ಸ್ವಲ್ಪ ದೂರದಲ್ಲೆ ಶಿಹೋರ್ ಎಂಬ ಗ್ರಾಮವಿದೆ. ಒಂದು ದಿನ ಶ್ಯಾಮಸುಂದರೀದೇವಿ ಶಿಹೋರ್ ಗ್ರಾಮಕ್ಕೆ ಹೋಗಿ ಅಲ್ಲಿಂದ ಹಿಂತಿರುಗುತ್ತಿದ್ದಾಗ ಒಂದು ದೇವ ಸ್ಥಾನದ ಸಮೀಪದಲ್ಲಿ ಕುಳಿತಿದ್ದರು. ಅವರು ಅಲ್ಲಿ ಕುಳಿತಿದ್ದಾಗ ಅತಿ ತೇಜಸ್ವಿನಿಯಾದ ಐದು ವರುಷದ ಬಾಲಿಕೆಯೊಬ್ಬಳು ಇವರ ಸಮೀಪಕ್ಕೆ ಬಂದು ಇವರನ್ನು ಅಪ್ಪಿದಂತಾಗಿ "ಅಮ್ಮ ನಾನು ನಿನ್ನ ಮನೆಗೆ ಬರುತ್ತೇನೆ" ಎಂದು ಹೇಳಿದಂತಾಗಿ ಮಾಯ

ವಾಯಿತಂತೆ. ಇದಾದ ಕೆಲವು ಕಾಲದ ಮೇಲೆ ೧೮೫೩ನೇ ಡಿಸಂಬರ್ ೨೨ನೇ ತಾರೀಖು ಇವರಿಗೆ ಹಿರಿಯ ಹೆಣ್ಣು ಮಗು ಜನಿಸಿತು. ಮಗುವಿಗೆ ಶಾರದಾಮಣಿ ಎಂದು ನಾಮಕರಣ ಮಾಡಿದರು. ಅನಂತರ ಅವರನ್ನು ಶಾರದಾದೇವಿ ಎಂದು ಕರೆಯ ತೊಡಗಿದರು. ಶ್ರೀ ರಾಮಕೃಷ್ಣರ ಭಕ್ತವೃಂದ ಅವರನ್ನು ಶ್ರೀಮಾತೆ ಎಂದು ಕರೆಯುತ್ತಿದ್ದರು. ಅವರಿಗೆ ನಾಲ್ಕೈದು ವರುಷಗಳು ಆಗುವ ಹೊತ್ತಿಗೆ ಆಗಲೆ ಅವರು ತಾಯಿಗೆ ತಂದೆಗೆ ಹಲವು ಕೆಲಸಗಳಲ್ಲಿ ನೆರವಾಗತೊಡಗಿದರು. ತಂದೆಯ ಪೂಜೆಗೆ ಬೇಕಾದ ಹೂವು ತುಳಸಿಯನ್ನು ಕೊಯ್ದುಕೊಂಡು ಬರುತ್ತಿದ್ದರು. ತಾಯಿಗೆ ಅಡಿಗೆಯ ಮನೆಯ ಕೆಲಸದಲ್ಲಿ ಸಹಾಯ ಮಾಡುತ್ತಿದ್ದರು. ಶಾರದಾದೇವಿ ಸಣ್ಣ ಹುಡುಗಿಯಾದಾಗಿನಿಂದಲೂ ಕಷ್ಟದ ಕೆಲಸ ಅನುಭವ ಇತ್ತು. ಬಂಗಾಳದೇಶದ ಕಡೆ ಬಹಳ ಮಳೆ. ಕೆಲವು ವೇಳೆ ಸುತ್ತಲ್ಲಿದ್ದ ಗದ್ದೆಗಳೆಲ್ಲ ನೀರಿನಿಂದ ತುಂಬಿಹೋಗಿರುತ್ತಿತ್ತು. ಆ ಸಮಯದಲ್ಲಿ ಶಾರದಾದೇವಿ ಮಂಡಿಯುದ್ದ ನೀರಿಗೆ ಹೋಗಿ ಹುಲ್ಲನ್ನು ಕುಡುಗೋಲಿನಿಂದ ಕೊಯ್ದುಕೊಂಡು ದನಗಳಿಗೆ ಮನೆಗೆ ತರುತ್ತಿದ್ದರು. ಕೆಲವು ಸಮಯದಲ್ಲಿ ಆಳುಗಳು ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದಾಗ ಅವರಿಗೆ ಮನೆಯಿಂದ ಊಟವನ್ನೂ ತೆಗೆದುಕೊಂಡುಹೋಗಿ ಕೊಡುತ್ತಿದ್ದರು. ಒಮ್ಮೆ ಬರಗಾಲ ಬಂದು ಸುತ್ತಮುತ್ತಲಿದ್ದ ಬಡವರೆಲ್ಲ ಹಾಹಾಕಾರಪಡುತ್ತಿದ್ದರು. ಅದೃಷ್ಟವಶಾತ್ ರಾಮಚಂದ್ರಮುಖ್ಯೋಪಾಧ್ಯಾಯರ ಕಣಜದಲ್ಲಿ ಭತ್ತವಿತ್ತು. ಅವರು ಸುತ್ತಲೂ ಅನೇಕ ಜನ ಊಟವಿಲ್ಲದೆ ಉಪವಾಸವಿರುವಾಗ ತಾವು ಮಾತ್ರ ಚೆನ್ನಾಗಿ ಉಂಡು ಸುಖವಾಗಿರದೆ ತಮ್ಮ ಮನೆಯ ಮುಂದೆ ಅನ್ನ ಬೇಳೆ ಬೇಯಿಸಿ ಕಿಚಡಿ ಮಾಡಿ ಇಡು

ತ್ತಿದ್ದರು. ಯಾರು ಬಂದರೂ ಅದನ್ನು ಬಡಿಸುತ್ತಿದ್ದರು. ಶಾರದಾದೇವಿಯವರೇ ಅನೇಕ ವೇಳೆ ಅದನ್ನು ಬಡಿಸುತ್ತಿದ್ದರು. ಬಿಸಿಯಾಗಿದ್ದರೆ ಅದನ್ನು ಬೀಸಣಿಗೆಯಿಂದ ಬೀಸಿ ಬಂದವರಿಗೆ ಅಕ್ಕರೆಯಿಂದ ನೀಡುತ್ತಿದ್ದರು. ಒಂದು ಸಲ ಜಯರಾಮವಟಿಯ ಸುತ್ತಮುತ್ತಲಿನ ಗದ್ದೆಯಲ್ಲಿ ಬೆಳೆಯುತ್ತಿದ್ದ ತೆನೆಗೆ ಯಾವುದೊ ರೋಗ ತಗುಲಿತು. ಅವು ಹಾಗೆಹಾಗೆಯೇ ಉದುರತೊಡಗಿದವು. ಸ್ಥಿತಿ ತುಂಬಾ ಶೋಚನೀಯವಾಗತೊಡಗಿತು. ಶ್ರೀ ಶಾರದಾದೇವಿ ಅಂತಹ ಸಮಯದಲ್ಲಿ ಗದ್ದೆಯಲ್ಲಿ ಬಿದ್ದಿದ್ದ ಭತ್ತದ ತೆನೆ ಮತ್ತು ಕಾಳುಗಳನ್ನು ಆರಿಸಿ ಮನೆಗೆ ತಂದುಕೊಡುತ್ತಿದ್ದರಂತೆ.

ಬಾಲ್ಯದಿಂದಲೂ ಶಾರದಾದೇವಿಯವರಲ್ಲಿ ಇತರ ಹುಡುಗರೊಂದಿಗೆ ಬೆರೆಯುವಾಗ ಅವರೇ ಪ್ರತ್ಯೇಕ ಗುಂಪಿಗೆ ಸೇರಿರುವುದನ್ನು ನೋಡುತ್ತೇವೆ. ಇತರ ಹುಡುಗರಂತೆ ಅವರು ಬಯ್ಯುವುದು ಜಗಳಕಾಯುವುದು ಇವುಗಳನ್ನು ಮಾಡುತ್ತಿರಲಿಲ್ಲ. ಹಾಗೆ ಇತರರು ಮಾಡುತ್ತಿದ್ದರೆ ಇವರು ಅದೇ ವಯಸ್ಸಿಗೆ ಸೇರಿದ ಸಣ್ಣ ಹುಡುಗಿಯಾಗಿದ್ದರೂ ಅವರಿಗೆ ಬುದ್ಧಿವಾದವನ್ನು ಹೇಳುತ್ತಿದ್ದರು. ಇತರರಂತೆ ಮನೆ ಕಟ್ಟುವುದು, ಮದುವೆ ಮಾಡುವುದು, ಅಡಿಗೆ ಮಾಡುವುದು ಮುಂತಾದ ಆಟಗಳನ್ನು ಆಡುತ್ತಿರಲಿಲ್ಲ. ಬಾಲ್ಯದಿಂದಲೂ ಇವರ ಆಟಗಳೆಲ್ಲ ದೇವರಿಗೆ ಸಂಬಂಧಪಟ್ಟ ಆಟಗಳಾಗಿದ್ದವು. ದುರ್ಗಾಪೂಜೆ ಕಾಳಿಪೂಜೆ ಎಂದು ತಾವು ನೋಡಿಬಂದ ಪೂಜೆಗಳ ಆಟವನ್ನು ಆಡುತ್ತಿದ್ದರು. ಆ ಸಮಯದಲ್ಲಿ ಆಟದ ದೇವರ ಮುಂದೆ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದಾಗಲೂ ಅದನ್ನು ನೋಡಿದ ಕೆಲವು ಹಿರಿಯರು ಅನಂತರ ಅದು ದೀರ್ಘನೀರವ ಧ್ಯಾನಕ್ಕೆ ಸಮನಾಗಿತ್ತು ಎಂದು ಹೇಳುತ್ತಿದ್ದರು.

ಶ್ರೀ ಶಾರದಾದೇವಿಯವರ ತಂದೆತಾಯಿಗಳು ಭಗವದ್ಭಕ್ತರು. ಪ್ರತಿದಿನ ರಾಮಾಯಣ, ಮಹಾಭಾರತ, ಚೈತನ್ಯಚರಿತಾಮೃತ ಮುಂತಾದ ಪುಸ್ತಕಗಳಲ್ಲಿ ಯಾವುದಾದರೂ ಒಂದನ್ನು ಓದುತ್ತಿದ್ದರು. ತಾಯಿಯಾದರೋ ತನಗೆ ವಿರಾಮವಿರುವಾಗಲೆಲ್ಲ ಮಗಳನ್ನು ಕರೆದು ತೊಡೆಯಮೇಲೆ ಕುಳ್ಳಿರಿಸಿಕೊಂಡು ಪುರಾಣದಲ್ಲಿ ಬರುವ ಪ್ರಖ್ಯಾತ ಸೀತಾ, ಸಾವಿತ್ರೀ, ದಮಯಂತಿ ಮುಂತಾದವರ ಕಥೆಗಳನ್ನು ಹೇಳುತ್ತಿದ್ದರು. ಶ್ರೀ ಶಾರದಾದೇವಿಯವರು ಹುಡುಗಿಯಾಗಿರುವಾಗಲೇ ರಾಮಾಯಣ, ಮಹಾಭಾರತದ ಕಥೆಗಳೆಲ್ಲ ಪರಿಚಯವಾಗತೊಡಗಿತು. ಅಲ್ಲಿ ಬರುವ ಪ್ರಖ್ಯಾತ ವ್ಯಕ್ತಿಗಳು ಮತ್ತು ಅವರ ಆದರ್ಶ ಅವರ ಹೃದಯದಲ್ಲಿ ಚೆನ್ನಾಗಿ ಬೇರೂರತೊಡಗಿತು. ಹೀಗೆ ಶಾರದಾದೇವಿಯವರು ಆ ಸುಂದರ ಗ್ರಾಮದಲ್ಲಿ ಸಾತ್ತ್ವಿಕ ತಂದೆತಾಯಿಗಳ ಮನೆಯಲ್ಲಿ, ಪುರಾಣ ಪುಣ್ಯಕಥೆಗಳ ವಾತಾವರಣದಲ್ಲಿ ಬೆಳೆಯುತ್ತಿದ್ದರು. ಆಗ ಅವರಿಗೆ ಐದು ವರುಷವಾಗಿತ್ತು.

ಇದೇ ಸಮಯದಲ್ಲಿ ಶ್ರೀ ರಾಮಕೃಷ್ಣರು ದಕ್ಷಿಣೇಶ್ವರದಲ್ಲಿ ಉಗ್ರ ತಪಸ್ಸಿನಲ್ಲಿ ನಿರತರಾಗಿದ್ದರು. ಅಷ್ಟುಹೊತ್ತಿಗೆ ಆಗಲೇ ಅವರು ದೇವರನ್ನು ಸಗುಣದ ಮೂಲಕ ನೋಡಿದ್ದರು. ಅವನನ್ನು ಹಲವು ವಿಧದಲ್ಲಿ ಪ್ರೀತಿಸಿದ್ದರು. ಹಲವು ಸಾಧನೆಗಳನ್ನು ಮಾಡಿ ಎಲ್ಲಾ ಸಾಧನಾ ಪಥದಿಂದಲೂ ಸಿದ್ಧಿಯನ್ನು ಪಡೆದರು. ಆದರೂ ಅವರಲ್ಲಿ ಮತ್ತೂ ಹೆಚ್ಚು ದಾರಿಗಳಿಂದ ದೇವರನ್ನು ನೋಡಬೇಕೆಂಬ ಆಸೆ. ಒಂದು ಸಾಧನೆಯಾದ ಮೇಲೆ ಮತ್ತೊಂದು ಸಾಧನೆ, ಒಂದು ಧರ್ಮವಾದ ಮೇಲೆ ಮತ್ತೊಂದು ಧರ್ಮದ ಸಾಧನೆಯ ಅದ್ಭುತ ಪ್ರಯೋಗಕ್ಷೇತ್ರದಂತೆ ಇತ್ತು ಅವರ ಜೀವನ. ಅವರು ಸಾಧಾರಣ ಮನುಷ್ಯರು

ಇದ್ದ ಪ್ರಪಂಚದ ಮೇಲೆ ಇದ್ದರೂ ಅವರ ಮನಸ್ಸು ಬೇರೆ ಭೂಮಿಕೆಯಲ್ಲಿತ್ತು. ಅವರಿಗೆ ದೇವರು ಚರ್ಚಾಸ್ಪದವಾದ ವಸ್ತುವಾಗಿರಲಿಲ್ಲ. ಅದನ್ನು ಅವರು ಶಾಸ್ತ್ರದ ಪೊದೆಯಲ್ಲಿ ಹುಡುಕಬೇಕಾಗಿರಲಿಲ್ಲ. ಅವರಿಗೆ ಅದು ಅಂಗೈಮೇಲಿನ ನೆಲ್ಲಿ ಕಾಯಿಯಂತೆ ಇತ್ತು. ಆ ಪರಾತ್ಪರ ವಸ್ತುವನ್ನು ಅವರು ತಾಯಿ ಎಂದು ಕರೆಯುತ್ತಿದ್ದರು. ಸುತ್ತಲೂ ಅವಳಿರವನ್ನು ಅವಳ ಲೀಲೆಯನ್ನು ನೋಡುತ್ತಿದ್ದರು. ಮಗು ತನ್ನ ಹೆತ್ತ ತಾಯಿಯೊಂದಿಗೆ ಹೇಗೆ ವ್ಯವಹರಿಸುವುದೋ ಹಾಗೆ ಇವರು ತಮ್ಮ ಜಗನ್ಮಯಿಯೊಂದಿಗೆ ವ್ಯವಹರಿಸುತ್ತಿದ್ದರು. ಸಾಧಾರಣ ಜನಕ್ಕೆ ಶ್ರೀರಾಮಕೃಷ್ಣರು ನೋಡುತ್ತಿದ್ದ ಆದಿಶಕ್ತಿ ಕಾಣುತ್ತಿರ ಲಿಲ್ಲ. ಅವರು ಶ್ರೀ ರಾಮಕೃಷ್ಣರನ್ನು ಮಾತ್ರ ನೋಡಬಲ್ಲವ ರಾಗಿದ್ದರು. ತಮ್ಮ ದೃಷ್ಟಿಯಿಂದ ಅವರನ್ನು ಅಳೆದು ಶ್ರೀರಾಮ ಕೃಷ್ಣರನ್ನು ಹುಚ್ಚು ಪೂಜಾರಿಯೆಂದು ಕರೆಯತೊಡಗಿದರು. ಈ ಸುದ್ದಿ ಅಲ್ಲಿಗೆ ಇಲ್ಲಿಗೆ ಹರಡಿ ಕಾಮಾರಪುಕುರದಲ್ಲಿದ್ದ ಇವರ ತಾಯಿ ಚಂದ್ರಮಣಿದೇವಿಗೂ ಮುಟ್ಟಿತು. ಅವರು ತುಂಬಾ ವ್ಯಥೆಪಟ್ಟರು. ಕೆಲವು ನಂಟರನ್ನು ದಕ್ಷಿಣೇಶ್ವರಕ್ಕೆ ಕಳುಹಿಸಿ ಶ್ರೀರಾಮಕೃಷ್ಣರನ್ನು ತಮ್ಮ ಹಳ್ಳಿಗೆ ಕರೆಸಿಕೊಂಡರು. ಶ್ರೀ ರಾಮಕೃಷ್ಣರು ಎಲ್ಲಾ ವಿಧದಲ್ಲಿ ಸರಿಯಾಗಿದ್ದರೂ ಅವರಲ್ಲಿದ್ದ ದೈವಭಕ್ತಿಯನ್ನು ಸಾಧಾರಣ ಜನ ತಿಳಿದುಕೊಳ್ಳುವಂತೆ ಇರ ಲಿಲ್ಲ. ಆಯುರ್ವೇದ ಪಂಡಿತರ ಕೈಯಿಂದ ಲೇಹ ಕಷಾಯ ಗಳನ್ನು ಕೊಡಿಸಿದರು. ಮಂತ್ರವಾದಿಯ ಕೈಯಿಂದ ಮಂತ್ರ ಹಾಕಿಸಿದರು. ಒಬ್ಬ ದೆವ್ವಬರಿಸುವನನ್ನು ಕರೆದು ಅದನ್ನು ಕಣಿಕೇಳಿದರು. ಆ ದೆವ್ವ ಈ ಹುಡುಗನನ್ನು ನೋಡಿ 'ಇದು ಹುಚ್ಚಲ್ಲ, ಭಗವತ್‌ಭಕ್ತಿ' ಎಂದು ಹೇಳಿತು. ಆಂತೂ ಸುತ್ತ

ನೆರೆದವರಿಗೆಲ್ಲ ಒಂದು ಸಮಾಧಾನವಾಯಿತು. ಯಾವ ಚಿಕಿತ್ಸೆಯನ್ನು ಮಾಡಿದರೂ ಶ್ರೀರಾಮಕೃಷ್ಣರ ದೇಹವನ್ನು ಉತ್ತಮಪಡಿಸಿದರೂ ಅವರಿಗೆ ದೇವರ ಮೇಲಿದ್ದ ಪ್ರೇಮಾಧಿಕ್ಯ ಮಾತ್ರ ಬಿಟ್ಟು ಹೋಗಲಿಲ್ಲ. ಆ ಸಮಯದಲ್ಲಿ ಶ್ರೀರಾಮಕೃಷ್ಣರು ಪಂಡಿತನೊಬ್ಬನಿಗೆ 'ನೀನು ಬೇಕಾದರೆ ನನ್ನ ಖಾಯಿಲೆ ಗುಣ ಮಾಡು. ಆದರೆ ನನ್ನ ಭಕ್ತಿ ತಂಟೆಗೆ ಬಂದೀಯೇ' ಎಂದು ಹಾಸ್ಯದಿಂದ ಹೇಳಿದರು. ಆದರೆ ಇಂತಹ ದೇವರ ಹುಚ್ಚು ಯಾವುದೋ ಮೂಲರೋಗದ ಚಿಹ್ನೆ ಇರಬೇಕು. ಅದನ್ನು ವಾಸಿಮಾಡಿದರೆ, ಈ ಚಿಹ್ನೆಯೂ ಹೋಗುವುದು ಎಂದು ತಮಗೆ ತೋಚಿದ ಪ್ರಯೋಗವನ್ನೆಲ್ಲ ಪಂಡಿತರು ಮಾಡುತ್ತಿದ್ದರು.

ಯಂತ್ರ, ತಂತ್ರ, ಮಂತ್ರ, ಮಣಿ ಔಷಧಿಗಳು ಎಲ್ಲವೂ ಶ್ರೀರಾಮಕೃಷ್ಣರ ಮೇಲೆ ನಿಷ್ಪ್ರಯೋಜನವಾದಾಗ ಯಾರೋ ವ್ಯವಹಾರಜ್ಞಾನದಲ್ಲಿ ಚತುರರಾದವರು ಶ್ರೀರಾಮಕೃಷ್ಣರಿಗೆ ಒಂದು ಮದುವೆ ಮಾಡಿಬಿಟ್ಟರೆ ಹುಚ್ಚು ಬಿಟ್ಟುಹೋಗುವುದು ಎಂದು ಹೇಳಿದರು. ಇಂತಹ ದೇವರ ಹುಚ್ಚಿಗೆಲ್ಲ ಹಿಂದಿನಿಂದ ಪರಿಣಾಮಕಾರಿಯಾಗಿ ಬಂದ ಮದ್ದೊಂದೇ. ಅದೇ, ಗಂಡಿಗೆ ಒಂದು ಹೆಣ್ಣು, ಹೆಣ್ಣಿಗೆ ಒಂದು ಗಂಡು. ಆದರೆ ಹುಚ್ಚು ಬಿಟ್ಟ ಹೊರತು ಹೆಣ್ಣು ಕೊಡುವವರಾರು ? ಅಂತೂ ಪ್ರಯತ್ನ ಮಾಡಿನೋಡೋಣ ಎಂದು ಚಂದ್ರಮಣಿ ಮಗನಿಗೆ ಮದುವೆ ಮಾಡಬೇಕೆಂದು ಸೊಸೆಯನ್ನು ಹುಡುಕಲು ನಿರತರಾದರು. ಆದರೆ ಶ್ರೀರಾಮಕೃಷ್ಣರಿಗೆ ಈ ಸುದ್ದಿಯನ್ನು ಮೊದಲು ಕೊಡಲಿಲ್ಲ. ಎಲ್ಲಿ ಮದುವೆ ಎಂಬ ಸುದ್ದಿ ಗೊತ್ತಾದರೆ ಅವರು ಮನೆ ಬಿಟ್ಟು ಓಡಿ ಹೋಗುವರೋ ಎಂದು. ತಾಯಿ ಹೆಣ್ಣಿಗೆ

ಹುಡುಕಿ ನಿರಾಶರಾಗಿ ವ್ಯಥೆಯಿಂದ ಕುಳಿತುಕೊಂಡಿದ್ದರು. ಶ್ರೀರಾಮಕೃಷ್ಣರೇ ತಾಯಿಯನ್ನು ಅವರ ವ್ಯಥೆಗೆ ಕಾರಣವೇನು ಎಂದು ಕೇಳಿದರು. ಅವರು ಆಗ ವಿಧಿಯಿಲ್ಲದೆ ಹೇಳಬೇಕಾಯಿತು. ಆಗ ಶ್ರೀರಾಮಕೃಷ್ಣರು ಓಡಿಹೋಗಲು ಯತ್ನಿಸಲಿಲ್ಲ. ತಾಯಿಗೆ ಸಮಾಧಾನ ಬರುವಂತೆಯೇ ಮಾತನಾಡಿದರು. ನನಗೆ ಮದುವೆ ಮಾಡಬೇಕೆಂದು ನೀನು ಇಚ್ಛಿಸಿದರೆ ಹೆಣ್ಣಿಗೆ ಅಲ್ಲಿ ಇಲ್ಲಿ ಅಲೆದಾಡಿದರೆ ಸಿಕ್ಕುವುದೇ ? ಜಯರಾಮವಟಿಯಲ್ಲಿ ರಾಮಚಂದ್ರಮುಖ್ಯೋಪಾಧ್ಯಾಯರ ಮನೆಯಲ್ಲಿ ವಿಚಾರಿಸಿ ಎಂದರು. ತಾಯಿಗೆ ಹುಡುಗನ ಮಾತಿನಲ್ಲಿ ನಂಬಿಕೆ ಬರಲಿಲ್ಲ. ಆದರೆ ಪರೀಕ್ಷೆಮಾಡಿ ನೋಡೋಣ ಎಂದು ಅವರ ಮನೆಯಲ್ಲಿ ವಿಚಾರಿಸಿದರು. ಅವರ ಮನೆಯಲ್ಲಿ ಒಂದು ಹೆಣ್ಣು ಇತ್ತು. ಅದಕ್ಕೆ ಆಗ ಐದು ವರುಷ. ಹೆಣ್ಣನ್ನು ಕೊಡಲು ಒಪ್ಪಿದರು. ಆದರೆ ಶ್ರೀರಾಮಕೃಷ್ಣರಿಗೆ ಆಗ ಇಪ್ಪತ್ತಮೂರು ವಯಸ್ಸು. ಶ್ರೀರಾಮಕೃಷ್ಣರ ದೈವೋನ್ಮಾದವನ್ನು ತಗ್ಗಿಸಲು ಈ ಹೆಣ್ಣು ಸಾಕೆ ಎಂದು ಯೋಚಿಸಿದರು. ಆದರೆ ಬೇರೆ ಯಾವುದೂ ಇಲ್ಲದೇ ಇರುವಾಗ ಸಿಕ್ಕಿದುದರಲ್ಲೆ ತೃಪ್ತರಾದರು. ಹೆಣ್ಣು ಎಂಬ ಒಂದು ವಸ್ತು ಗಂಡಿಗೆ ಸಿಕ್ಕಿದರೆ ಸಾಕು, ಕ್ರಮೇಣ ದೇವರ ಹುಚ್ಚು ಮಾಯವಾಗಿ ಹೆಣ್ಣಿನ ಹುಚ್ಚು ಪ್ರಾರಂಭವಾಗುವುದು ಎಂದು ಆಶಿಸಿದರು.

ಮದುವೆ ನಿಷ್ಕರ್ಷೆ ಆಯಿತು. ಜಯರಾಮವಟಿಯಲ್ಲೆ ಆಯಿತು. ಶ್ರೀರಾಮಕೃಷ್ಣರು ಆ ಸಮಯದಲ್ಲಿ ತಾಯಿಯೊಂದಿಗೆ ಹೋಗಿದ್ದರು. ತಾಯಿಗೆ ಮದುವೆ ಸಮಯದಲ್ಲಿ ಸೊಸೆಗೆ ಚೆನ್ನಾಗಿ ಅಲಂಕಾರ ಮಾಡಿ ಧಾರೆ ಎರೆಸಿಕೊಳ್ಳಬೇಕೆಂದು ಆಸೆ. ಅದಕ್ಕಾಗಿ ಅವರಿಗೆ ಪರಿಚಿತರಾದ ಲಾಹ ಮನೆತನದಿಂದ ಕೆಲವು

ಒಡವೆಗಳನ್ನು ಎರವಲಾಗಿ ತೆಗೆದುಕೊಂಡು ಹೋದರು. ಮದುವೆಯೆಲ್ಲ ಆದಮೇಲೆ ಪದ್ಧತಿಯಂತೆ ಹೆಣ್ಣನ್ನು ಗಂಡನ ಮನೆಗೆ ಕರೆದುಕೊಂಡು ಹೋಗಲು ಅಣಿಯಾದರು. ಆಗ ಚಂದ್ರಮಣಿ ಶಾರದೆಯ ಮೇಲೆ ಹಾಕಿದ್ದ ಒಡವೆಗಳನ್ನು ಹಿಂತಿರುಗಿ ಕೊಡಬೇಕೆಂದು ಕೇಳಿದರು. ಆದರೆ ಶಾರದಾದೇವಿ ಕೊಡಲಿಲ್ಲ. ಮದುವೆ ಸಮಯದಲ್ಲಿ ಗಂಡನ ಕಡೆಯುವರು ತನ್ನ ಮೈಮೇಲೆ ಹಾಕಿದ ಒಡವೆಗಳೆಲ್ಲ ತನಗೇ ಸೇರಿದವು ಎಂದು ಅವರು ಭಾವಿಸಿದರು. ಚಂದ್ರಮಣಿ ಈಗ ಧರ್ಮಸಂಕಟಕ್ಕೆ ಸಿಕ್ಕಿಕೊಂಡರು. ಯಾರ ಮನೆಯಿಂದ ಒಡವೆ ತಂದಿದ್ದರೊ ಅವರಿಗೆ ಸಕಾಲದಲ್ಲಿ ಕೊಡದೆ ಇದ್ದರೆ ಅವರು ಏನಾದರೂ ಭಾವಿಸಬಹುದು. ಅವರಿಗೆ ಕೊಡಬೇಕೆಂದು ಶಾರದಾದೇವಿಯನ್ನು ಕೇಳಿದರೆ ಅವರು ಕೊಡುವುದಕ್ಕೆ ಒಪ್ಪುವುದಿಲ್ಲ. ಈಗ ಏನು ಮಾಡಬೇಕೆಂದು ಶ್ರೀರಾಮಕೃಷ್ಣರಿಗೆ ಹೇಳಿದರು. ಆಗ ಶ್ರೀರಾಮಕೃಷ್ಣರು ತಾಯಿಗೆ, "ರಾತ್ರಿ ಆಗಲಿ. ನಾನು ಅದನ್ನೆಲ್ಲ ತೆಗೆದುಕೊಡುತ್ತೇನೆ" ಎಂದು ಸಮಾಧಾನ ಮಾಡಿದರು. ರಾತ್ರಿ ಆಯಿತು. ಶಾರದಾದೇವಿ ಎಳೆಯ ಹಸುಳೆಯಂತೆ ಮಲಗಿರುವರು. ಅವರ ಪಕ್ಕದಲ್ಲೇ ದೊಡ್ಡ ಚೋರ ನಿಂತಿರುವನೆಂದು ಅವರಿಗೆ ಹೇಗೆ ಗೊತ್ತಾಗಬೇಕು. ಶ್ರೀರಾಮಕೃಷ್ಣರು ಶಾರದಾದೇವಿಗೆ ಸ್ವಲ್ಪವೂ ಎಚ್ಚರವಾಗದಂತೆ ನಗಗಳನ್ನೆಲ್ಲಾ ಬಿಡಿಸಿ ತಾಯಿಗೆ ಕೊಟ್ಟುಬಿಟ್ಟರು. ತಂದವರ ಮನೆಗೆ ತಲುಪಿಸಿಬಿಡು ಎಂದರು. ಬೆಳಿಗ್ಗೆ ಎದ್ದಾಗ ಶಾರದಾದೇವಿ ಮೈಮೇಲೆ ನೋಡಿಕೊಂಡರು. ಒಡವೆಗಳೆಲ್ಲ ಮಾಯವಾಗಿದ್ದವು. ಕಂಬನಿ ಕರೆದು ಅಳಲು ಮೊದಲುಮಾಡಿದರು. ಚಂದ್ರಮಣಿ ತನ್ನ ಮುದ್ದು ಸೊಸೆಯನ್ನು ಎತ್ತಿಕೊಂಡು ಕಣ್ಣೊರಸಿ ಸಮಾಧಾನ ಮಾಡಿದರು. ನೀನು ದೊಡ್ಡವಳಾದ

ಮೇಲೆ ನನ್ನ ಮಗ ಬೇಕಾದಷ್ಟು ಆಭರಣಗಳನ್ನು ಮಾಡಿಸಿ ಹಾಕುವನು ಎಂಬ ಆಸೆಯನ್ನು ಹುಟ್ಟಿಸಿದರು. ಮಗು ಸಮಾಧಾನವಾಯಿತು. ಆದರೆ ಅವರೊಡನೆ ಬಂದ ನೆಂಟರಿಷ್ಟರಿಗೆಲ್ಲ ಇದು ತಿಳಿಯಿತು. ಧಾರೆ ಸಮಯದಲ್ಲಿ ಹೆಣ್ಣಿನ ಮೇಲೆ ಹಾಕಿದ್ದ ಒಡವೆ ನಿಜವಾಗಿ ಗಂಡಿನ ಕಡೆಯುವರು ಹುಡುಗಿಗೇ ಕೊಟ್ಟಿದ್ದರು ಎಂದು ಅವರು ಭಾವಿಸಿದ್ದರು. ಆದರೆ ಒಡವೆಗಳೆಲ್ಲ ಹೊರಟುಹೋದ ಮೇಲೆ ಕೋಪದಿಂದ ಆ ಹುಡುಗಿಯ ಸೋದರ ಮಾವ ಅವಳನ್ನು ಎತ್ತಿಕೊಂಡು ಜಯರಾಮವಟಿಗೆ ಹೊರಟು ಹೋದ. ಮದುವೆ ಇಂತಹ ವ್ಯಾಜ್ಯದಲ್ಲಿ ಕೊನೆಗಂಡಿತಲ್ಲ ಎಂದು ಚಂದ್ರಮಣಿಗೆ ದುಃಖವಾಯಿತು. ಆಗ ಶ್ರೀರಾಮಕೃಷ್ಣರು ಹಾಸ್ಯವಾಗಿ ತಾಯಿಗೆ, "ಹೆಣ್ಣನ್ನು ಕರೆದುಕೊಂಡು ಹೋದರೆ ಏನು ? ಆಗಿರುವ ಮದುವೆಯನ್ನು ರದ್ದುಮಾಡಲಾಗುವುದೆ ?" ಎಂದರು.

ಮದುವೆಯಾದ ಮೇಲೆ ಶ್ರೀರಾಮಕೃಷ್ಣರು ಸುಮಾರು ಒಂದು ವರುಷದವರೆಗೆ ಕಾಮಾರಪುಕುರದಲ್ಲಿ ಇದ್ದರು. ಪದ್ಧತಿಯ ಮೇಲೆ ಅವರು ಆ ಸಮಯದಲ್ಲಿ ಒಂದು ಸಲ ಮಾವನ ಮನೆಗೂ ಹೋಗಿ ಬಂದರಂತೆ. ಹೆಣ್ಣಿನ ಕಡೆಯವರು ಒಡವೆಯ ಪ್ರಸಂಗವನ್ನು ಮರೆತಿದ್ದರು ಎಂದು ಕಾಣುವುದು. ಪುಟ್ಟ ಶಾರದಾದೇವಿ ಒಳಗಿನಿಂದ ಬಂದು ಕುಳಿತ ಶ್ರೀರಾಮಕೃಷ್ಣರಿಗೆ ನಮಸ್ಕಾರಮಾಡಿ ಬೀಸಣಿಗೆಯಿಂದ ಗಾಳಿಯನ್ನು ಬೀಸಿದರಂತೆ. ಸುತ್ತಲಿದ್ದವರಿಗೆ ಆನಂದ. ಆ ಪುಟ್ಟ ಹುಡುಗಿಯಲ್ಲಾಗಲೇ ಹೇಗೆ ಪತಿಪ್ರೇಮ ಅಂಕುರಿಸಿದೆ ಎಂದು ಶ್ರೀರಾಮಕೃಷ್ಣರ ನಂಟರಿಷ್ಟರೂ ಸಮಾಧಾನಪಟ್ಟಿರಬಹುದು. ಅವರೂ ಕಾಲಕ್ರಮೇಣ ತಮ್ಮ ಗುಂಪಿಗೇ ಇಳಿದು ಬರುವರೆಂದು.

ಶ್ರೀರಾಮಕೃಷ್ಣರು ದಕ್ಷಿಣೇಶ್ವರಕ್ಕೆ ಹೊರಟರು. ಅಲ್ಲಿ ಪುನಃ ಪ್ರಚಂಡ ಆಧ್ಯಾತ್ಮಿಕ ಸಾಧನೆ ಪ್ರಾರಂಭವಾಯಿತು. ಕೆಲವು ಕಾಲದ ಮೇಲೆ ತೋತಾಪುರಿಯಿಂದ ಸಂನ್ಯಾಸದೀಕ್ಷೆ ಪಡೆದು ಅದ್ವೈತ ಸಾಧನೆಯಲ್ಲಿ ಮುಳುಗಿ ನಿರ್ವಿಕಲ್ಪ ಸಮಾಧಿಯಲ್ಲಿ ಸುಮಾರು ಆರುತಿಂಗಳು ಇದ್ದರು. ಅವರ ದೇಹ ಒಂದು ವಿಗ್ರಹದಂತೆ ಇತ್ತು. ನಿದ್ರಾಹಾರಗಳ ಪರಿವೆಯೇ ಇರಲಿಲ್ಲ. ತಲೆಯ ಮೇಲೆ ಹಕ್ಕಿಗಳು ಒಂದು ಗೂಡನ್ನು ಕಟ್ಟುತ್ತಿದ್ದವಂತೆ. ಇಂತಹ ಸ್ಥಿತಿಯಲ್ಲಿ ಅವರು ಕೈಹಿಡಿದ ಶಾರದೆಯ ನೆನಪು ಕೂಡ ಇರಲಾರದೆಂದು ಭಾವಿಸ ಬಹುದು.

ಶ್ರೀರಾಮಕೃಷ್ಣರ ದೇವರ ಹುಚ್ಚನ್ನು ಬಿಡಿಸಲು ಕಟ್ಟಿದ ಯಂತ್ರ ಶಾರದಾದೇವಿ ಎಂದು ಹೇಳುವರು. ಆದರೆ ಆ ಯಂತ್ರಕ್ಕೇ ಶ್ರೀರಾಮಕೃಷ್ಣರ ದೇವರ ಹುಚ್ಚು ಪ್ರವೇಶಿಸಿ ಅದರಿಂದ ಏನೂ ಪ್ರಯೋಜನವಾಗದಂತೆ ಮಾಡಿತು.

೨. ಪತಿಯೊಡನೆ

ಶ್ರೀಶಾರದಾದೇವಿಯವರಿಗೆ ಹದಿನಾಲ್ಕು ವರುಷಗಳಾ ದಾಗ ಶ್ರೀರಾಮಕೃಷ್ಣರು ಒಂದು ಸಲ ಕಾಮಾರಪುಕುರಕ್ಕೆ ಬಂದಿದ್ದರು. ಜಯರಾಮವಟಿಯಿಂದ ಶ್ರೀಶಾರದಾದೇವಿ ಯವರೂ ಕಾಮಾರಪುಕುರಕ್ಕೆ ಬಂದು ಶ್ರೀರಾಮಕೃಷ್ಣರೊಡನೆ ಕೆಲವು ದಿನಗಳಿದ್ದರು. ಆ ಸಮಯದಲ್ಲಿ ಶ್ರೀರಾಮಕೃಷ್ಣರೊಡನೆ, ಅವರಿಗೆ ತಾಂತ್ರಿಕ ಮತ್ತು ವೈಷ್ಣವ ಸಾಧನೆಗಳಲ್ಲಿ ಸಹಾಯ ಮಾಡಿದ ಭೈರವಿ ಬ್ರಾಹ್ಮಣಿ ಎಂಬ ಸಂನ್ಯಾಸಿನಿಯೂ ಬಂದಿದ್ದಳು. ಶ್ರೀರಾಮಕೃಷ್ಣರು ಆಕೆಯನ್ನು ಗೌರವದಿಂದ ತಾಯಿ ಎಂದು

ಕರೆಯುತ್ತಿದ್ದರು. ಆಕೆ ಪೂರ್ವಬಂಗಾಳ ಕಡೆಯಿಂದ ಬಂದವಳು. ಪಲ್ಯಕ್ಕೆ ಚೆನ್ನಾಗಿ ಖಾರ ಹಾಕಿ ತೆಗೆದುಕೊಳ್ಳುವುದು ವಾಡಿಕೆ. ಹಾಗೆ ಪಲ್ಯವನ್ನು ಮಾಡಿದಾಗ ಶಾರದಾದೇವಿಯವರನ್ನು ಕರೆದು ಅವರಿಗೂ ರುಚಿ ನೋಡುವುದಕ್ಕೆ ಅದನ್ನು ಕೊಡುತ್ತಿದ್ದರು. ತಿನ್ನುವ ಸಮಯದಲ್ಲಿ ಬಾಯಿಯ ಖಾರದಿಂದ ಕಣ್ಣಿನಲ್ಲಿ ನೀರು ಸೋರುತ್ತಿದ್ದರೂ ಹೇಗೆ ಇದೆ ಎಂದು ಕೇಳಿದರೆ ತುಂಬಾ ಚೆನ್ನಾಗಿದೆ ಎಂದು ಹೇಳುತ್ತಿದ್ದರು. ಯಾರನ್ನು ಶ್ರೀರಾಮ ಕೃಷ್ಣರು ತಾಯಿ ಎಂದು ಕರೆಯುತ್ತಿದ್ದರೊ, ಅವರನ್ನು ಶ್ರೀಶಾರದಾದೇವಿಯವರು ಅತ್ತೆಯಂತೆ ಗೌರವದಿಂದ ಕಾಣು ತ್ತಿದ್ದರು. ಯಾವ ವಿಧದಲ್ಲಿಯೂ ಅವರಿಗೆ ಅಗೌರವವನ್ನು ತೋರುತ್ತಿರಲಿಲ್ಲ.

ಆ ಸಮಯಲ್ಲಿಯೇ ಶ್ರೀರಾಮಕೃಷ್ಣರು ಶಾರದಾದೇವಿ ಯವರಿಗೆ ಭಗವತ್ ಭಕ್ತಿ ವೈರಾಗ್ಯ ಮುಂತಾದುವುಗಳನ್ನು ಬೋಧಿಸಿದರು. ದೇವರ ವಿಷಯವಾಗಿ ಮಾತನಾಡುತ್ತ, ಎಲ್ಲಾ ಹುಡುಗರು ಚಂದ್ರನನ್ನು ತಮ್ಮ ಮಾವ ಎಂದು ಕರೆಯುತ್ತವೆ. ಅದರಂತೆಯೇ ದೇವರು ಎಲ್ಲರಿಗೂ ಬೇಕಾದವನು. ಅವನನ್ನು ಹೃತ್ಪೂರ್ವಕ ಪ್ರೀತಿಸಿ ಕರೆದರೆ ಅವನು ಬಾರದಿರನು ಎಂದು ಬೋಧಿಸಿದರು. ಶ್ರೀಶಾರದಾದೇವಿಯವರಿಗೆ ಪತಿಯ ಅಲೌಕಿಕ ಪ್ರೀತಿಯ ಪರಿಚಯವಾಯಿತು. ಅನಂತರ ಅವರೇ ಹೇಳು ತ್ತಿದ್ದರು ; ಕಾಮಾರಪುಕುರದಲ್ಲಿ ಶ್ರೀರಾಮಕೃಷ್ಣರ ಸಾನ್ನಿಧ್ಯ ದಲ್ಲಿ ಇರುವ ಪರಿಯಂತರ ಮನಸ್ಸು ಯಾವುದೋ ಇಂದ್ರಿಯಾ ತೀತ ಆನಂದದಲ್ಲಿ ತಲ್ಲೀನವಾಗಿತ್ತು ಎಂದು.

ಶ್ರೀರಾಮಕೃಷ್ಣರು ಕೆಲವು ಕಾಲದ ಮೇಲೆ ದಕ್ಷಿಣೇಶ್ವರಕ್ಕೆ ಹೊರಟುಹೋದರು. ಜಯರಾಮವಟಿಯಲ್ಲಿ ಶಾರದಾದೇವಿ

ಯವರ ತಂದೆ ತಾಯಿಗಳು ತಮ್ಮ ಅಳಿಯ ಬಂದು ಮಗಳನ್ನು ಕರೆದುಕೊಂಡು ಹೋಗುವನು ಎಂದು ಭಾವಿಸಿದ್ದರು. ಆದರೆ ಅವರ ಸುದ್ದಿಯೇ ಇಲ್ಲ. ಶ್ರೀಶಾರದಾದೇವಿಗೆ ಹದಿನಾರು ವರುಷವಾಗುವವರೆಗೆ ಕಾದರು. ಆದರೆ ಶ್ರೀರಾಮಕೃಷ್ಣರು ಬಂದು ಕರೆದುಕೊಂಡು ಹೋಗುವ ಚಿಹ್ನೆಯೇ ಇಲ್ಲ. ಅದರ ಬದಲು ಅವರ ವಿಷಯವಾಗಿ ಪುನಃ ಅವರು ಹುಚ್ಚರಾಗಿ ಹೋಗಿರುವರು ಎಂಬ ವದಂತಿ ಹರಡಿತು. ಶ್ರೀಶಾರದಾದೇವಿಯವರ ಹೃದಯ ತಲ್ಲಣಿಸಿತು ಈ ಸುದ್ದಿಯನ್ನು ಕೇಳಿದಾಗ. ಎರಡು ವರುಷಗಳ ಹಿಂದೆ ಅವರಿಗೆ ಶ್ರೀರಾಮಕೃಷ್ಣರು ಕಾಮಾರಪುಕುರಕ್ಕೆ ಬಂದಾಗ ಎಂತಹ ಪ್ರೀತಿಯನ್ನು ತೋರಿಸಿದ್ದರು ಎಂಬುದನ್ನು ಮರೆಯುವಂತೆ ಇರಲಿಲ್ಲ. ಈಗ ನಿಜವಾಗಿಯೂ ಅವರು ಹುಚ್ಚರಾಗಿ ಹೋಗಿರುವರೆ? ಹಾಗೆ ಏನಾದರೂ ಇದ್ದರೆ ಅವರ ಸಮೀಪದಲ್ಲಿದ್ದು ಅವರಿಗೆ ಶುಶ್ರೂಷೆ ಮಾಡಿ ಅವರನ್ನು ಸ್ಥಿಮಿತಕ್ಕೆ ತರುವುದು ತಮ್ಮ ಕರ್ತವ್ಯ ಎಂದು ಭಾವಿಸಿದರು. ಆದರೆ ಅವರು ಒಬ್ಬರೇ ಹೇಗೆ ಹೋಗುವುದು. ಆಗ ಬಸ್ಸು ಮೊದಲಾದುವು ಇರಲಿಲ್ಲ. ಗಾಡಿಯ ರಸ್ತೆಯೇ ಇರಲಿಲ್ಲ. ಅಲ್ಲಿಂದ ಕಲ್ಕತ್ತೆಗೆ ಕಾಲುದಾರಿಯೊಂದೇ ಇದ್ದದ್ದು. ಹೋಗಬೇಕಾದರೆ ಯಾರಾದರೂ ದೊಡ್ಡವರೊಡನೆ ಹೋಗಬೇಕಾಗಿತ್ತು. ಹಾಗೆ ಹೋಗುವುದಕ್ಕೆ ಒಂದು ಅವಕಾಶಕ್ಕಾಗಿ ಕಾಯುತ್ತಿದ್ದರು. ಅಂತಹ ಒಂದು ಅವಕಾಶ ಕೆಲವು ದಿನಗಳಲ್ಲಿ ಒದಗಿತು. ಜಯರಾಮವಟಿಯಿಂದ ಚೈತನ್ಯ ಪೂರ್ಣಿಮೆಯ ಸಮಯದಲ್ಲಿ ಗಂಗಾನದಿಯ ಸ್ನಾನಕ್ಕೆಂದು ಕೆಲವು ಜನ ಹೊರಟರು. ಶ್ರೀಶಾರದಾದೇವಿಯವರು ತಮ್ಮ ತಂದೆಗೆ ತಾವೂ ಗಂಗಾತೀರಕ್ಕೆ ಹೋದರೆ ಅಲ್ಲಿ

ಶ್ರೀರಾಮಕೃಷ್ಣರ ದರ್ಶನ ಆಗಬಹುದೆಂಬುದನ್ನು ಸೂಚಿಸಿದರು. ಶ್ರೀಶಾರದಾದೇವಿಯವರ ತಂದೆಯೂ ಮಗಳೊಡನೆ ಹೋಗಿ ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರು ಒಪ್ಪಿದರೆ ತಮ್ಮ ಮಗಳನ್ನು ಅಲ್ಲಿಯೇ ಬಿಟ್ಟುಬರಬೇಕೆಂದು ಮನಸ್ಸು ಮಾಡಿ ಇತರ ಯಾತ್ರಿಕರೊಡನೆ ಅವರೂ ಬೆರೆತರು.

ಶ್ರೀಶಾರದಾದೇವಿಯವರಿಗೆ ಮನೆಯನ್ನು ಬಿಡುವಾಗ ಒಂದು ಅಂಜಿಕೆ ಬಾಧಿಸುತ್ತಿತ್ತು. ಅದೇ ಶ್ರೀರಾಮಕೃಷ್ಣರು ತಮ್ಮನ್ನು ಸ್ವೀಕರಿಸುವರೋ ಇಲ್ಲವೋ ಎಂಬುದು. ಆಧ್ಯಾತ್ಮಿಕ ಜೀವನದಲ್ಲಿ ನಡೆಯುವವರೆಲ್ಲ ಏಕಾಂಗಿಗಳು. ಯಾರೂ ಹೆಂಡತಿಯನ್ನು ಕಟ್ಟಿಕೊಂಡು ಹೋದವರಲ್ಲ. ಮದುವೆಯಾಗದವರೆ ಬಹಳ ಮಂದಿ. ಉಳಿದ ಕೆಲವರು ಮೊದಲು ಮದುವೆಯಾಗಿದ್ದರೂ ಅನಂತರ ಸತಿಯನ್ನು ತ್ಯಜಿಸಿ ಹೊರಟುಹೋಗಿರುವರು. ಇಂತಹ ಗುಂಪಿಗೆ ಸೇರಿದ ಶ್ರೀರಾಮಕೃಷ್ಣರು ತಮ್ಮ ಸತಿಯನ್ನು ಯಾವ ದೃಷ್ಟಿಯಿಂದ ನೋಡುವರೋ ಎಂಬ ಕಳವಳ, ಅಂತೂ ಏನಾದರೂ ಆಗಲಿ, ಸ್ವೀಕರಿಸಲಿ, ತಿರಸ್ಕರಿಸಲಿ ತಾವು ಮಾತ್ರ ಪತಿಯ ಸನ್ನಿಧಿಯನ್ನು ಬಿಟ್ಟು ಹೋಗುವುದಿಲ್ಲ ಎಂದು ಸಂಕಲ್ಪಿಸಿಕೊಂಡರು. ಜಯರಾಮವಟಿಯಿಂದ ದಕ್ಷಿಣೇಶ್ವರಕ್ಕೆ ನಡೆದುಕೊಂಡು ಹೋಗಲು ಮೂರು ದಿನಗಳು ಹಿಡಿಯುವುವು. ಶ್ರೀಶಾರದಾದೇವಿಯವರು ಎರಡು ದಿನಗಳು ನಡೆದರು. ಬಾಲ್ಯಾರಭ್ಯದಿಂದಲೂ ಅವರಿಗೆ ಅಷ್ಟು ದೂರ ನಡೆದು ಅಭ್ಯಾಸವಿರಲಿಲ್ಲ. ಎರಡು ದಿನಗಳು ನಡೆದು ಸಾಕಾಗಿ ಅಂದಿನ ರಾತ್ರಿ ಜ್ವರದಿಂದ ನರಳುತ್ತ ಪ್ರಜ್ಞೆತಪ್ಪಿದರು. ಆ ಸಮಯದಲ್ಲಿ ಶ್ರೀಶಾರದಾದೇವಿಯವರಿಗೆ ಒಂದು ಕನಸಾಯಿತು. ಒಬ್ಬ ಕಪ್ಪಾದ ಆದರೆ ಬಹಳ ಸುಂದರಳಾದ ತೇಜಸ್ವಿನಿಯಾದ ಸ್ತ್ರೀಯೊಬ್ಬಳು ಇವರ

ಪಕ್ಕದಲ್ಲಿ ಕುಳಿತುಕೊಂಡು ಇವರ ಮೈದಡವಲು ಮೊದಲು ಮಾಡಿದರು. ಶ್ರೀಶಾರದಾದೇವಿಯವರು ಆಕೆಯನ್ನು ಎಲ್ಲಿಂದ ಬಂದೆ ಎಂದು ಕೇಳಿದರು. ಅದಕ್ಕೆ ಆಕೆ ತಾನು ದಕ್ಷಿಣೇಶ್ವರದಿಂದ ಬಂದೆ ಎಂದು ಉತ್ತರಕೊಟ್ಟಳು. ಶ್ರೀಶಾರದಾದೇವಿಯವರು, ತಾವೂ ಕೂಡ ಅಲ್ಲಿಗೆ ಹೊರಟಿರುವುದಾಗಿ ಹೇಳಿದರು. ಆದರೆ ಈಗ ಜ್ವರದಿಂದ ನಿಶ್ಯಕ್ತಳಾಗಿರುವೆ ಎಂದರು. ಅದಕ್ಕೆ ಆಕೆ ಬೆಳಿಗ್ಗೆಹೊತ್ತಿಗೆ ಶ್ರೀಶಾರದಾದೇವಿಯವರು ಆರೋಗ್ಯವಾಗುವ ರೆಂದು ಭರವಸೆಕೊಟ್ಟಳು. ಶ್ರೀಶಾರದಾದೇವಿ, ಆಕೆಯನ್ನು ತನಗೆ ಇಷ್ಟೊಂದು ಪ್ರೀತಿಯನ್ನು ತೋರಿಸುತ್ತಿರುವವರು ಯಾರು ಎಂದು ಕೇಳಿದರು. ಆಕೆ ತಾನು ಶ್ರೀಶಾರದಾದೇವಿ ಯವರ ಅಕ್ಕನೆಂದೂ, ಶ್ರೀರಾಮಕೃಷ್ಣರನ್ನು ಅವರಿಗಾಗಿ ದಕ್ಷಿಣೇ ಶ್ವರದಲ್ಲಿಟ್ಟಿರುವೆ ಎಂದು ಹೇಳಿದಂತೆ ಆಗಿ ಆ ವ್ಯಕ್ತಿ ಮಾಯ ವಾಯಿತು. ಶಾರದಾದೇವಿಗೆ ನಿದ್ರೆ ಭಂಗವಾದಮೇಲೆ ಗೊತ್ತಾ ಯಿತು ತಮಗಾಗಿದ್ದು ಒಂದು ಕನಸು ಎಂದು. ಅದು ಕನಸಾ ದರೂ ಒಳ್ಳೆಯ ಕನಸು, ಇವರ ಕಳವಳವನ್ನೆಲ್ಲ ಕೊನೆಮಾಡಿದ ಕನಸಾಗಿತ್ತು. ಇವರ ದುಗುಡ ಮಾಯವಾಗಿತ್ತು. ಜ್ವರ ನಿಂತಿತ್ತು. ಸ್ವಲ್ಪ ಹೊತ್ತಾದ ಮೇಲೆ ತಂದೆ ಮಗಳು ಇಬ್ಬರೂ ನಡೆದುಕೊಂಡು ರಾತ್ರಿ ಸುಮಾರು ಹತ್ತುಗಂಟೆಯ ಹೊತ್ತಿಗೆ ದಕ್ಷಿಣೇಶ್ವರವನ್ನು ತಲುಪಿದರು. ಶ್ರೀರಾಮಕೃಷ್ಣರು ಶಾರದಾ ದೇವಿಯವರನ್ನು ಕಂಡೊಡನೆಯೇ ಗುರುತು ಹಿಡಿದರು. ಇವರೇ ತಾವು ಕೈಹಿಡಿದ ಹುಡುಗಿ ಮತ್ತು ಇವರ ಪಕ್ಕದಲ್ಲೇ ನಿಂತ ಪುರುಷನೇ ಇವರ ಮಾವ ಎಂದು. ಊಟವೆಲ್ಲ ಆಗಿಹೋಗಿತ್ತು. ಆ ಸಮಯದಲ್ಲಿ ಸ್ವಲ್ಪ ಅರಳನ್ನು ತಿನ್ನಲು ಕೊಟ್ಟರು. ರಾತ್ರಿ ಅವರ ಕೋಣೆಯ ಸಮೀಪದಲ್ಲಿಯೇ ಇಬ್ಬರೂ ಮಲಗಿದ್ದರು.

ಬೆಳಿಗ್ಗೆ ಒಬ್ಬ ಪಂಡಿತರನ್ನು ಕರೆಸಿ ಶ್ರೀಶಾರದಾದೇವಿಗೆ ಔಷ ದೋಪಚಾರ ಮಾಡಿದರು. ಮಾವನನ್ನು ಪ್ರೀತಿಯಿಂದ ನೋಡಿ ಕೊಂಡರು. ಮಾವನು ಅಳಿಯ ಹುಚ್ಚನಾಗಿಹೋಗಿರುವನು, ಎಂದು ಏನೇನೋ ಸುದ್ದಿಯನ್ನು ಕೇಳಿದ್ದ. ಆದರೆ ತಮ್ಮ ಕಣ್ಣಿ ನಿಂದಲೇ ಅಳಿಯನ ವ್ಯವಹಾರವನ್ನು ನೋಡಿದಾಗ ಅವರ ಕಲ್ಪನೆಯೆಲ್ಲ ಪಲಾಯನವಾಯಿತು. ಸುಮಾರು ಮೂರು ದಿನ ಗಳ ತನಕ ಇದ್ದು ಅಳಿಯ ಮಗಳನ್ನು ಆಶೀರ್ವದಿಸಿ ಜಯ ರಾಮವಟಿಗೆ ಹಿಂತಿರಳಿದರು.

ಶ್ರೀರಾಮಕೃಷ್ಣರು ಶ್ರೀಶಾರದಾದೇವಿಯವರಿಗೆ, ತಮಗೆ ಪ್ರತಿಯೊಬ್ಬ ಸ್ತ್ರೀಯರಲ್ಲಿಯೂ ಜಗನ್ಮಾತೆಯನ್ನು ಮಾತ್ರ ನೋಡುವುದಕ್ಕೆ ಸಾಧ್ಯವೆಂದರು. ಆದರೆ ಶ್ರೀಶಾರದಾದೇವಿಯವರು ಅವರನ್ನು ಮದುವೆಮಾಡಿಕೊಂಡಿರುವುದರಿಂದ ಅವರಿಗೆ ವಿರೋಧ ವಾಗಿ ತಾವು ಸಂಯಮ ಜೀವನ ನಡೆಸುವುದಕ್ಕೆ ಇಚ್ಛೆ ಇಲ್ಲವೆಂದು ಸಾಂಸಾರಿಕ ಮತ್ತು ಭಗವತ್‌ಪ್ರೇಮ ಎರಡನ್ನೂ ಅವರ ಮುಂದೆ ಇಟ್ಟು ಸತಿ ಯಾವುದನ್ನು ಕೇಳಿದರೆ ಅದನ್ನು ಕೊಡಲು ಸಿದ್ಧ ವಾಗಿದ್ದರು. ಆದರೆ ಶ್ರೀಶಾರದಾದೇವಿ ಪತಿಗೆ ತಕ್ಕ ಸತಿ. ಅವರು ಶ್ರೀರಾಮಕೃಷ್ಣರನ್ನು ಇಂದ್ರಿಯ ಪಂಕಕ್ಕೆ ಸಿಲುಕಿಸದೆ, ತಮ್ಮನ್ನು ಆ ಉತ್ತಮ ಜೀವನದ ಶಿಖರಕ್ಕೆ ಒಯ್ಯಿರಿ ಎಂದು ಹೇಳಿದರು. ಶ್ರೀರಾಮಕೃಷ್ಣರಿಗೆ ಈ ಮಾತನ್ನು ಕೇಳಿದಾಗ ಪರಮಾನಂದವಾಯಿತು. ಶ್ರೀಶಾರದಾದೇವಿಯವರನ್ನು ಮೆಟ್ಟಿಲ ಮೆಟ್ಟಿಲಾಗಿ ಆಧ್ಯಾತ್ಮಿಕಜೀವನದಲ್ಲಿ ನಡೆಸಿಕೊಂಡು ಹೋಗಿ ನಿರ್ವಿಕಲ್ಪ ಸಮಾಧಿಯವರೆಗೂ ಕೊಂಡೊಯ್ದರು.

ಒಂದು ದಿನ ಶ್ರೀಶಾರದಾದೇವಿ ಶ್ರೀರಾಮಕೃಷ್ಣರ ಕಾಲು ಗಳನ್ನು ಒತ್ತುತ್ತಿದ್ದರು. ಆ ಸಮಯದಲ್ಲಿ ಶ್ರೀಶಾರದಾದೇವಿ

ಯವರು ಶ್ರೀರಾಮಕೃಷ್ಣರನ್ನು, ಅವರು ಯಾವ ದೃಷ್ಟಿಯಲ್ಲಿ ತಮ್ಮನ್ನು ನೋಡುತ್ತಿರುವರು ಎಂದು ಪ್ರಶ್ನಿಸಿದರು. ತತ್ ಕ್ಷಣವೇ ಶ್ರೀರಾಮಕೃಷ್ಣರು, "ಯಾವ ತಾಯಿ ಗರ್ಭಗುಡಿಯಲ್ಲಿರುವಳೋ, ಯಾವ ತಾಯಿ ಈ ದೇಹಕ್ಕೆ ಜನ್ಮಕೊಟ್ಟಳೋ ಅವಳೇ ಶಾರದಾದೇವಿಯಂತೆ ತನ್ನ ಕೈಗಳಿಂದ ನನ್ನ ಕಾಲನ್ನು ಒತ್ತುತ್ತಿರುವಳು" ಎಂದರು.

ಸತಿಪತಿಯರಿಬ್ಬರೂ ದೇಹಾಭಿಮಾನವನ್ನು ತ್ಯಜಿಸಿ, ಆಜನ್ಮ ಬ್ರಹ್ಮಚಾರಿಗಳಾಗಿ ಬಾಳುತ್ತಿದ್ದರು. ಶ್ರೀಶಾರದಾದೇವಿಯವರ ತಾಯಿಗೆ ಇದು ಗೊತ್ತಾಗಿ ಒಂದು ಸಲ ಶ್ರೀರಾಮಕೃಷ್ಣರ ಕಿವಿಗೆ ಕೇಳುವಂತೆ "ನನ್ನ ಮಗಳು ಶಾರದೆಗೆ ಮಕ್ಕಳ ಕೈಯಿಂದ ಅಮ್ಮ ಎನ್ನಿಸಿಕೊಳ್ಳುವ ಭಾಗ್ಯ ಬರೆದಿಲ್ಲ" ಎಂದು ವ್ಯಥೆಪಟ್ಟುಕೊಂಡರು, ಶ್ರೀರಾಮಕೃಷ್ಣರು ಆನಂತರ ತಮ್ಮ ಅತ್ತೆಯವರಿಗೆ ಸಮಾಧಾನ ಮಾಡಿದರು. ದೇಹದ ಮೂಲಕ ಮಕ್ಕಳಾದರೆ ಅವು ಒಳ್ಳೆಯವರಾಗಬಹುದು ಅಥವಾ ಕೆಟ್ಟವರಾಗಬಹುದು. ಆದರೆ ಜಗದ ನಾನಾಕಡೆಗಳಿಂದ ಪುತ್ರಶ್ರೇಷ್ಠರು ಬಂದು ನಿಮ್ಮ ಮಗಳಿಗೆ ತಾಯಿ ಎಂದು ಶುಶ್ರೂಷೆಮಾಡಲು ತವಕಪಡುವರು ಎಂದರು.

ಒಂದುದಿನ ಫಲಹಾರಿಣಿ ಕಾಳಿಕಾಪೂಜೆಯ ದಿನ, ಶ್ರೀರಾಮಕೃಷ್ಣರು ತಮ್ಮ ಕೋಣೆಯೊಳಗೆ ಪೀಠದ ಮೇಲೆ ಶ್ರೀಶಾರದಾದೇವಿಯವರನ್ನು ಕೂಡಿಸಿ ದೇವಿಗೆ ಪೂಜೆ ಮಾಡುವಂತೆ ಪೂಜೆ ಮಾಡಿದರು. ಇದನ್ನು ಷೋಡಶೀಪೂಜೆ ಎನ್ನುವರು. ಪೂಜೆಯೆಲ್ಲ ಆದಮೇಲೆ ಶ್ರೀರಾಮಕೃಷ್ಣರು ತಾವು ಮಾಡಿದ ತಪಸ್ಸಿನ ಪುಣ್ಯವನ್ನೆಲ್ಲ ಪುಷ್ಪಾಂಜಲಿಯಂತೆ ಅರ್ಪಿಸಿದರು. ಆನಂತರ ಧ್ಯಾನಾಸಕ್ತರಾದರು. ಈ ಎರಡು ಜೀವಿಗಳು ಭಗವಂತನ

ಅಸ್ತಿತ್ವದಲ್ಲಿ ತನ್ಮಯರಾದರು. ಬಹಳ ಕಾಲವಾದ ಮೇಲೆಯೇ ಇಬ್ಬರಿಗೂ ಬಾಹ್ಯಪ್ರಜ್ಞೆ ಬಂದುದು. ಷೋಡಶೀಪೂಜೆ ಶ್ರೀರಾಮಕೃಷ್ಣರು ಮಾಡಿದ ಸಾಧನೆಯಲ್ಲಿ ಕಿರೀಟಪ್ರಾಯವಾಯಿತು. ಇದನ್ನು ಅವರ ಸಾಧನೆಯ ಪರಾಕಾಷ್ಠೆ ಎಂದು ಬೇಕಾದರೂ ಹೇಳಬಹುದು. ಸತಿಪತಿಯರಿಬ್ಬರೂ ಮತ್ತೊಬ್ಬರಲ್ಲಿರುವ ದೈವತ್ವಕ್ಕೆ ಮಣಿದು ಇಬ್ಬರೂ ಜಗನ್ಮಾತೆಯ ನಿಮಿತ್ತವೆಂಬ ದೃಷ್ಟಿಯಿಂದ ವ್ಯವಹರಿಸತೊಡಗಿದರು.

ಮೇಲಿನ ಪೂಜೆ ಶ್ರೀಮಾತೆಯವರನ್ನು ನಿಜವಾಗಿಯೂ ಶ್ರೀರಾಮಕೃಷ್ಣರ ಸಹಧರ್ಮಿಣಿಯನ್ನಾಗಿ ಮಾಡಿತು. ಪತಿಯ ಧರ್ಮವೇ ಸತಿಯ ಧರ್ಮವಾಯಿತು. ಇಬ್ಬರೂ ಜಗನ್ಮಾತೆಯ ಮಹಾಯಂತ್ರಗಳಾಗಿ, ಅವಳ ಮಹಾನಾಟಕದಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸಿದರು. ಶ್ರೀರಾಮಕೃಷ್ಣರು ಶ್ರೀಮಾತೆಯ ಆಧ್ಯಾತ್ಮಿಕ ಜವಾಬ್ದಾರಿಯನ್ನು ವಹಿಸಿಕೊಂಡು ಅವರನ್ನು ನಿರ್ವಿಕಲ್ಪ ಸಮಾಧಿಯವರೆಗೆ ಒಯ್ದರು. ಅದರಂತೆಯೇ ವ್ಯವಹಾರಜ್ಞಾನದಲ್ಲಿ ಚತುರರನ್ನಾಗಿ ಮಾಡಿದರು. ಶ್ರೀರಾಮಕೃಷ್ಣರ ದೈವೋನ್ಮಾದ, ಅವರ ನೃತ್ಯ, ಗೀತಾ, ಸಮಾಧಿಯನ್ನು ನಾವು ಓದಿ ಕೇಳಿರುವೆವು. ಆದರೆ ಅವರು ಅಷ್ಟೇ ವ್ಯವಹಾರಚತುರರು ಎಂಬುದನ್ನು ಕೆಳಗೆ ಅವರು ಶಾರದಾದೇವಿಯವರಿಗೆ ಕೊಟ್ಟ ಸಲಹೆಯಿಂದ ತಿಳಿಯುವೆವು.

ಮನೆಯ ಪಾತ್ರೆಯನ್ನು ಜೋಡಿಸುವಾಗ ಯಾವ ಯಾವ ಪಾತ್ರೆಗಳನ್ನು ಎಲ್ಲಿಡಬೇಕು ಎಂಬುದನ್ನು ಮೊದಲೇ ಯೋಚಿಸಬೇಕು. ಯಾವುದು ಹೆಚ್ಚು ಬಳಕೆಯಲ್ಲಿರುವುದೊ ಅದು ಸುಲಭವಾಗಿ ಹತ್ತಿರ ಸಿಕ್ಕುವಂತೆ ಇರಬೇಕು. ಯಾವುದಾದರೂ ಸಾಮಾನನ್ನು ಒಂದು ಸ್ಥಳದಿಂದ ತೆಗೆದರೆ ಪುನಃ ಅದೇ ಸ್ಥಳ

ದಲ್ಲಿ ಅದನ್ನು ಇಡಬೇಕು. ನಾವು ಕತ್ತಲಲ್ಲಿ ಹೋಗಿ ಕೈಯಿಟ್ಟರೂ ಅದು ನಮಗೆ ಸಿಕ್ಕುವಂತೆ ಇರಬೇಕು. ದೇವರ ಮಂಗಳಾರತಿಗೆ ಹೂವಿನ ಬತ್ತಿಯನ್ನು ಹೇಗೆ ಮಾಡಬೇಕು, ಅಡಿಗೆಗೆ ತರಕಾರಿಯನ್ನು ಹೇಗೆ ಹಚ್ಚಬೇಕು, ವೀಳೆದೆಲೆಯನ್ನು ಹೇಗೆ ಮಡಿಸಬೇಕು, ಯಾವ ಯಾವ ಅಡಿಗೆಯನ್ನು ಹೇಗೆ ಮಾಡಬೇಕು ಎಂಬುದನ್ನು ಹೇಳುತ್ತಿದ್ದರು. ದೋಣಿಯನ್ನು ಹತ್ತುವಾಗ ಮನೆಯ ಯಜಮಾನಿ ಮೊದಲು ಹತ್ತಬೇಕು. ಇಳಿಯುವಾಗ ಅವಳು ಕೊನೆಗೆ ಇಳಿಯಬೇಕು. ಆಗಲೇ ಎಲ್ಲಾ ಸಾಮಾನುಗಳನ್ನು ತಂದಾಗಿದೆಯೋ, ಇಳಿಸಿ ಆಗಿದೆಯೆ ಎಂದು ನೋಡಲು ಸಾಧ್ಯವಾಗುವುದು. ಸಮಾಜದಲ್ಲಿ ನಾವು ಶಾಂತಿಯಿಂದ ಇರಬೇಕಾದರೆ ಕಾಲ ದೇಶ ಸನ್ನಿವೇಶಗಳನ್ನು ನೋಡಿಕೊಂಡು ಯಾರ ಯಾರ ಹತ್ತಿರ ಹೇಗೆ ವ್ಯವಹರಿಸಬೇಕು ಎಂಬುದನ್ನು ತಿಳಿದು ಹಾಗೆ ನಡೆಯಬೇಕು. ಎಲ್ಲರ ದೇಹದೊಳಗೆ ಒಂದೇ ಮೂಳೆ ಮಾಂಸ ರಕ್ತಗಳಿದ್ದರೂ ಅದರ ಹಿಂದೆಲ್ಲ ಹಲವು ಬಗೆಯ ಮನಸ್ಸುಗಳಿವೆ. ಅದಕ್ಕೋಸ್ಕರವೇ ನಾವು ನಮ್ಮ ಗೆಳೆಯರನ್ನು ಆರಿಸಿಕೊಳ್ಳುವಾಗ ಜೋಪಾನವಾಗಿರಬೇಕು, ಕೆಲವರೊಡನೆ ಸದರದಿಂದ ಬೆರೆತು ಮಾತನಾಡಬಹುದು. ಕೆಲವರೊಡನೆ ಉಂಟು ಇಲ್ಲ ಎಂದು ಹೇಳಿದರೆ ಸಾಕು. ಮತ್ತೆ ಕೆಲವರೊಡನೆ ಮಾತನಾಡದಿರುವುದೇ ಮೇಲು.

ಶ್ರೀಮಾತೆಯವರೇ ಅನಂತರ ಮೇಲಿನ ವಿಷಯಗಳನ್ನು ಭಕ್ತರ ಹತ್ತಿರ ಮಾತನಾಡುತ್ತಿದ್ದಾಗ ತಮ್ಮ ಪತಿ ಈ ಸಲಹೆಗಳನ್ನೆಲ್ಲ ಕೊಟ್ಟರು ಎಂದು ಎಂದು ಹೇಳುತ್ತಿದ್ದರು.

ಶ್ರೀ.ಶಾರದಾದೇವಿಯವರು ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರೊಡನೆ ಸುಮಾರು ಹದಿಮೂರು ವರ್ಷಗಳನ್ನು ಕಳೆದರು.

ಮಧ್ಯೆ ಮಧ್ಯೆ ತಮ್ಮ ತವರುಮನೆಗೆ ಹೋಗಿ ಬರುತ್ತಿದ್ದರು. ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರ ಕೋಣೆ ಐವತ್ತು ಗಜಗಳ ದೂರದಲ್ಲಿ ನಹಬತ್‌ಖಾನ ಎಂಬ ಸಣ್ಣ ಕೋಣೆಯಿದೆ. ಅಲ್ಲಿಯೇ ಶಾರದಾದೇವಿ ತಮ್ಮ ಜೀವನದ ಬಹಳ ಕಾಲವನ್ನು ಕಳೆದರು. ಶ್ರೀರಾಮಕೃಷ್ಣರ ತಾಯಿ ತಮ್ಮ ಜೀವನದ ಕೊನೆ ದಿನಗಳನ್ನು ಗಂಗಾನದಿ ಸಮೀಪದಲ್ಲಿ ಮತ್ತು ಮಗನ ಹತ್ತಿರ ಕಳೆಯಬೇಕೆಂದು ಬಂದರು. ಅವರು ಇರುವತನಕ ಶ್ರೀಶಾರದಾದೇವಿಯವರ ಕೋಣೆಯ ಮೇಲೆ ಇದ್ದ ಮತ್ತೊಂದು ಕೋಣೆಯಲ್ಲಿ ವಾಸಮಾಡುತ್ತಿದ್ದರು. ಕೆಳಗಿನ ಕೋಣೆ ಅಡಿಗೆ ಮನೆ, ಉಗ್ರಾಣ ಮತ್ತು ಶಾರದಾದೇವಿಯವರು ಮಲಗುವ ಕೋಣೆಯೂ ಆಗಿತ್ತು. ಜೊತೆಗೆ ಯಾರಾದರೂ ಶ್ರೀರಾಮ ಕೃಷ್ಣರ ಸ್ತ್ರೀಭಕ್ತರು ಬಂದು ರಾತ್ರಿ ತಂಗಿದರೆ ಅವರಿಗೆ ಮಲಗಲು ಆ ಸಣ್ಣ ಕೋಣೆಯಲ್ಲಿಯೇ ಇರಬೇಕಾಗಿತ್ತು. ಶ್ರೀಶಾರದಾದೇವಿಯವರನ್ನು ನೋಡುವುದಕ್ಕೆ ಬರುತ್ತಿದ್ದ ಕೆಲವರು "ಅಯ್ಯೋ ನಮ್ಮ ಶಾರದೆ ಸೀತೆ ರಾವಣನ ಹತ್ತಿರ ಸೆರೆಮನೆಯಲ್ಲಿ ಇದ್ದಂತೆ ಇರುವಳು" ಎಂದು ಹೇಳುತ್ತಿದ್ದರು.

ಶ್ರೀಮಾತೆಯವರು ತಮ್ಮ ಕೋಣೆಯಲ್ಲಿ ಇನ್ನೊಬ್ಬರ ಕಣ್ಣಿಗೆ ಬೀಳದಂತೆ ಇದ್ದರು. ಬೆಳಗಿನ ಝಾವ ಮೂರು ಗಂಟೆಗೆ ಎದ್ದು ಗಂಗಾನದಿಯಲ್ಲಿ ಸ್ನಾನವನ್ನು ಮಾಡಿಕೊಂಡು ಬಂದರೆ ಮಧ್ಯಾಹ್ನ ಒಂದು ಗಂಟೆಯವರೆಗೂ ತಮ್ಮ ಕೋಣೆಯ ಮುಂದೆ ಕೂಡ ಸುಳಿಯುತ್ತಿರಲಿಲ್ಲ. ಆಗಲೂ ಯಾರೂ ಇಲ್ಲದೆ ಇದ್ದರೆ ಬಂದು ಸ್ವಲ್ಪ ಹೊತ್ತು ಕುಳಿತುಕೊಂಡು ಒಳಗೆ ಹೋಗುತ್ತಿದ್ದರು. ಗುಡಿಯ ಅಧಿಕಾರಿಯೊಬ್ಬ ಇನ್ನೊಬ್ಬರೊಡನೆ ಮಾತನಾಡುತ್ತಿದ್ದಾಗ ಶ್ರೀಮಾತೆ ಇಲ್ಲಿರುವರು ಎಂದು

ಕೇಳಿದ್ದೇನೆಯೇ ಹೊರತು ನೋಡಿಲ್ಲ ಎಂದನು. ಶ್ರೀಮಾತೆ ಯವರದು ಮೊದಲಿನಿಂದಲೂ ಲಜ್ಜಾಪ್ರಕೃತಿ. ತಮ್ಮ ಪತಿಯ ಮುಂದೆಕೂಡ ತಲೆಯ ಮೇಲಿನ ಮುಸುಕನ್ನು ತೆರೆಯುತ್ತಿರಲಿಲ್ಲ. ಪರಪುರುಷನ ಮುಂದೆ ಎಂದೂ ಮಾತನಾಡಿದವರಲ್ಲ. ದಕ್ಷಿಣೇಶ್ವರ ದಲ್ಲಿ ಬರೀ ಪುರುಷರು. ಸ್ತ್ರೀಯೆಂದರೆ ಇವರೊಬ್ಬರೆ. ಅವರು ಅನೇಕ ವೇಳೆ "ಹಲವು ಗಂಡಸರ ಮಧ್ಯೆ ಇರುವವಳು ನಾನೊಬ್ಬ ಹೆಂಗಸು. ದೇವರೇ ಮಾನವನ್ನು ಕಾಪಾಡು" ಎಂದು ಪ್ರಾರ್ಥಿ ಸುತ್ತಿದ್ದರು.

ಶ್ರೀಮಾತೆಯವರ ಕೋಣೆಯ ಮುಂದೆ ದಕ್ಷಿಣೇಶ್ವರವನ್ನು ನೋಡುವುದಕ್ಕೆ ಬರುವವರ ಕಣ್ಣಿಗೆ ಶ್ರೀಮಾತೆ ಬೀಳದಿರಲಿ ಎಂದು ಒಂದು ತಡಿಕೆಯನ್ನು ಕಟ್ಟಿಸಿದ್ದರು. ಶ್ರೀರಾಮಕೃಷ್ಣರ ಕೋಣೆಯಲ್ಲಿ ಭಜನೆ ನಾಟ್ಯಗಳು ಆಗುತ್ತಿದ್ದಾಗ ತಡಿಕೆಯ ಕಿಂಡಿಯ ಮೂಲಕ ಶ್ರೀಮಾತೆ ನೋಡುತ್ತಿದ್ದರು. ಶ್ರೀರಾಮ ಕೃಷ್ಣರು ಶ್ರೀಮಾತೆ ಹೇಗೆ ಒಂದೇ ಕಡೆ ಕಾಲಕಳೆಯುತ್ತಿರು ವರು, ಅವರಿಗೆ ಕಾಲು ಕಟ್ಟಿದಂತಾಗಿದೆ ಎಂದು ಗೊತ್ತಾಗಿ ಅವರೇ ಮಧ್ಯಾಹ್ನ ಒಂದು ಗಂಟೆಯ ಮೇಲೆ ಶ್ರೀಮಾತೆಯ ಕೋಣೆಯ ಸಮೀಪಕ್ಕೆ ಬಂದು ಹೆಚ್ಚು ಜನರಿಲ್ಲದೇ ಇದ್ದರೆ, ಯಾವುದಾದರೂ ನೆರೆಮನೆಗೆ ಹೋಗಿ ಬಾ, ಒಂದೇಕಡೆ ಕುಳಿ ತಿದ್ದರೆ ಆರೋಗ್ಯ ಕೆಡುವುದು ಎಂದು ಕಳುಹಿಸುತ್ತಿದ್ದರು.

ಶ್ರೀರಾಮಕೃಷ್ಣರ ಶಿಷ್ಯರೊಬ್ಬರಿಗೆ ಶ್ರೀಮಾತೆಯ ಕಷ್ಟ ಗೊತ್ತಾಗಿ ಸ್ವಲ್ಪ ದೂರದಲ್ಲಿ ಶ್ರೀಮಾತೆಯವರಿಗೆ ಇರಲು ಒಂದು ಚೆನ್ನಾದ ಮನೆಯನ್ನು ಕಟ್ಟಿಸಿಕೊಟ್ಟರು. ಶ್ರೀರಾಮಕೃಷ್ಣರು ಪ್ರತಿದಿನ ಸಂಜೆ ಅಲ್ಲಿಗೆ ಹೋಗಿ ಎಲ್ಲಾ ಸರಿಯಾಗಿ ಇದೆಯೇ ಇಲ್ಲವೆ ಎಂಬುದನ್ನು ವಿಚಾರಿಸಿಕೊಂಡು ಬರುತ್ತಿದ್ದರು. ಒಂದು

ದಿನ ಸಂಜೆ ಹಾಗೆ ಹೋದಾಗ ಜೋರಾಗಿ ಮಳೆ ಬಂದಿತು. ಹಿಂತಿರುಗಲು ಆಗಲಿಲ್ಲ. ಆಗ ಶ್ರೀಮಾತೆಗೆ "ಗುಡಿಯ ಪೂಜಾರಿಗಳು ಪ್ರತಿದಿನ ಮಾಡುವಂತೆ ಇಂದು ನಾನು ಮಾಡಿದೆ" ಎಂದು ನಗುತ್ತ ಹೇಳಿದರು. ಸುಮಾರು ಒಂದು ವರುಷ ಹೊಸ ಮನೆಯಲ್ಲಿ ಶ್ರೀಮಾತೆ ಇದ್ದರು. ಅನಂತರ ಶ್ರೀರಾಮಕೃಷ್ಣರಿಗೆ ಆಮಶಂಕೆ ಆದಾಗ ಅವರ ಶುಶ್ರೂಷೆಗೆ ಹತ್ತಿರ ಇರಬೇಕಾಗುವುದೆಂದು ತಮ್ಮ ಹಿಂದಿನ ಕೋಣೆಗೆ ಬಂದವರು ಮರಳಿ ಹೊಸ ಮನೆಗೆ ಹೋಗಲಿಲ್ಲ.

ಶ್ರೀರಾಮಕೃಷ್ಣರ ಜೀರ್ಣಶಕ್ತಿ ತುಂಬಾ ಸೂಕ್ಷ್ಮವಾಗಿತ್ತು. ಶ್ರೀಮಾತೆಯವರು ಮಾತ್ರ ಅವರಿಗೆ ಒಗ್ಗುವ ಆಹಾರವನ್ನು ಚೆನ್ನಾಗಿ ತಯಾರುಮಾಡುತ್ತಿದ್ದರು. ಕೆಲವು ವೇಳೆ ಇವರು ತವರು ಮನೆಗೆ ಹೋದಾಗ ಇತರರು ಮಾಡಿದ ಊಟವನ್ನು ತಿಂದು ಶ್ರೀರಾಮಕೃಷ್ಣರ ಪ್ರಕೃತಿ ಹದಗೆಟ್ಟಾಗ ಬೇಗ ಬರುವಂತೆ ಕಾಗದ ಬರೆಯುತ್ತಿದ್ದರು. ಆ ಸಮಯದಲ್ಲಿ ಹತ್ತಿರ ಇದ್ದ ಭಕ್ತನೊಡನೆ ತಮ್ಮಂತಹವರಿಗೆ ಹೆಂಡತಿ ಎಂದರೆ ಒಬ್ಬ ಅಡಿಗೆ ಮಾಡುವವಳು ಅಲ್ಲದೆ ಮತ್ತೇನು ಎಂದು ಹಾಸ್ಯವಾಗಿ ಹೇಳಿದರು.

ಶ್ರೀಮಾತೆ ದಕ್ಷಿಣೇಶ್ವರಕ್ಕೆ ಬಂದ ಹೊಸದರಲ್ಲಿ ಶ್ರೀರಾಮಕೃಷ್ಣರು ಮತ್ತು ಅವರ ತಾಯಿ ಇಬ್ಬರಿಗೆ ಮಾತ್ರ ಅಡಿಗೆ ಮಾಡಬೇಕಾಗಿತ್ತು. ಶ್ರೀರಾಮಕೃಷ್ಣರ ತಾಯಿ ಮೇಲೆ ಇರುತ್ತಿದ್ದರು. ಅವರು ಶಾರದಾದೇವಿಯವರನ್ನು ಯಾವಾಗಲಾದರೂ ಕರೆದಾಗ ಅವರು ಮೊದಲನೆ ಅಕ್ಷರವನ್ನು ಉಚ್ಚರಿಸುವುದೇ ತಡ ಶ್ರೀಮಾತೆ ತಕ್ಷಣವೇ ಮೇಲಕ್ಕೆ ಓಡಿಹೋಗುತ್ತಿದ್ದರು. ಹಾಗೆ ಅವಸರದಿಂದ ಹೋಗುವುದನ್ನು ನೋಡಿದಾಗ ಶಿಷ್ಯರೊಬ್ಬರು ಇಷ್ಟೊಂದು ಆತುರದಿಂದ ಏತಕ್ಕೆ ಹೋಗುತ್ತೀರಿ, ಬಿದ್ದರೆ ಏನು

ಗತಿ ಎಂದರು. ಅದಕ್ಕೆ ಶ್ರೀಮಾತೆ, ಅತ್ತೆ ಅಷ್ಟು ವಯೋವೃದ್ಧರು ಬೇಗ ಹೋಗದೆ ಇದ್ದರೆ ಅವರಿಗೆ ಏನಾದರೂ ತೊಂದರೆ ಆದೀತು ಒಂದು ವೇಳೆ ನಾನು ಹೋಗುವಾಗ ಬಿದ್ದರೇನಂತೆ ಎಂದು ಉತ್ತರವಿತ್ತರು.

ಶ್ರೀರಾಮಕೃಷ್ಣರ ಕೀರ್ತಿ ಹಬ್ಬಿದಂತೆಲ್ಲ ಅವರನ್ನು ನೋಡುವುದಕ್ಕೆ ಬರುವ ಭಕ್ತರ ಸಂಖ್ಯೆಯೂ ಹೆಚ್ಚಿತು. ಕೆಲವು ವೇಳೆ ಮೂರು ವೀಸೆ ಗೋಧಿ ಹಿಟ್ಟಿನಿಂದ ರೊಟ್ಟಿಯನ್ನು ಮಾಡಬೇಕಾಗಿತ್ತು. ಲೆಕ್ಕವಿಲ್ಲದಷ್ಟು ಪಾನುಗಳನ್ನು ಮಾಡಿಡಬೇಕಾಗಿತ್ತು. ಶ್ರೀರಾಮಕೃಷ್ಣರು ಲಟು ಎಂಬ ತಮ್ಮ ಶಿಷ್ಯನನ್ನು ಶ್ರೀಮಾತೆಯ ಸಹಾಯಕ್ಕೆ ಕಳುಹಿಸುತ್ತಿದ್ದರು. ನರೇಂದ್ರನಾಥ ಪರಮಹಂಸರ ಹತ್ತಿರ ಬರುವುದಕ್ಕೆ ಪ್ರಾರಂಭಮಾಡಿದ ಮೇಲೆ ಒಂದು ದಿನ ಅವನು ಊಟಕ್ಕೆ ಇರುತ್ತಾನೆ ಎಂದು ಶ್ರೀಮಾತೆಗೆ ಹೇಳಿ ಕಳುಹಿಸಿದರು. ಶ್ರೀಮಾತೆ ತಮ್ಮ ಪತಿಗೆ ಮಾಡುತ್ತಿದ್ದ ಖಾರವಿಲ್ಲದ ಪಲ್ಯ, ತೆಳ್ಳಗಿರುವ ಚಪಾತಿ ಇವನ್ನು ಮಾಡಿ ಬಡಿಸಿದರು. ಶ್ರೀರಾಮಕೃಷ್ಣರು ಅನಂತರ ನರೇಂದ್ರನನ್ನು ಊಟ ಹೇಗಿತ್ತು ಎಂದು ಕೇಳಿದರು. ನರೇಂದ್ರ ಅಡಿಗೆ ಏನೋ ಚೆನ್ನಾಗಿತ್ತು. ಆದರೆ ಅದೊಂದು ಪಥ್ಯದ ಊಟ! ಎಂದನು ಶ್ರೀರಾಮಕೃಷ್ಣರು ನಕ್ಕರು ಇನ್ನೊಂದು ದಿನ ನಿನ್ನ ರುಚಿಗೆ ತಕ್ಕಂತೆ ಮಾಡಿಸಿಹಾಕುತ್ತೇನೆ, ಎಂದು ಹೇಳಿದರು. ಹಾಗೆ ಇನ್ನೊಂದು ದಿನ ಊಟಕ್ಕೆ ಕರೆದಾಗ, ಮುಂಚೆಯೇ ಶ್ರೀಮಾತೆಗೆ ಪಲ್ಯಕ್ಕೆ ಚೆನ್ನಾಗಿ ಖಾರಹಾಕು, ತೊವ್ವೆ ಗಟ್ಟಿಯಾಗಿರಲಿ, ಚಪಾತಿ ದಪ್ಪವಾಗಿರಲಿ ಎಂದು ಹೇಳಿದರು. ಆ ಅಡಿಗೆಯನ್ನು ನರೇಂದ್ರ ಊಟ ಮಾಡಿದ ಮೇಲೆ, ಶ್ರೀಮಾತೆ ಪರವಾಯಿಲ್ಲ ಅಡಿಗೆ ಮಾಡುವುದರಲ್ಲಿ ಅಂದರಂತೆ. ಶ್ರೀರಾಮಕೃಷ್ಣರಿಗೆ

ಬಡಿಸುವುದಕ್ಕೆ ಶ್ರೀಮಾತೆ ಬೇಕಾದಷ್ಟು ಜಾಣತನವನ್ನು ಉಪಯೋಗಿಸಬೇಕಾಗಿತ್ತು. ಅವರು ಬಹಳ ಕಡಿಮೆ ತೆಗೆದುಕೊಳ್ಳುತ್ತಿದ್ದರು. ಅದಕ್ಕಾಗಿ ಅನ್ನವನ್ನು ಚೆನ್ನಾಗಿ ಅದುಮಿ ಜಾಸ್ತಿ ಅನ್ನ ಕಡಿಮೆ ಕಾಣುವಂತೆ ಮಾಡುತ್ತಿದ್ದರು. ಹಾಲನ್ನು ಎಲ್ಲೋ ಸ್ವಲ್ಪ ಪ್ರಮಾಣದಲ್ಲಿ ತೆಗೆದುಕೊಳ್ಳುತ್ತಿದ್ದರು. ಅದಕ್ಕಾಗಿ ಹಾಲನ್ನು ಚೆನ್ನಾಗಿ ಕಾಯಿಸಿ ಇಂಗಿಸಿ ಕೊಡುತ್ತಿದ್ದರು. ಶ್ರೀರಾಮಕೃಷ್ಣರು ಒಂದು ದಿನ ತಮ್ಮ ತುಂಬಿದ ದೇಹವನ್ನು ನೋಡಿಕೊಂಡು ಶ್ರೀಮಾತೆಗೆ ಕೇಳುವಂತೆ, ನಿನ್ನ ಪ್ರೀತಿಯ ಊಟವನ್ನುಂಡು ನಾನು ಹೇಗೆ ದೃಢಕಾಯನಾಗಿರುವೆ ಎಂದರು. ಶ್ರೀಮಾತೆ ಇದನ್ನು ಕೇಳಿ ನಸುನಗುತ್ತ ತಮ್ಮ ಕೋಣೆಗೆ ಬಂದರು.

ಶ್ರೀಮಾತೆ ಬೆಳಿಗ್ಗೆ ತಮ್ಮ ಪ್ರಾರ್ಥನಾದಿಗಳನ್ನು ತೀರಿಸಿಕೊಂಡು ಪುರುಷಭಕ್ತರು ಯಾರೂ ಶ್ರೀರಾಮಕೃಷ್ಣರ ಕೋಣೆಯಲ್ಲಿ ಇಲ್ಲದೇ ಇದ್ದರೆ ಅವರಿಗೆ ಸ್ನಾನಕ್ಕೆ ಮುಂಚೆ ಎಣ್ಣೆ ಸವರಲು ಹೋಗುತ್ತಿದ್ದರು. ಅವರು ಸ್ನಾನ ಮಾಡಿಕೊಂಡು ಬಂದ ಮೇಲೆ ಅವರಿಗೆ ಊಟವನ್ನು ಬಡಿಸುತ್ತಿದ್ದರು. ಅನಂತರ ತಮ್ಮ ಕೋಣೆಗೆ ಬಂದು ಸ್ವಲ್ಪ ಉಪಹಾರವನ್ನು ಸೇವಿಸಿ ಭಕ್ತಾದಿಗಳಿಗೆ ಕೊಡುವುದಕ್ಕೆ ಪಾನುಗಳನ್ನು ಮಾಡುತ್ತಿದ್ದರು. ಸುಮಾರು ಒಂದು ಗಂಟೆಯ ಹೊತ್ತಿಗೆ ತಾವು ಊಟಮಾಡಿ ಸ್ವಲ್ಪ ವಿಶ್ರಮಿಸಿಕೊಂಡು ಆದಮೇಲೆ ರಾತ್ರೆ ಅಡಿಗೆ ಪ್ರಾರಂಭ ಮಾಡುತ್ತಿದ್ದರು. ದಕ್ಷಿಣೇಶ್ವರದಲ್ಲಿ ಮಂಗಳಾರತಿ ಆಗುವಾಗ ತಾವು ಕೋಣೆಯಲ್ಲಿ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರು. ಇದಲ್ಲದೆ ಅನೇಕ ಸ್ತ್ರೀಯರು ಶ್ರೀರಾಮಕೃಷ್ಣರನ್ನು ನೋಡಿ ಆದ ಮೇಲೆ ಶ್ರೀಮಾತೆಯನ್ನು ನೋಡುವುದಕ್ಕೆ ಬರುತ್ತಿದ್ದರು.

ತಮ್ಮ ಜೀವನದ ಸುಖದುಃಖಗಳ ಕಥೆಗಳನ್ನು ಹೇಳುತ್ತಿದ್ದರು. ಇವರೆ ಅದನ್ನೆಲ್ಲ ಕೇಳಿ ಕೆಲವು ವೇಳೆ ಸಹಾನುಭೂತಿ ತೋರಿ, ಸಾಂತ್ವನ ನುಡಿಗಳನ್ನು ಹೇಳುತ್ತಿದ್ದರು.

ಶ್ರೀಮಾತೆಯವರ ಒಂದು ದೊಡ್ಡ ಸಾಧನೆ, ತಪಸ್ಸು ಶ್ರೀರಾಮಕೃಷ್ಣರಿಗೆ ಮಾಡುತ್ತಿದ್ದ ಸೇವೆ. ಆ ಕೆಲಸವನ್ನು ಅವರು ಗೊಣಗಾಡದೆ ಎಷ್ಟು ಬಂದರೂ ಮಾಡುತ್ತಿದ್ದರು. ಆದರೆ ತಮಗೆ ಮಾಡಬೇಕೆಂದಿರುವಷ್ಟು ಅವಕಾಶವಿಲ್ಲ ಎಂಬುದೊಂದೆ ಅವರ ಕೊರತೆ. ಶ್ರೀಮಾತೆ ಶ್ರೀರಾಮಕೃಷ್ಣರನ್ನು ನೋಡುವುದು ಅವರಿಗೆ ಊಟವನ್ನು ತೆಗೆದುಕೊಂಡು ಹೋದಾಗ ಮಾತ್ರ. ಆಗಲೇ ಅವರಿಂದ ಹಲವಾರು ವಿಷಯಗಳನ್ನು ಕೇಳುತ್ತಿದ್ದರು. ಕೆಲವು ವೇಳೆ ತಿಂಗಳುಗಳವರೆಗೆ ಅವರಿಗೆ ಊಟವನ್ನು ತೆಗೆದು ಕೊಂಡು ಹೋಗುವ ಅವಕಾಶವೂ ಇವರಿಗೆ ಬೀಳುತ್ತಿರಲಿಲ್ಲ. ಇತರ ಸ್ತ್ರೀಭಕ್ತರು ಬಂದು ತಾವು ಶ್ರೀರಾಮಕೃಷ್ಣರಿಗೆ ತೆಗೆದುಕೊಂಡು ಹೋಗುತ್ತೇವೆ ಎಂದು ಕೇಳಿದರೆ ಶ್ರೀಮಾತೆ ಉದಾರತೆಯಿಂದ, ನಾನೊಬ್ಬಳೇ ಧನ್ಯಳಾಗಬೇಕೆ ಅವರ ಸೇವೆಯಿಂದ, ಎಲ್ಲರಿಗೂ ಅವಕಾಶ ಸಿಕ್ಕಲಿ ಎಂದು ಹೇಳಿಕೊಳ್ಳು ತ್ತಿದ್ದರು.

ಶ್ರೀಮಾತೆ ಮತ್ತು ಶ್ರೀರಾಮಕೃಷ್ಣರ ಸಂಬಂಧದಲ್ಲಿ ನಮ ಗೊಂದು ದೈವೀಪ್ರೇಮದ ಅನುಭವವಾಗುವುದು. ಇಬ್ಬರೂ ಆಜನ್ಮ ಬ್ರಹ್ಮಚರ್ಯ ವ್ರತವನ್ನು ತಾವೇ ಸ್ವೀಕರಿಸಿ, ಸತಿಪತಿಯ ಸಾಧಾರಣ ಕಾಯಿಕ ಸಂಬಂಧವನ್ನು ತ್ಯಜಿಸಿದ್ದರು. ಆದರೆ ಅಲ್ಲಿ ಪ್ರೇಮಕ್ಕೆ ಅಭಾವ ಇರಲಿಲ್ಲ. ಶ್ರೀರಾಮಕೃಷ್ಣರು ಎಲ್ಲ ವನ್ನು ತ್ಯಜಿಸಿದ್ದರೂ ತಮ್ಮನ್ನೇ ನೆಚ್ಚಿಬಂದ ಶ್ರೀಮಾತೆಯವರ ಹಿತವನ್ನು ಎಂದೂ ಮರೆತವರಲ್ಲ. ಒಮ್ಮೆ ಶ್ರೀಮಾತೆಗೆ ತಲೆ

ಸ್ತೋತ್ರ ಬಂದಿತಂತೆ. ಶಿಷ್ಯನನ್ನು ಒಂದು ದಿನದಲ್ಲಿ ಹಲವು ಸೇಳೆ ಕಳುಹಿಸಿ ವಿಚಾರಿಸಿಕೊಂಡರಂತೆ. ಒಂದು ದಿನ ಶ್ರೀರಾಮ ಕೃಷ್ಣರು ಶ್ರೀಮಾತೆಯವರನ್ನು, "ನಿನ್ನ ಜೀವನೋಪಾಯಕ್ಕೆ ಎಷ್ಟು ರೂಪಾಯಿಗಳು ಬೇಕು ?" ಎಂದು ಕೇಳಿದರು. ಶ್ರೀಮಾತೆಯವರಿಗೆ ಹೇಳಲು ತುಂಬಾ ಸಂಕೋಚವಾಯಿತು. ಶ್ರೀರಾಮಕೃಷ್ಣರು ಪದೇ ಪದೇ ಕೇಳಿದಾಗ ಹೇಳದೆ ವಿಧಿ ಯಿರಲಿಲ್ಲ. ಆಗ ತಿಂಗಳಿಗೆ ಐದಾರು ರೂಪಾಯಿಗಳಾದರೆ ಸಾಕು ಎಂದರು. ಎಷ್ಟು ಚಪ್ಪಾತಿ ತಿನ್ನುತ್ತೀಯ ಎಂದು ಕೇಳಿದರು. ಶ್ರೀಮಾತೆ ಸ್ವಲ್ಪ ಸಂಕೋಚದಿಂದಲೆ ಐದಾರು ತಿನ್ನುತ್ತೇನೆ ಎಂದು ಹೇಳಿದರು. ಅನಂತರ ಇವರ ಊಟ ಉಪಚಾರಗಳಿಗೆ ತೊಂದರೆ ಇಲ್ಲ ಎಂದು ಭಾವಿಸಿದರು.

ಶ್ರೀರಾಮಕೃಷ್ಣರಿಗೆ ತಮ್ಮ ಮದುವೆಯ ಸಮಯದಲ್ಲಿ ಶ್ರೀಮಾತೆಯ ಮೇಲೆ ಹಾಕಿದ್ದ ಆಭರಣವನ್ನೆಲ್ಲ ಬಿಡಿಸಿ ಕೊಟ್ಟಿದ್ದು ಜ್ಞಾಪಕದಲ್ಲಿತ್ತು. ಆ ಸಮಯದಲ್ಲಿ ಅವರ ತಾಯಿ, ಶಾರದಾದೇವಿಗೆ ತನ್ನ ಮಗ ಬೇಕಾದಷ್ಟು ಒಡವೆಗಳನ್ನು ಅನಂತರ ಮಾಡಿಸಿ ಹಾಕುವನು ಎಂದು ಹೇಳಿದ್ದೂ ಜ್ಞಾಪಕದಲ್ಲಿತ್ತು. ಒಂದು ಸಲ ಮಾರ್ವಾಡಿ ಭಕ್ತನೊಬ್ಬ ಶ್ರೀರಾಮಕೃಷ್ಣರ ಹೆಸರಿ ನಲ್ಲಿ ಬ್ಯಾಂಕಿನಲ್ಲಿ ಹತ್ತು ಸಾವಿರ ರೂಪಾಯಿಗಳನ್ನು ಇಡು ತ್ತೇನೆ ಎಂದು ಅವರಿಗೆ ಹೇಳಿದಾಗ, ಶ್ರೀರಾಮಕೃಷ್ಣರು ತಮಗೆ ಆ ದುಡ್ಡು ಬೇಡವೆಂದೂ, ಬೇಕಾದರೆ ಶಾರದಾದೇವಿಯವರ ಬಳಿಗೆ ಹೋಗಿ ಕೇಳು, ನನ್ನಂತಹ ದರಿದ್ರನನ್ನು ಮದುವೆಯಾಗಿ ಅವ ರಿಗೆ ಯಾವ ಆಭರಣಗಳನ್ನೂ ಧರಿಸುವ ಯೋಗವಿಲ್ಲ ಎಂದು ಹೇಳಿದರು. ಆತ ಶ್ರೀಮಾತೆಯ ಬಳಿಗೆ ಹೋಗಿ ಹಣವನ್ನು ಸ್ವೀಕರಿಸಬೇಕೆಂದು ಕೇಳಿಕೊಂಡಾಗ, ಶ್ರೀಮಾತೆ ಪತಿಗೆ ಬೇಡ

ವಾದ್ದು ತಮಗೂ ಬೇಡ; ನಾನು ತೆಗೆದುಕೊಂಡರೂ ಅವರ ಖರ್ಚಿಗೆ ಉಪಯೋಗಿಸಬೇಕಾಗುವುದು. ಅವರ ವ್ರತಭಂಗ ನಾನು ಮಾಡಲಾರೆ' ಎಂದರು. ಶ್ರೀರಾಮಕೃಷ್ಣರಿಗೆ ಇದು ಗೊತ್ತಾದಾಗ ಅತ್ಯಾನಂದ ಪಟ್ಟರು.

ಶ್ರೀರಾಮಕೃಷ್ಣರು ಗುಡಿಯಲ್ಲಿ ಪೂಜೆ ಮಾಡದೇ ಇದ್ದರೂ ಅವರಿಗೆ ಬರುತ್ತಿದ್ದ ಏಳು ರೂಪಾಯಿಗಳನ್ನು ಒಂದು ಕಡೆ ಡಬ್ಬದಲ್ಲಿ ಇಡುತ್ತಿದ್ದರು. ಒಂದು ದಿನ ಭಕ್ತನೊಬ್ಬನಿಗೆ ಆ ಡಬ್ಬದಲ್ಲಿ ದುಡ್ಡು ಎಷ್ಟು ಇದೆ ನೋಡು ಎಂದು ಹೇಳಿದರು. ಆತ ಸುಮಾರು ಇನ್ನೂರ ಐವತ್ತು ರೂಪಾಯಿಗಳು ಇವೆ ಎಂದ. ಅದರಿಂದ ಚೆನ್ನಾದ ಬಂಗಾರದ ಬಳೆಗಳನ್ನು ಮಾಡಿಸಿ ಶಾರದಾದೇವಿಯವರಿಗೆ ಕೊಡಿ ಎಂದರು. ಆ ಸಮಯದಲ್ಲಿ ಶ್ರೀರಾಮಕೃಷ್ಣರು ಭಕ್ತನಿಗೆ "ಸಕಲ ವಿದ್ಯಾಧಿದೇವತೆಯಾದ ಸರಸ್ವತಿಯೇ ಶಾರದೆಯಂತೆ ನನ್ನ ಕೈ ಹಿಡಿದಿರುವಳು, ಅವರಿಗೆ ಈ ಆಭರಣವನ್ನು ಕೊಡಿ. ಅವರು ಸಂತೋಷಪಟ್ಟರೆ ದೇವಿ ಸಂತೋಷಪಡುವಳು'' ಎಂದರು.

ಶ್ರೀರಾಮಕೃಷ್ಣರು ಪ್ರೀತಿಯಿಂದ ಕೊಟ್ಟ ಆಭರಣವನ್ನು ಶ್ರೀಮಾತೆ ಧರಿಸುತ್ತಿದ್ದರು. ಕೆಲವು ತಪ್ಪು ಕಂಡುಹಿಡಿಯುವ ನಾರಿಯರು, ''ಶ್ರೀರಾಮಕೃಷ್ಣರು ಅಂತಹ ವೈರಾಗ್ಯ ಚಕ್ರವರ್ತಿಗಳು, ಅವರು ಒಂದು ಕಾಸನ್ನೂ ಮುಟ್ಟಲಾರರು. ಆದರೆ ಅವರ ಹೆಂಡತಿ ಬಂಗಾರವನ್ನೇ ಕೈಗೆ ಹಾಕಿಕೊಂಡು ಹೇಗೆ ವೈಯ್ಯಾರ ಮಾಡುತ್ತಿರುವಳು" ಎಂದು ಟೀಕಿಸಿದರು. ಶ್ರೀಮಾತೆಗೆ ಇದು ಗೊತ್ತಾಗಿ ಅವರು ಬಳೆಗಳನ್ನು ತೆಗೆದು ಇಟ್ಟರು. ಇದು ಅವರ ಭಕ್ತರೊಬ್ಬರಿಗೆ ಗೊತ್ತಾಗಿ ಆಕೆ ನೀವು ಏತಕ್ಕೆ ಬಳೆಯನ್ನು ತೆಗೆದಿಟ್ಟರಿ. ಆದರಿಂದ ನಿಮ್ಮ ಪತಿಗೆ

ಸಂತೋಷ ಆಗುವುದು. ನಿಮಗೆ ಅಲ್ಲ ಎಂದು ಹೇಳಿದರು. ಶ್ರೀಮಾತೆ ಅದನ್ನು ಪುನಃ ಧರಿಸಲು ಆರಂಭಿಸಿದರು.

ಹಲವು ವಿಷಯಗಳಲ್ಲಿ ಶ್ರೀಮಾತೆ ತಮ್ಮ ಹೃದಯಕ್ಕೆ ಎಷ್ಟು ಹತ್ತಿರದವರು ಎಂಬುದನ್ನು ಶ್ರೀರಾಮಕೃಷ್ಣರು ತೋರುತ್ತಿದ್ದರು. ಒಂದು ದಿನ ಹಾಸ್ಯವಾಗಿ ಶ್ರೀರಾಮಕೃಷ್ಣರಿಗೂ ಅವರ ಭಕ್ತರೊಬ್ಬರಿಗೂ ಯಾರ ಕಾಂತಿ ಹೆಚ್ಚು ಆಕರ್ಷಣೀಯ ಎಂಬ ವಿಷಯದಲ್ಲಿ ಚರ್ಚೆ ಆರಂಭವಾಯಿತು. ಶ್ರೀರಾಮಕೃಷ್ಣರು ಶ್ರೀಮಾತೆಗೇ ತೀರ್ಪನ್ನು ಕೊಡುವಂತೆ ಕೇಳಿಕೊಂಡರು. ಒಬ್ಬರಾದ ಮೇಲೆ ಒಬ್ಬರು ಶ್ರೀಮಾತೆಯ ಮುಂದೆ ಬಂದು ನಿಂತು ಹೋದರು. ಅನಂತರ ಶ್ರೀಮಾತೆ, ಭಕ್ತನೇ ಹೆಚ್ಚು ಆಕರ್ಷಣೀಯನಾಗಿರುವನು ಎಂದು ತೀರ್ಪನ್ನು ಕೊಟ್ಟರು.

ಒಂದು ಸಲ ಶ್ರೀರಾಮಕೃಷ್ಣರು ಕಾಮಾರಪುಕುರದಲ್ಲಿದ್ದಾಗ ಶ್ರೀಮಾತೆ ಮತ್ತು ಲಕ್ಷ್ಮೀದೇವಿ ಎಂಬ ಮತ್ತೊಬ್ಬ ಹೆಂಗಸರು ಇದ್ದರು. ಇಬ್ಬರೂ ಒಂದೊಂದು ಪಲ್ಯವನ್ನು ಮಾಡಿ ಶ್ರೀರಾಮಕೃಷ್ಣರ ಮುಂದೆ ತಂದರು. ಶ್ರೀರಾಮಕೃಷ್ಣರು ಲಕ್ಷ್ಮೀದೇವಿ ಎಂಬುವಳು ಮಾಡಿದ ಪಲ್ಯವನ್ನು ರುಚಿನೋಡುತ್ತ ಇದನ್ನು ಮಾಡಿದವರು ಕಲ್ಕತ್ತೆಯಲ್ಲಿರುವ ವೈದ್ಯಪ್ರವೀಣ ರಾಮದಾಸನಿಗೆ ಸಮ ಎಂದರು. ಅನಂತರ ಶ್ರೀಮಾತೆಯವರು ಮಾಡಿದುದನ್ನು ತಿಂದು, ಕಲ್ಕತ್ತೆಯಲ್ಲಿರುವ ಏನೂ ತಿಳಿಯದ ಶ್ರೀನಾಥನೆಂಬ ಆಳಲೇಕಾಯಿ ಪಂಡಿತನಿಗೆ ಇವರನ್ನು ಹೋಲಿಸಬಹುದು ಎಂದರು. ಹತ್ತಿರ ಇದ್ದವರೊಬ್ಬರು "ಯಾವಾಗಲೂ ನಿಮಗೆ ಅಡಿಗೆ ಮಾಡಿ ಹಾಕುವುದಕ್ಕೆ ಪ್ರವೀಣೆ ಸಿಕ್ಕುವುದಿಲ್ಲ. ಶ್ರೀಶಾರದಾದೇವಿಯವರಿಗೆ ಚೆನ್ನಾಗಿ ಅಡಿಗೆ ಮಾಡಲು ಬರದೆ ಇರಬಹುದು, ಆದರೆ ಅವರನ್ನು ಕಾಲುಹಿಸಕು ಎನ್ನಬಹುದು,

ಮೈಗೆ ಎಣ್ಣೆ ಸವರು ಎನ್ನಬಹುದು. ಕೂಗಿದ್ದೇ ತಡ ಆಗಲೇ ಹಾಜರಾಗುವರು" ಎಂದು ಹಾಸ್ಯವಾಗಿ ಉತ್ತರ ಕೊಟ್ಟರು. ಶ್ರೀರಾಮಕೃಷ್ಣರು ನಗುತ್ತ ಹೌದು, ಹೌದು ನೀನು ಹೇಳುವುದು ನಿಜ ಎಂದರು.

ಶ್ರೀರಾಮಕೃಷ್ಣರಿಗೆ ಮೊದಲಿನಿಂದಲೂ ಶ್ರೀಮಾತೆಯವರ ಪಾತ್ರವೇನು ಈ ಪ್ರಪಂಚದಲ್ಲಿ ಎಂಬುದು ತಿಳಿದಿತ್ತು. ಅನೇಕ ಜೀವಿಗಳನ್ನು ಜಾಗ್ರತರನ್ನಾಗಿ ಮಾಡುವುದಕ್ಕೆ ತಮ್ಮೊಡನೆ ಅವರು ಬಂದಿರುವರು ಎಂದು ಭಾವಿಸಿದ್ದರು. ಕೆಲವು ವೇಳೆ ಶ್ರೀರಾಮಕೃಷ್ಣರು "ಸುತ್ತಲೂ ಜನರು ಅಜ್ಞಾನದ ಕತ್ತಲಲ್ಲಿ ಕ್ರಿಮಿಗಳಂತೆ ತೊಳಲುತ್ತಿರುವರು. ಅವರನ್ನು ಬೆಳಕಿಗೆ ತರುವುದು ನಿನ್ನ ಕರ್ತವ್ಯ" ಎಂದರು. ಶ್ರೀಮಾತೆ "ನಾನು ಹೆಂಗಸು ಏನುಮಾಡಬಲ್ಲೆ?" ಎಂದರು. ಆಗ ಶ್ರೀರಾಮಕೃಷ್ಣರು ಹೀಗೆ ಹೇಳಿದರು: "ಹೆಂಗಸಾದರೇನು? ಆಕೆ ಗುರುವಾಗ ಲಾರಳೆ. ಆಕೆಯೇ ಮಹಾಮಾಯೆ. ಆಕೆ ಇಚ್ಛೆಪಟ್ಟರೆ ಕೋಟಿರಾಮರು ಕೃಷ್ಣರು ಜಗತ್ತಿನಲ್ಲಿ ಉದ್ಭವಿಸಿಸುವರು" ಶ್ರೀರಾಮಕೃಷ್ಣರೇ ಶ್ರೀಮಾತೆಗೆ ತಾವು ಧ್ಯಾನ ಮಾಡಿ ಸಿದ್ಧಿ ಪಡೆದ ಮಂತ್ರಗಳನ್ನು ತಿಳಿಸಿ ಮುಂದೆ ಬರುವ ಶಿಷ್ಯರ ಸ್ವಭಾವಕ್ಕೆ ಅನುಗುಣವಾಗಿ ಉಪದೇಶ ಮಾಡು ಎಂದು ಹೇಳಿದರು. ಶ್ರೀಮಾತೆಯವರೇ ತಾವು ಉಪದೇಶ ಕೊಡುವಾಗ "ಶ್ರೀರಾಮ ಕೃಷ್ಣರೇ ನಮಗೆ ಈ ಮಂತ್ರಗಳನ್ನೆಲ್ಲ ಕಲಿಸಿಕೊಟ್ಟರು. ಅವರ ತಪಸ್ ಶಕ್ತಿ ಇದರಲ್ಲಿ ಸುಪ್ತವಾಗಿದೆ. ಇದರ ಸಹಾಯದಿಂದ ಮಾಯೆಯನ್ನು ದಾಟುವುದರಲ್ಲಿ ಸಂದೇಹವಿಲ್ಲ ಎಂದು ಹೇಳು ತ್ತಿದ್ದರು.

ಶ್ರೀರಾಮಕೃಷ್ಣರು ಶ್ರೀಮಾತೆಯವರನ್ನು ಒಂದು ಬರಟೀ

ಮಾತಿನಿಂದಲೂ ನೋಯಿಸಿದವರಲ್ಲ. ಒಂದು ವೇಳೆ ತಿಳಿಯದೆ ಹಾಗೆ ಮಾಡಿದ್ದರೂ ಕ್ಷಮಾಪಣೆ ಬೇಡದೆ ಇದ್ದರೆ ಇವರಿಗೆ ಸಮಾಧಾನವಾಗುತ್ತಿರಲಿಲ್ಲ. ಒಮ್ಮೆ ದಕ್ಷಿಣೇಶ್ವರದ ಕೋಣೆಯಲ್ಲಿ ಇವರು ಕುಳಿತಿದ್ದಾಗ, ಶ್ರೀಮಾತೆ ಇವರ ಕೋಣೆಗೆ ಯಾವುದೋ ಕೆಲಸಕ್ಕೆ ಬಂದವರು, ಹೋಗುವಾಗ ಬಾಗಿಲನ್ನು ಹಾಗೆಯೇ ತೆರೆದು ಹೋದರು. ಶ್ರೀರಾಮಕೃಷ್ಣರು ಪರಿಚಾರಕ ಹೆಂಗಸು ಇರಬಹುದೆಂದು ಬಾಗಿಲನ್ನು ಮುಚ್ಚಿ ಹೋಗಿ ಎಂದು ತೀಕ್ಷ್ಣವಾಗಿ ಹೇಳಿದರು. ಮುಚ್ಚುವುದಕ್ಕೆ ಶ್ರೀಮಾತೆ ಬಂದಾಗ ಶ್ರೀರಾಮಕೃಷ್ಣರಿಗೆ ತುಂಬಾ ವ್ಯಥೆಯಾಯಿತು. ಯಾರೋ ಪರಿಚಾರಿಕರಿರಬಹುದೆಂದು ನಾನು ಹಾಗೆ ಒರಟಾಗಿ ಹೇಳಿದೆ ದಯವಿಟ್ಟು ಕ್ಷಮಿಸು ಎಂದು ಹೇಳಿಕೊಂಡರು. ರಾತ್ರಿಯೆಲ್ಲ ಅವರಿಗೆ ನಿದ್ದೆ ಬರಲಿಲ್ಲವಂತೆ, ಇಂತಹ ಮಾತಿನ ಪ್ರಯೋಗವನ್ನು ಶ್ರೀಮಾತೆಯ ಮೇಲೆ ಮಾಡಿದ್ದಕ್ಕೆ. ಬೆಳಗ್ಗೆ ಹೊತ್ತಿಗೆ ಮುಂಚೆಯೇ ಅವರ ಕೋಣೆಯ ಹತ್ತಿರ ಹೋಗಿ ಮತ್ತೊಮ್ಮೆ ಕ್ಷಮಾಪಣೆ ಕೋರಿಕೊಂಡರಂತೆ. ಅನಂತರ ಶ್ರೀಮಾತೆ, ನಾನು ಯಾರ ಕೈಯನ್ನು ಹಿಡಿದಿದ್ದೆನೊ ಅವರು ಒಂದು ಹೂವಿನಿಂದ ಹೊಡೆದವರಲ್ಲ, ಒಂದು ಒರಟು ಮಾತಿನಿಂದ ನೋಯಿಸಿದವರಲ್ಲ ಎಂದು ಹೇಳುತ್ತಿದ್ದರು.

ಅನೇಕ ಭಕ್ತಾದಿಗಳು ಶ್ರೀರಾಮಕೃಷ್ಣರಿಗೆ ಹಣ್ಣು, ಸಿಹಿ ತಿಂಡಿ ಇವುಗಳನ್ನು ತಂದುಕೊಡುತ್ತಿದ್ದರು. ಶ್ರೀರಾಮಕೃಷ್ಣರು ಅದನ್ನು ಶ್ರೀಮಾತೆಯ ಕೋಣೆಗೆ ಕಳುಹಿಸುತ್ತಿದ್ದರು. ಶ್ರೀಮಾತೆ ಶ್ರೀರಾಮಕೃಷ್ಣರಿಗೆ ಸ್ವಲ್ಪ ಭಾಗವನ್ನು ತೆಗೆದಿಟ್ಟು ಮಿಕ್ಕಿದುದನ್ನು ಭಕ್ತಾದಿಗಳಿಗೆ ಹಂಚಿಬಿಡುತ್ತಿದ್ದರು. ಶ್ರೀರಾಮಕೃಷ್ಣರು ಒಂದುದಿನ, ಹೆಂಗಸು ಇಷ್ಟು ಧಾರಾಳಿಗಳಾದರೆ

ಸಂಸಾರವನ್ನು ಹೇಗೆ ನಿರ್ವಹಿಸುವುದು ಎಂದು ಹೇಳಿದರು ಈ ಮಾತನ್ನು ಕೇಳಿ ಶ್ರೀಮಾತೆಯ ಕಣ್ಣು ಹನಿಗೂಡಿತು. ದುಃಖ ದಿಂದ ತಮ್ಮ ಕೋಣೆಗೆ ಹೋಗುತ್ತಿದ್ದರು. ಶ್ರೀರಾಮಕೃಷ್ಣರು ಹತ್ತಿರ ಇದ್ದ ಶಿಷ್ಯನನ್ನು ಕರೆದು, ''ಅವರನ್ನು ಕರೆದುಕೊಂಡು ಬನ್ನಿ. ಅವರ ಕಣ್ಣಿನಿಂದ ಹನಿಯೊಂದು ಬಿದ್ದರೆ ನನ್ನ ವೈರಾಗ್ಯವೆಲ್ಲ ಹಾರಿಹೋಗುವುದು'' ಎಂದರು. ಶ್ರೀಮಾತೆ ಬಂದ ಮೇಲೆ ಅವರಿಗೆ ಸಮಾಧಾನ ಮಾಡಿ ಕಳುಹಿಸಿದರು.

ಮತ್ತೊಮ್ಮೆ ಶ್ರೀ ಶಾರದಾದೇವಿಯ ಬಳಿಗೆ ವೃದ್ಧಸ್ತ್ರೀ ಯೊಬ್ಬಳು ಬರುತ್ತಿದ್ದಳು. ಆಕೆ ತನ್ನ ಯೌವನದಲ್ಲಿ ಅಷ್ಟು ಶುದ್ಧವಾದ ಜೀವನವನ್ನು ನಡೆಸಿದವಳಲ್ಲ. ಶ್ರೀಮಾತೆ ಆಕೆಯ ಜೀವನಕಥೆಯನ್ನು ಕೇಳಿ ಸಹಾನುಭೂತಿ ತೋರಿ ಹೋಗುವ ಸಮಯದಲ್ಲಿ ಏನನ್ನಾದರೂ ತಿನ್ನಲು ಕೊಡುತ್ತಿದ್ದರು. ಶ್ರೀರಾಮ ಕೃಷ್ಣರು ಶ್ರೀಮಾತೆಗೆ ಆಕೆಯೊಡನೆ ಅಷ್ಟು ಸದರವಾಗಿ ಇರ ಬೇಡವೆಂದು ಹೇಳಿದರು. ಆದರೆ ಹಾಗೆ ಬುದ್ಧಿವಾದವನ್ನು ಕೊಟ್ಟಾದ ಮೇಲೆಯೂ ಶ್ರೀಮಾತೆ ಹಿಂದಿನಂತೆಯೇ ಅವರೊಡನೆ ಅನುಕಂಪದಿಂದ ವರ್ತಿಸುತ್ತಿರುವುದನ್ನು ನೋಡಿದಾಗ ತಮ್ಮ ಮಾತನ್ನು ಕೇಳಲಿಲ್ಲವಲ್ಲ, ಎಂದು ಕೋಪಿಸಿಕೊಳ್ಳಲಿಲ್ಲ. ಸತಿಯ ಹೃದಯದಲ್ಲಿರುವ ಪರೋಪಕಾರಬುದ್ಧಿಯನ್ನು ನೋಡಿ ಸಂತೋಷಪಟ್ಟರು.

ಒಂದು ದಿನ ಶ್ರೀಮಾತೆ ಶ್ರೀರಾಮಕೃಷ್ಣರಿಗೆ ಮಧ್ಯಾಹ್ನ ಊಟವನ್ನು ತೆಗೆದುಕೊಂಡು ಹೋಗುವುದರಲ್ಲಿದ್ದರು. ಅಷ್ಟು ಹೊತ್ತಿಗೆ ಸರಿಯಾಗಿ ಕಲ್ಕತ್ತೆಯಿಂದ ಭಕ್ತಳೊಬ್ಬಳು ಬಂದಳು. ತಾನು ಶ್ರೀರಾಮಕೃಷ್ಣರಿಗೆ ಊಟವನ್ನು ತೆಗೆದುಕೊಂಡು ಹೋಗುತ್ತೇನೆ ಎಂದು ಕೇಳಿಕೊಂಡಳು. ಶ್ರೀಮಾತೆ ಆಕೆಗೆ

ಅವಕಾಶವನ್ನು ಕೊಟ್ಟರು. ಆ ಹೊತ್ತು ಶ್ರೀರಾಮಕೃಷ್ಣರಿಗೆ ಊಟವನ್ನು ಮಾಡುವುದಕ್ಕೆ ಆಗಲಿಲ್ಲ. ಏಕೆಂದರೆ ಅದನ್ನು ತಂದವರು ಅಷ್ಟು ಶುದ್ಧ ಚಾರಿತ್ರದವರಲ್ಲ. ಶ್ರೀಮಾತೆಯನ್ನು ಸಾಯಂಕಾಲ ಕರೆಸಿ ಇನ್ನು ಮೇಲೆ ಸಿಕ್ಕಿದವರ ಕೈಯಲ್ಲಿ ಊಟವನ್ನು ಕಳುಹಿಸಬೇಡ ಎಂದರು. ಶ್ರೀಮಾತೆ ಹಾಗೆ ಮಾತನ್ನು ಕೊಡಲು ತಮಗೆ ಸಾಧ್ಯವಿಲ್ಲ ಎಂದರು. ಯಾರಾದರೂ ಬಂದು ತಮಗೆ ನಿಮ್ಮ ಸೇವೆಮಾಡಲು ಅವಕಾಶ ಕೊಡಿ ಎಂದು ಕೇಳಿದರೆ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಲು ಮನಸ್ಸು ಬರುವುದಿಲ್ಲ ಎಂದರು. ಇದನ್ನು ಕೇಳಿದಾಗ ಶ್ರೀರಾಮಕೃಷ್ಣರು ಕೋಪಗೊಳ್ಳದೆ ಶ್ರೀಮಾತೆಯಲ್ಲಿ ಪತಿತರ ಮೇಲೆ ಇರುವ ಅನುಕಂಪ ಮತ್ತು ಪ್ರೇಮಕ್ಕೆ ಆನಂದಿಸಿದರು.

ಶ್ರೀರಾಮಕೃಷ್ಣರ ಬಳಿಗೆ ಬರುತ್ತಿದ್ದ ಅನೇಕ ಹುಡುಗರಿಗೆ ಶ್ರೀಶಾರದಾದೇವಿ ಅಡಿಗೆ ಮಾಡಿ ಬಡಿಸುತ್ತಿದ್ದರು. ಶ್ರೀರಾಮಕೃಷ್ಣರೇ ಹುಡುಗರ ದೇಹದಾರ್ಢ್ಯವನ್ನು ನೋಡಿ ಒಬ್ಬೊಬ್ಬರಿಗೆ ಇಷ್ಟು ರೊಟ್ಟಿಯನ್ನು ಕೊಡು ಎಂದು ಹೇಳುತ್ತಿದ್ದರು. ಒಂದು ದಿನ ಶ್ರೀರಾಮಕೃಷ್ಣರು ಒಬ್ಬ ಹುಡುಗನನ್ನು, ನೀನು ರಾತ್ರಿ ಎಷ್ಟು ರೊಟ್ಟಿಯನ್ನು ತೆಗೆದುಕೊಳ್ಳುತ್ತೀಯ ಎಂದು ಕೇಳಿದರು. ಆತ ಐದೋ ಆರೋ ಎಂದು ಹೇಳಿದನು. ಶ್ರೀರಾಮಕೃಷ್ಣರು ಅಷ್ಟೊಂದನ್ನು ಏತಕ್ಕೆ ತೆಗೆದುಕೊಳ್ಳುತ್ತೀಯ? ಧ್ಯಾನಮಾಡುವ ಕಾಲದಲ್ಲಿ ನಿದ್ರೆ ಮಾಡಬೇಕಾಗುವುದು ಎಂದರು. ಹುಡುಗ, ಶ್ರೀಶಾರದದೇವಿಯವರು ಎಷ್ಟು ಕೊಡುವರೊ ಅಷ್ಟನ್ನು ತಿನ್ನುವುದು ನನ್ನ ಸ್ವಭಾವ ಎಂದ. ಶ್ರೀರಾಮಕೃಷ್ಣರು ಶಾರದಾದೇವಿ ಬಳಿಗೆ ಹೋಗಿ "ನೀನು ಹುಡುಗರಿಗೆ ಜಾಸ್ತಿ ತಿನ್ನುವುದಕ್ಕೆ ಕೊಟ್ಟು ಅವರನ್ನು ಸೋಮಾರಿಗಳನ್ನಾಗಿ ಮಾಡುತ್ತಿರುವೆ"

ಎಂದರು. ಆಗ ಶ್ರೀಶಾರದಾದೇವಿ ಅವರು "ಅವನು ಎರಡು ರೊಟ್ಟಿಯನ್ನು ಜಾಸ್ತಿ ತೆಗೆದುಕೊಂಡಿರುವನೆಂದು ಏತಕ್ಕೆ ಇಷ್ಟು ಗಲಾಟೆಮಾಡುವುದು. ಅವನ ಧ್ಯಾನದ ಜವಾಬ್ದಾರಿಯನ್ನು ನಾನು ನೋಡಿಕೊಳ್ಳುತ್ತೇನೆ. ನೀವು ಅವನ ಮೇಲೆ ರೇಗಬೇಡಿ" ಎಂದರು.

ಮುಖ್ಯವಾದ ಪ್ರಸಂಗಗಳಲ್ಲಿ ಶ್ರೀಶಾರದಾದೇವಿ ಅವರ ಮನೋಭಿಪ್ರಾಯವನ್ನು ತಿಳಿದು ಅವರನ್ನು ತಮ್ಮ ರೀತಿಯಂತೆಯೇ ಮಾಡೆಂದು ಬಲಾತ್ಕರಿಸದೆ ಅವರಿಗೆ ಸೂಕ್ತ ತೋರಿದ ರೀತಿಯಲ್ಲಿ ಮಾಡುವಂತೆ ಸ್ವಾತಂತ್ರ್ಯವನ್ನು ಕೊಡುತ್ತಿದ್ದರು. ಶ್ರೀರಾಮಕೃಷ್ಣರು ತಮ್ಮ ಸತಿಯ ಸೇವೆಯನ್ನು ಸ್ವೀಕರಿಸುತ್ತಿದ್ದರು. ಅವರೊಂದಿಗೆ ವಿನೋದವಾಗಿ ಮಾತನಾಡುತ್ತಿದ್ದರು. ಆದರೂ ಕೂಡ ಅತ್ಯಂತ ಗೌರವವನ್ನು ಕೊಡುತ್ತಿದ್ದರು. ಎಂದಿಗೂ ಶ್ರೀಶಾರದಾದೇವಿಯವರ ದೇವತ್ವವನ್ನು ಮರೆತವರಲ್ಲ.

ಶ್ರೀಶಾರದಾದೇವಿ ಅವರು ಶ್ರೀರಾಮಕೃಷ್ಣರ ಸಾನ್ನಿಧ್ಯದಲ್ಲಿ ಹದಿಮೂರು ವರುಷಗಳನ್ನು ಕಳೆದರು. ಆ ಸಮಯದಲ್ಲಿ ಆರೇಳು ವೇಳೆ ತಮ್ಮ ಹಳ್ಳಿಯಾದ ಜಯರಾಮವಟಿಗೆ ಹೋಗಿ ಬಂದರು. ಅದರಲ್ಲಿ ಒಂದು ಸಲ ಅವರು ಜಯರಾಮವಟಿಯಿಂದ ಬರುತ್ತಿದ್ದಾಗ ನಡೆದ ಪ್ರಸಂಗ ಚಿತ್ತಾಕರ್ಷಕವಾಗಿದೆ. ಅದನ್ನು ಕೆಳಗೆ ಕೊಡುವೆವು. ಇದರಿಂದ ಶ್ರೀಶಾರದಾದೇವಿ ಅವರಲ್ಲಿ ಪರಿಸ್ಥಿತಿಯನ್ನು ಹೇಗೆ ಎದುರಿಸುವ ಶಕ್ತಿ ಇತ್ತು ಎನ್ನುವುದು ಗೊತ್ತಾಗುವುದು.

ಜಯರಾಮವಟಿಯಿಂದ ದಕ್ಷಿಣೇಶ್ವರಕ್ಕೆ ಬರಬೇಕಾದರೆ ಮಧ್ಯದಲ್ಲಿ ಒಂದು ದಟ್ಟವಾದ ಕಾಡಿನ ಮೂಲಕ ಹೋಗಬೇಕಾಗಿತ್ತು. ಗಾಡಿ ಹೋಗಲು ಅನುಕೂಲವಾದ ರಸ್ತೆ ಇರಲಿಲ್ಲ. ತುಂಬ

ಶ್ರೀಮಂತರಾದರೆ ಪಲ್ಲಕ್ಕಿಯನ್ನು ಮಾಡಿಕೊಂಡು ಹೋಗಬೇಕಾಗಿತ್ತು. ಉಳಿದವರೆಲ್ಲ ಕಾಲುನಡಿಗೆಯಲ್ಲಿ ದಾರಿಯನ್ನು ಸಾಗಿಸಬೇಕಾಗಿತ್ತು. ದಾರಿ ಮಧ್ಯದಲ್ಲಿರುವ ದಟ್ಟವಾದ ಕಾಡಿನಲ್ಲಿ ಒಂದು ಕಾಳಿಯಗುಡಿ ಇದೆ. ಹಿಂದಿನ ಕಾಲದಲ್ಲಿ ಅಲ್ಲಿ ಕೆಲವು ಡಕಾಯಿತರು ದೇವಿಗೆ ನರಬಲಿಯನ್ನು ಕೊಡುತ್ತಿದ್ದರಂತೆ. ಒಮ್ಮೆ ಶಾರದಾದೇವಿಯವರು ಈ ದಾರಿಯಲ್ಲಿ ಕಾಲುನಡಿಗೆಯಲ್ಲಿ ಹೊರಟಿದ್ದರು. ಅವರೊಡನೆ ಇನ್ನೂ ಹಲವರು ಇದ್ದರು. ಅವರೆಲ್ಲ ಕತ್ತಲಾಗುವುದರೊಳಗೆ ಕಾಡನ್ನು ದಾಟಿಬಿಡುವ ಎಂದು ವೇಗವಾಗಿ ಹೋಗುತ್ತಿದ್ದರು. ಆದರೆ ಶಾರದಾದೇವಿಯವರು ಇತರರ ವೇಗಕ್ಕೆ ನಡೆಯಲಾಗಲಿಲ್ಲ. ಅವರು ಹಿಂದೆ ಬಿದ್ದರು. ಕ್ರಮೇಣ ಒಂಟಿಯಾದರು. ಕತ್ತಲು ಕವಿಯಿತು. ಆ ಸಮಯದಲ್ಲಿ ಒಬ್ಬ ದೊಡ್ಡ ಆಜಾನುಬಾಹು ಹೆಗಲಮೇಲೆ ಒಂದು ದೊಣ್ಣೆಯನ್ನು ಇಟ್ಟುಕೊಂಡು ಬರುತ್ತಿದ್ದನು. ಅವನನ್ನು ನೋಡಿ ಶಾರದಾದೇವಿ ಅವರಿಗೆ ಸ್ವಲ್ಪ ಸಂಶಯ ಆಯಿತು. ಕಾಡಿನ ಮಧ್ಯದಲ್ಲಿ ಯಾರೂ ಇಲ್ಲದೆ ಇರುವಾಗ, ಸುಮ್ಮನೆ ಕಿರುಚುವುದು ಮತ್ತು ಓಡಿಹೋಗುವುದು ಪ್ರಯೋಜನವಿಲ್ಲವೆಂದು ಅವನನ್ನು ನೋಡುತ್ತ ಸುಮ್ಮನೆ ನಿಂತರು. ಆತ ಕತ್ತಲೆಯಲ್ಲಿ ಹೋಗುತ್ತಿರುವ ಹೆಂಗಸು ಯಾರು ಎಂದು ಪ್ರಶ್ನೆಮಾಡಿದನು. ಶ್ರೀಮಾತೆ "ನಾನು ಅಪ್ಪ, ನನ್ನ ಜೊತೆಯವರು ಮುಂದೆ ಹೊರಟು ಹೋದರು. ನನಗೆ ದಾರಿ ತಪ್ಪಿದಂತೆ ಕಾಣುತ್ತಿದೆ. ನಿನ್ನ ಅಳಿಯ ದಕ್ಷಿಣೇಶ್ವರದಲ್ಲಿ ಕಾಳಿಕಾಗುಡಿಯಲ್ಲಿ ಇದ್ದಾರೆ. ನಾನು ಅಲ್ಲಿಗೆ ಹೊರಟಿರುವುದು. ನೀನು ನನ್ನನ್ನು ಅಲ್ಲಿಯವರೆಗೆ ಬಿಟ್ಟರೆ ಅವರು ತುಂಬಾ ಸಂತೋಷಪಡುವರು" ಎಂದರು.

ಅಷ್ಟರಲ್ಲಿಯೇ ಮತ್ತೊಂದು ಸ್ತ್ರೀವ್ಯಕ್ತಿ ಅಲ್ಲಿಗೆ ಬಂದಿತು.

ಆಕೆ ಮಾತನಾಡುತ್ತಿದ್ದ ಪುರುಷನ ಪತ್ನಿ. ಆಕೆಯನ್ನು ನೋಡಿ ಶಾರದಾದೇವಿ ಅವರಿಗೆ ಸ್ವಲ್ಪ ಧೈರ್ಯ ಬಂದಿತು. ಅವಳ ಹತ್ತಿರ ಹೋಗಿ ಅವರ ಕೈಯನ್ನು ಹಿಡಿದುಕೊಂಡು "ನಾನು ನಿನ್ನ ಮಗಳು ಶಾರದೆ. ಜೊತೆಯವರು ಹೊರಟುಹೋದರು. ಬಹಳ ಕಷ್ಟದಲ್ಲಿ ಸಿಕ್ಕಿಬಿದ್ದಿರುವೆನು. ದೇವರೇ ನನ್ನನ್ನು ಪಾರುಮಾಡಲು ತಂದೆಯನ್ನು ನಿನ್ನನ್ನು ಕಳುಹಿಸಿದ. ಇಲ್ಲದೇ ಇದ್ದರೆ ನನ್ನ ಗತಿ ಏನಾಗುತ್ತಿತ್ತೊ ! ಎಂದು ಹೇಳಿದರು. ಆಪತ್ತಿನಲ್ಲಿ ಸಿಕ್ಕಿದ ಅಬಲೆಯ ಮಾತಿಗೆ ಇಬ್ಬರೂ ಮನಕರಗಿದರು. ಅವರು ಶ್ರೀಶಾರದಾದೇವಿಯನ್ನು ತಮ್ಮ ಮಗಳೆಂದು ಭಾವಿಸಿ, ಅವರನ್ನು ಸಮಾಧಾನ ಮಾಡಿ ಹೆಚ್ಚು ನಡೆಯಗೊಡದೆ, ಹತ್ತಿರ ಇದ್ದ ತಲೆಭಲೋ ಎಂಬ ಹಳ್ಳಿಯಲ್ಲಿ, ತಮಗೆ ಪರಿಚಿತರಾದ ಒಬ್ಬರ ಮನೆಯಲ್ಲಿ ಅವರಿಗೆ ತಂಗಲು ಅಣಿಮಾಡಿದರು. ರಾತ್ರಿ ಊಟಕ್ಕೆ ಅಂಗಡಿಯಿಂದ ಏನನ್ನೊ ತಂದುಕೊಟ್ಟರು. ಹೆಂಗಸು ಶಾರದಾದೇವಿಯವರಿಗೆ ಮಲಗಲು ಹಾಸಿಗೆಯನ್ನು ಮಾಡಿಕೊಟ್ಟಳು. ಮಾರನೆ ದಿನ ಬೆಳಗ್ಗೆ ಎದ್ದು ತಾರಕೇಶ್ವರದವರೆಗೂ ನಡೆದುಕೊಂಡು ಹೋಗಿ ಅಲ್ಪ ಸ್ವಲ್ಪ ವಿಶ್ರಮಿಸಿಕೊಂಡರು.

ತನ್ನ ಗಂಡನಿಗೆ ''ನಮ್ಮ ಮಗಳು ಶಾರದೆ ಏನನೂ ತಿಂದಿಲ್ಲ. ಬೇಗ ಹೋಗಿ ತಾರಕನಾಥನ ಪೂಜೆ ಮಾಡಿ, ಅಂಗಡಿಗೆ ಹೋಗಿ ಸಾಮಾನನ್ನು ತೆಗೆದುಕೊಂಡು ಬನ್ನಿ. ಈ ದಿನ ಹಬ್ಬದ ಊಟವನ್ನು ಮಗಳಿಗೆ ಉಣ್ಣಿಸಬೇಕು'' ಎಂದು ತನ್ನ ಗಂಡನನ್ನು ಕಳುಹಿಸಿದಳು.

ಆತ ಸಾಮಾನನ್ನು ತರಲು ಪೇಟೆಗೆ ಹೋದ. ಅಷ್ಟು ಹೊತ್ತಿಗೆ ಶಾರದಾದೇವಿಯವರೊಡನೆ ಬಂದ ಜನರು ಅಲ್ಲಿ ಇಲ್ಲಿ

ಹುಡುಕುತ್ತ ಇವರು ಇರುವ ಸ್ಥಳಕ್ಕೆ ಬಂದರು. ಅವರಿಗೆ ಶಾರದಾದೇವಿ ತಮ್ಮ ಹೊಸ ತಂದೆ ತಾಯಿಗಳನ್ನು ತೋರಿಸಿ "ಇವರು ನೆನ್ನೆ ನನ್ನ ಸಹಾಯಕ್ಕೆ ಬರದೇ ಇದ್ದರೆ ನನ್ನ ಗತಿ ಏನಾಗುತ್ತಿತ್ತೊ" ಎಂದರು. ಅಪರಿಚಿತ ತಂದೆತಾಯಿಗಳು ಶಾರದಾದೇವಿ ಅವರಿಗೆ ಅಡಿಗೆ ಮಾಡಿ ಊಟ ಕೊಟ್ಟು ಕಂಬನಿ ದುಂಬಿ ಬೀಳ್ಕೊಟ್ಟರು. ಶ್ರೀಶಾರದಾದೇವಿ ಅವರಿಗೂ ತಾವು ಬಿಟ್ಟು ಹೋಗುವ ಕಾಲದಲ್ಲಿ ಬರುವ ಕಣ್ಣೀರನ್ನು ತಡೆಯಲು ಆಗಲಿಲ್ಲ. ಒಂದು ರಾತ್ರಿಯ ಸಂಬಂಧ ಅವರಲ್ಲಿ ಅಷ್ಟೊಂದು ಬಾಂಧವ್ಯವನ್ನು ಹುಟ್ಟಿಸಿತ್ತು. ಇಬ್ಬರ ಜಾತಿಯೇ ಬೇರೆ ಆದರೂ ಹೆತ್ತ ತಂದೆತಾಯಿಗಳ ಪ್ರೇಮವನ್ನು ತೋರಿಸಿದ್ದರು. ಶ್ರೀಶಾರದಾದೇವಿ ಅವರು ಅವರಿಗೆ ದಕ್ಷಿಣೇಶ್ವರಕ್ಕೆ ಬರಲು ಆಹ್ವಾನ ಕೊಟ್ಟರು. ಆ ಹೆಂಗಸು ದುಃಖದಿಂದ ಸ್ವಲ್ಪ ದೂರದ ವರೆಗೆ ಶಾರದಾದೇವಿ ಅವರೊಡನೆ ನಡೆದುಕೊಂಡು ಹೋಗಿ ಪಕ್ಕದ ಹೊಲದಲ್ಲಿ ಬೆಳೆದ ಬಟಾಣಿಯನ್ನು ಕೊಯ್ದು ಶಾರದಾ ದೇವಿ ಸೆರಗಿನಲ್ಲಿ ಕಟ್ಟಿ "ರಾತ್ರಿ ಫಲಹಾರ ಮಾಡುವಾಗ ಅದನ್ನು ತಿನ್ನು" ಎಂದು ಹೇಳಿ ಅವರನ್ನು ಬೀಳ್ಕೊಟ್ಟರು.

ಶ್ರೀಶಾರದಾದೇವಿಯವರ ಆಹ್ವಾನವನ್ನು ಮನ್ನಿಸಿ ಆ ಅಪರಿಚಿತ ದಂಪತಿಗಳು ಅನೇಕವೇಳೆ ದಕ್ಷಿಣೇಶ್ವರಕ್ಕೆ ಬಂದು ಹೋಗುತ್ತಿದ್ದರು. ಬರುವಾಗ ಮಗಳಿಗೆ ಸ್ವಲ್ಪ ತಿಂಡಿಯನ್ನು ತರುತ್ತಿದ್ದರು. ಶ್ರೀಶಾರದಾದೇವಿ ಅವರಿಂದ ಸಮಾಚಾರವನ್ನು ತಿಳಿದುಕೊಂಡ ಶ್ರೀರಾಮಕೃಷ್ಣರು ಅವರಿಬ್ಬರಿಗೂ ಅಳಿಯನಂತೆ ಉಪಚಾರಮಾಡುತಿದ್ದರು.

ಶ್ರೀರಾಮಕೃಷ್ಣರಿಗೆ ಬಂದ ಭಕ್ತರೊಡನೆ ಮಾತನಾಡಿ ಕೊನೆಗೆ ಗಂಟಲಿನ ವ್ರಣಪ್ರಾಪ್ತವಾಯಿತು. ಕಲ್ಕತ್ತೆಯ

ಪ್ರಖ್ಯಾತ ವೈದ್ಯರೆಲ್ಲ ಬಂದು ಚಿಕಿತ್ಸೆಮಾಡಿ ಹೋದರು. ಆದರೂ ಏನೂ ಪ್ರಯೋಜನವಾಗಲಿಲ್ಲ. ಅವರನ್ನು ಕಲ್ಕತ್ತೆಯಲ್ಲಿ ಎಲ್ಲಿಯಾದರೂ ಇಟ್ಟರೆ ವೈದ್ಯರಿಗೆ ಮತ್ತು ಶಿಷ್ಯರಿಗೆ ಬಂದು ಹೋಗಲು ಅನುಕೂಲವಾಗುತ್ತದೆ ಎಂದು ಶ್ಯಾಮಪುಕುರದ ಒಂದು ಮನೆಯಲ್ಲಿ ಕೆಲವು ಕಾಲ ಶ್ರೀರಾಮಕೃಷ್ಣರನ್ನು ಇರಿಸಿದ್ದರು. ಆಗ ಶ್ರೀಶಾರದಾದೇವಿ ದಕ್ಷಿಣೇಶ್ವರದಲ್ಲಿಯೇ ಇದ್ದರು. ಆದರೆ ಶ್ರೀಶಾರದಾದೇವಿಯವರೇ ಶ್ರೀರಾಮಕೃಷ್ಣರ ಊಟ ಉಪಚಾರಗಳನ್ನು ನೋಡಿಕೊಂಡರೆ ಉತ್ತಮವಾಗುವುದೆಂದು ಶಿಷ್ಯರು ಅನಂತರ ಅವರನ್ನು ಕರೆದುಕೊಂಡು ಬಂದರು. ಸುಮಾರು ಮೂರು ತಿಂಗಳು ಇಲ್ಲಿದ್ದರು. ಈ ಮನೆ ಅಷ್ಟು ಚೆನ್ನಾಗಿರಲಿಲ್ಲ. ಅನಂತರ ಕಾಶೀಪುರದ ಉದ್ಯಾನವನದ ಮಧ್ಯದಲ್ಲಿ ಒಂದು ಮನೆಯನ್ನು ಮಾಡಿದರು. ಹಿಂದಿನ ಮನೆಗಿಂತ ಅದು ಅನುಕೂಲವಾಗಿತ್ತು. ವೈದ್ಯರು ತಮ್ಮ ಕುಶಲತೆಯನ್ನೆಲ್ಲ ತೋರಿ ಚಿಕಿತ್ಸೆ ಮಾಡಿದರು. ಶಿಷ್ಯರು ಮತ್ತು ಶಾರದಾದೇವಿ ತಮ್ಮ ಕೈಲಾದ ಶುಶ್ರೂಷೆಯನ್ನೆಲ್ಲ ಮಾಡಿದರು. ಆದರೂ ರೋಗ ಉಲ್ಬಣಾವಸ್ಥೆಯನ್ನು ತಾಳಿತು. ಶ್ರೀಶಾರದಾದೇವಿ ಅವರು ಇನ್ನು ಮಾನವವೈದ್ಯನ ಕೈಯಿಂದ ಏನೂ ಸಾಧ್ಯವಿಲ್ಲವೆಂದು ತಿಳಿದು. ಹತ್ತಿರ ಇದ್ದ ತಾರಕೇಶ್ವರ ದೇವಸ್ಥಾನಕ್ಕೆ ಹೋಗಿ ಅಲ್ಲಿ ಎರಡುದಿನ ಪ್ರಾರ್ಥನೆ ಮತ್ತು ಉಪವಾಸದಲ್ಲಿ ಕಳೆದರು. ಎರಡನೆಯ ದಿನ ರಾತ್ರಿ ಅವರಿಗೊಂದು ದೃಶ್ಯ ಕಂಡಿತು. ಅದರಲ್ಲಿ ಒಬ್ಬ ದೊಣ್ಣೆಯಿಂದ ಮಡಿಕೆಗಳನ್ನು ಒಡೆಯುತ್ತಿರುವಂತೆ ತೋರಿತು. ಇದಾದಮೇಲೆ ಅವರಿಗೆ ಮನಸ್ಸಿನಲ್ಲಿ ಒಂದು ವೈರಾಗ್ಯಭಾವ ಮೂಡಿತು. ಗಂಡಹೆಂಡತಿ ಎಂಬುದೆಲ್ಲ ಕೆಲವು ದಿನದ ಸಂಬಂಧ. ಜೀವ ಇರುವ ದೇಹ,

ಮಡಕೆಯಂತೆ ಒಂದಲ್ಲ ಒಂದು ದಿನ ಒಡೆದುಹೋಗುವುದು. ಎಲ್ಲರ ದೇಹವೂ ಅಷ್ಟೆ. ಕೆಲವರು ಮುಂಚೆ, ಇನ್ನು ಕೆಲವರು ಆಮೇಲೆ, ಅಷ್ಟೆ ವ್ಯತ್ಯಾಸ. ಈಶ್ವರೇಚ್ಛೆ ಇದ್ದಂತೆ ಆಗಲಿ ಎಂದು ಶಿವನಿಗೆ ನಮಸ್ಕರಿಸಿ ಹಿಂತಿರುಗಿ ಬಂದರು. ಶ್ರೀರಾಮ ಕೃಷ್ಣರಿಗೆ ಶಾರದಾದೇವಿ ಹೋದ ವಿಷಯ ಗೊತ್ತಾಗಿತ್ತು. ಅವರೇ ಜಗನ್ಮಾತೆಗೆ ತಮ್ಮ ಮನಸ್ಸಿನಲ್ಲಿಯೇ ಶಾರದಾದೇವಿ ಅವರಿಗೆ ವೈರಾಗ್ಯ ನೀಡೆಂದು ಪ್ರಾರ್ಥಿಸಿದ್ದರು. ಶ್ರೀಶಾರದಾ ದೇವಿ ಅವರು ಹಿಂತಿರುಗಿ ಬಂದಮೇಲೆ "ಏನು ನೀನು ಹೋದ ಕೆಲಸ ಆಯಿತೇ? ಎಲ್ಲಾ ಮಾಯೆ ಅಲ್ಲವೆ ?" ಎಂದರು.

೧೮೮೬ನೇ ಆಗಸ್ಟ್ ಹದಿನೈದನೆಯ ರಾತ್ರಿ ಶ್ರೀರಾಮ ಕೃಷ್ಣರು ತಮ್ಮ ದೇಹವನ್ನು ತ್ಯಜಿಸಿದರು. ಅಂದಿನಿಂದ ಅವರ ಚಿನ್ಮಯ ಜೀವ ಶಿಷ್ಯರೆದೆಯ ಗುಡಿಯಲ್ಲಿ ಪ್ರತಿಷ್ಠಿತವಾಯಿತು. ಶ್ರೀರಾಮಕೃಷ್ಣರು ತಾವು ಕಾಲವಾಗುವುದಕ್ಕೆ ಮುಂಚೆ ಶಾರದಾ ದೇವಿ ಅವರ ಮೇಲೆ ಬೀಸಿದ ವೈರಾಗ್ಯದಿಂದ ಅವರಿಗೆ ಅಷ್ಟು ಯಾತನೆ ಆಗಲಿಲ್ಲ. ಆದರೇನು? ಎಷ್ಟು ಕಾಲ ಈ ವೈರಾಗ್ಯ ಪ್ರಭಾವ ತನ್ನ ಪತಿಯನ್ನು ಕಳೆದುಕೊಂಡ ದುಃಖವನ್ನು ಮರೆ ಮಾಚಬಲ್ಲದು. ವೈದ್ಯ ಶಸ್ತ್ರಚಿಕಿತ್ಸೆ ಮಾಡುವುದಕ್ಕೆ ಮುಂಚೆ ಆ ಸ್ಥಳದಲ್ಲಿ ನೋವು ಕಾಣದಿರಲಿ ಎಂದು ಸೂಜಿಯಿಂದ ಔಷಧ ವನ್ನು ಪ್ರಯೋಗಮಾಡುತ್ತಾನೆ. ಆದರೆ ಶಸ್ತ್ರಚಿಕಿತ್ಸೆ ಆದ ಕೆಲವು ಕಾಲದಮೇಲೆ ನೋವು ತಾನಿದ್ದೇನೆ ಎಂದು ಬರುವುದು. ಅದರಂತೆಯೇ ಶ್ರೀಶಾರದಾದೇವಿ ಅವರ ದುಃಖಕ್ಕೆ ಕೊನೆ ಇರ ಲಿಲ್ಲ. ತಮ್ಮ ಐದನೆಯ ವಯಸ್ಸಿನಲ್ಲಿ ಅವರನ್ನು ಕೈಹಿಡಿದರು. ಮೂವತ್ತೊಂದು ವಯಸ್ಸಿನವರೆಗೆ ಅವರೊಡನೆ ಇದ್ದರು. ಪತಿಯ ಸೇವೆ, ಪ್ರೀತಿ, ಶುಶ್ರೂಷೆಯಲ್ಲಿ ಕಾಲವನ್ನೆಲ್ಲ ಕಳೆದರು.

ಇನ್ನುಮೇಲೆ ಅವರ ಆಶ್ರಯದಾತರಾರು ? ಎಂಬ ಭಯ ಕಾಡತೊಡಗಿತು.

ಶ್ರೀರಾಮಕೃಷ್ಣರು ಕಾಲವಾದಮೇಲೆ ಪದ್ಧತಿಯಂತೆ ಸುಮಂಗಲಿಯ ಗುರುತಾದ ಬಳೆಗಳನ್ನು ಒಡೆದು ಹಾಕಲು ಗಂಗಾನದಿಯ ತೀರಕ್ಕೆ ಹೋದರು. ಆಗ ಶ್ರೀರಾಮಕೃಷ್ಣರು ಇವರಿಗೆ ಗೋಚರಿಸಿದಂತೆ ಆಗಿ "ನಾನು ಸತ್ತುಹೋಗಿರುವೆನೆ ? ಮನೆಯ ಒಂದು ಕೋಣೆಯಿಂದ ಮತ್ತೊಂದು ಕೋಣೆಗೆ ಹೋದಂತೆ ಇರುವೆನು" ಎಂದರು. ಶ್ರೀಶಾರದಾದೇವಿಯವರಿಗೆ ಅವರ ದುಃಖ ಜೀವನದಲ್ಲಿ ಈ ಅನುಭವ ಊರುಗೋಲಿನಂತೆ ಆಯಿತು. ಪತಿ ದೇಹದಿಂದ ತಮ್ಮಿಂದ ಕಣ್ಮರೆ ಆದರೂ ತಮ್ಮನ್ನು ರಕ್ಷಿಸುತ್ತಿರುವರು ಎಂಬ ಧೈರ್ಯ ಬಂದಿತು.

೩. ಅನಂತರ

ಶ್ರೀರಾಮಕೃಷ್ಣರ ಕಾಲಾನಂತರ ಶ್ರೀಶಾರದಾದೇವಿ ಅವರ ದುಃಖವನ್ನು ಮರೆಸುವುದಕ್ಕಾಗಿ ಅವರನ್ನು ಅವರ ಶಿಷ್ಯರು ಯಾತ್ರೆಗೆ ಕರೆದುಕೊಂಡು ಹೋದರು. ಇವರೊಡನೆ ಕೆಲವು ಸ್ತ್ರೀಭಕ್ತೆಯರೂ ಇದ್ದರು. ಮೊದಲು ಕಾಶಿಗೆ ಹೋದರು. ವಿಶ್ವನಾಥನ ದರ್ಶನ ಮಾಡಿದರು. ಅಲ್ಲಿ ಭಾಸ್ಕರಾನಂದ ಎಂಬ ಹೆಸರುವಾಸಿಯಾದ ಸನ್ಯಾಸಿಯನ್ನು ನೋಡಲು ಹೋದರು ಆತ ಮಳೆ ಬಿಸಿಲುಗಳನ್ನು ಲೆಕ್ಕಿಸದೆ, ಮೈಮೇಲೆ ಒಂದು ಚೂರು ಬಟ್ಟೆಯೂ ಇಲ್ಲದೆ ನಗ್ನನಾಗಿದ್ದ. ಶ್ರೀಶಾರದಾದೇವಿ ಅವರೊಂದಿಗೆ ಬಂದ ಹೆಂಗಸರಿಗೆ ಬೆತ್ತಲೆ ಮನುಷ್ಯನನ್ನು ನೋಡಲು ನಾಚಿಕೆ ಆಯಿತು. ಆ ಸಾಧುವಿಗೆ ಇವರ ಇಂಗಿತ ತಿಳಿಯಿತು. "ತಾಯಂದಿರೇ ನೀವೇನೂ ನಾಚಿಕೆಪಡಬೇಡಿ.

ನನಗೆ ನಿಮ್ಮಲ್ಲಿ ಜಗನ್ಮಯಿಯೇ ಕಾಣುತ್ತಾಳೆ. ಮಗುವಿನ ಮುಂದೆ ತಾಯಿಗೆ ನಾಚಿಕೆ ಏಕೆ" ಎಂದರು. ಶ್ರೀಶಾರದಾ ದೇವಿ ಅವನ ವಿಷಯವಾಗಿ ಅನಂತರ ಮಾತನಾಡುತ್ತ "ಎಂತಹ ಮಹಾತ್ಮ ಆತ! ಅವರಲ್ಲಿ ಸ್ವಲ್ಪವೂ ದೇಹಾಭಿಮಾನವಿಲ್ಲ. ಅವರನ್ನು ನೋಡಿದ ಮೇಲೆ ನನ್ನ ಮನಸ್ಸಿಗೆ ಶಾಂತಿ ಸಿಕ್ಕಿತು" ಎಂದು ಹೇಳಿದರು.

ಅನಂತರ ಅಯೋಧ್ಯೆಗೆ ಹೋದರು. ಅಲ್ಲಿ ಸರಯೂ ನದೀ ಸ್ನಾನ, ಶ್ರೀರಾಮನ ದರ್ಶನವನ್ನು ಮಾಡಿಕೊಂಡು ಬೃಂದಾ ವನಕ್ಕೆ ಬಂದರು. ಇಲ್ಲಿ ಶ್ರೀಶಾರದಾದೇವಿ ಶ್ರೀರಾಮಕೃಷ್ಣರನ್ನು ಚಿಂತಿಸುತ್ತ ವ್ಯಥೆಪಡುತ್ತಿದ್ದಾಗ ಪುನಃ ಪತಿಯ ದರ್ಶನವಾಗಿ, ತಾವು ಕಾಲವಾಗಿಲ್ಲ, ವಿಶ್ವವಿಹಾರಿಯಾಗಿರುವೆ ಎಂಬ ಭರವಸೆ ಯನ್ನು ಕೊಟ್ಟರು.

ಶ್ರೀಶಾರದಾದೇವಿಯವರು ಬೃಂದಾವನದಲ್ಲಿ ಸುಮಾರು ಒಂದು ವರುಷ ಇದ್ದರು. ಬಹುಕಾಲವನ್ನು ಧ್ಯಾನದಲ್ಲಿ ಕಳೆಯುತ್ತಿದ್ದರು. ಬೃಂದಾವನದಲ್ಲಿ ಲೆಕ್ಕವಿಲ್ಲದಷ್ಟು ಗುಡಿಗಳಿವೆ. ಅವುಗಳಲ್ಲಿ ಅನೇಕ ಗುಡಿಗಳಿಗೆ ಪುನಃ ಪುನಃ ಹೋಗುತ್ತಿದ್ದರು. ತೀರ್ಥಯಾತ್ರೆಗೆ ಬಂದವರು ಅಲ್ಲಿ ಏನನ್ನಾದರೂ ಬಿಡುವದು ವಾಡಿಕೆ. ಕೆಲವರು ತಮಗೆ ಸೇರದ ವಸ್ತುವನ್ನೊ, ಸಿಕ್ಕಲಾರದ ಯಾವುದಾದರೂ ವಸ್ತುವನ್ನೊ ಬಿಟ್ಟು ಪುಣ್ಯ ಸಂಪಾದಿಸಿರುವೆವು ಎಂದು ಭಾವಿಸುವರು. ಶ್ರೀಕೃಷ್ಣನ ಸಮೀಪದಲ್ಲಿ ಶ್ರೀಶಾರದಾ ದೇವಿಯವರು ಇನ್ನೊಬ್ಬರಲ್ಲಿ ತಪ್ಪನ್ನು ಕಂಡುಹಿಡಿಯುವ ಸ್ವಭಾವವನ್ನು ಸಂಪೂರ್ಣ ನಾಶಮಾಡೆಂದು ಬೇಡಿದರು. ದೇವರು ಇವರ ಪ್ರಾರ್ಥನೆಯನ್ನು ಅನುಗ್ರಹಿಸಿದ ಎಂಬುದಕ್ಕೆ ಇವರ ಅನಂತರ ಜೀವನವೇ ಸಾಕ್ಷಿ. ಎಂದಿಗೂ ಮತ್ತೊಬ್ಬರಲ್ಲಿ

ತಪ್ಪನ್ನು ಕಂಡುಹಿಡಿಯುತ್ತಿರಲಿಲ್ಲ. ಒಂದು ದಿನ ಯೋಗಿನ್ ಮಾ ಒಂದಿಗೆ ಮಾತನಾಡುತ್ತಿದ್ದಾಗ ಹೀಗೆ ಹೇಳುವರು. “ಒಬ್ಬನಿಗೆ ಸಾವಿರ ಒಳ್ಳೆಯದನ್ನು ಮಾಡಿರಬಹುದು. ಆದರೆ ಒಂದು ಕೆಟ್ಟದ್ದನ್ನು ಮಾಡಿದರೆ, ಅವನು ಮಾಡಿದ ಸಾವಿರ ಒಳ್ಳೆಯದನ್ನು ಮರೆತು ಕೇವಲ ಒಂದು ಕೆಟ್ಟದ್ದನ್ನು ಮಾತ್ರ ಚಿಂತಿಸುತ್ತಿರುವನು. ಇನ್ನೊಬ್ಬರಲ್ಲಿ ಯಾವಾಗಲೂ ತಪ್ಪನ್ನು ಕಂಡುಹಿಡಿಯುವುದು ಮಾನವನ ಸ್ವಭಾವ. ಅದನ್ನು ಬಿಟ್ಟು ಇನ್ನೊಬ್ಬನಲ್ಲಿರುವ ಒಳ್ಳೆಯ ಗುಣವನ್ನು ನೋಡಿ ಸಂತೋಷ ಪಡುವುದು ಒಳ್ಳೆಯದು. ಯಾವಾಗಲೂ ಅವರಲ್ಲಿ ತಪ್ಪು ಕಂಡು ಹಿಡಿಯುತ್ತಿದ್ದರೆ ಅವರಿಗೆ ತಪ್ಪೊಂದೇ ಕಾಣುವುದು. ಆಗ ನಮ್ಮ ಮನಸ್ಸು ಮಲಿನವಾಗುವುದು. ಇನ್ನೊಬ್ಬರಲ್ಲಿ ತಪ್ಪನ್ನು ನೋಡಬೇಡ.”

ಒಂದು ವರುಷ ಬೃಂದಾವನದಲ್ಲಿ ವಾಸಮಾಡಿ ಹಿಂತಿರುಗು ವಾಗ ಹರಿದ್ವಾರಕ್ಕೆ ಹೋದರು. ಅಲ್ಲಿ ಬ್ರಹ್ಮಕುಂಡದಲ್ಲಿ ಶ್ರೀರಾಮಕೃಷ್ಣರ ದೇಹಾವಶಿಷ್ಟವನ್ನು ಹಾಕಿದರು. ನಂತರ ಜಯಪುರ ಪುಷ್ಕರ ಮುಂತಾದುವನ್ನು ನೋಡಿಕೊಂಡು ಪ್ರಯಾಗಕ್ಕೆ ಬಂದರು. ಅಲ್ಲಿಯೇ ಶ್ರೀರಾಮಕೃಷ್ಣರ ಜ್ಞಾಪ ಕಾರ್ಥವಾಗಿ ಇಟ್ಟುಕೊಂಡಿದ್ದ ಅವರ ಕೂದಲು ಮುಂತಾದುವನ್ನು ತ್ರಿವೇಣೀ ಸಂಗಮದಲ್ಲಿ ಹಾಕಿದರು. ಅನಂತರ ಕಲ್ಕತ್ತೆಗೆ ಒಂದು ವರುಷ ಆದಮೇಲೆ ಬಂದರು.

ಶ್ರೀರಾಮಕೃಷ್ಣರು ತಮ್ಮ ಮಹಾಸಮಾಧಿಗೆ ಮುಂಚೆ ಶ್ರೀಶಾರದಾದೇವಿಯವರಿಗೆ ತಾವು ಕಾಲವಾದ ಮೇಲೆ ಕಾಮಾರ ಪುಕುರಕ್ಕೆ ಹೋಗಿ ಇರುವಂತೆ ಹೇಳಿದ್ದರು. ಪತಿಯ ಅಣತಿ ಯಂತೆ ಕಾಮಾರಪುಕುರಕ್ಕೆ ಬರ್ದವಾನಿನ ಮೂಲಕ

ಹೊರಟರು. ಇವರ ಜೊತೆಯಲ್ಲಿ ಗುಲಾಬ್‌ಮಾ ಎಂಬ ಶ್ರೀರಾಮಕೃಷ್ಣರ ಶಿಷ್ಯೆಯೂ ಯೋಗಾನಂದ ಎಂಬ ಅವರ ಶಿಷ್ಯನೂ ಇದ್ದರು. ಕಲ್ಕತ್ತೆಯಿಂದ ಬರ್ದವಾನಿನವರೆಗೆ ಯಾರೋ ಭಕ್ತರು ಟಿಕೀಟನ್ನು ತೆಗೆದುಕೊಟ್ಟರು. ಅಲ್ಲಿಂದ ಉಜಲನ್ ಎಂಬಲ್ಲಿಗೆ ಹದಿನಾರು ಮೈಲಿಗಳು ರಸ್ತೆಯಲ್ಲಿ ಹೋಗಬೇಕು. ಗಾಡಿ ಬಾಡಿಗೆಗೆ ದುಡ್ಡು ಇಲ್ಲದೆ ಕಾಲು ನಡಿಗೆಯಲ್ಲಿಯೇ ಹೊರಟರು. ಅಲ್ಲಿ ಸ್ವಲ್ಪ ವಿಶ್ರಮಿಸಿಕೊಂಡು, ಅಲ್ಲಿಂದ ಕಾಮಾರಪುಕುದಕ್ಕೆ ಹೊರಟರು. ಅಲ್ಲಿ ಶ್ರೀರಾಮ ಕೃಷ್ಣರಿಗೆ ಸೇರಿದ ಮನೆಯಲ್ಲಿ ವಾಸಮಾಡತೊಡಗಿದರು. ಅವರೊಡನೆ ಬಂದವರು ಕಲ್ಕತ್ತೆಗೆ ಹಿಂತಿರುಗಿದರು. ಶ್ರೀರಾಮ ಕೃಷ್ಣರ ನಂಟರಿಷ್ಟರಾದೂ ಆಗ ಆ ಮನೆಯಲ್ಲಿ ಇರಲಿಲ್ಲ. ಎಲ್ಲಾ ಜೀವನೋಪಾಯಕ್ಕಾಗಿ ಬೇರೆ ಬೇರೆ ಊರುಗಳಿಗೆ ಹೊರಟುಹೋಗಿದ್ದರು. ಕಣಜದಲ್ಲಿ ಸ್ವಲ್ಪ ಭತ್ತವಿತ್ತು. ಅದನ್ನು ಕುಟ್ಟಿ ಅಡಿಗೆ ಮಾಡಿ ದೇವರಿಗೆ ನೈವೇದ್ಯ ಮಾಡಿ ತಿನ್ನುತ್ತಿದ್ದರು. ಅದರ ಜೊತೆಗೆ ಬೆರೆಸುವುದಕ್ಕೆ ಉಪ್ಪನ್ನು ಕೂಡ ಕೊಂಡುಕೊಳ್ಳಲು ಕಾಸಿರಲಿಲ್ಲ. ಮನೆಯ ಹಿಂದಿನ ಹಿತ್ತಲಲ್ಲಿ ಸೊಪ್ಪನ್ನು ಬೆಳೆಸಿದರು. ಅದನ್ನು ಬೇಯಿಸಿ ಅನ್ನದೊಂದಿಗೆ ತಿನ್ನುತ್ತಿದ್ದರು. ಸೊಪ್ಪಿಗೆ ಉಪ್ಪೇ ಇಲ್ಲದಿರುವಾಗ ಅವರ ಮಸೆಯ ಹಣತೆಗೆ ಎಣ್ಣೆ ಎಲ್ಲಿಂದ ಬರಬೇಕು. ಸೂರ್ಯಾಸ್ತಮಯಕ್ಕೆ ಮುಂಚೆ ಕೆಲಸವನ್ನು ಪೂರೈಸಿ ಭಗವಂತನ, ನಾಮಸ್ಮರಣೆ ಮಾಡುತ್ತ ಕಾಲ ಕಳೆಯುತ್ತಿದ್ದರು.

ಶ್ರೀರಾಮಕೃಷ್ಣರು ಬದುಕಿರುವ ಪರಿಯಂತರ ದಕ್ಷಿಣೇಶ್ವರ ದೇವಸ್ಥಾನದಿಂದ ಅವರಿಗೆ ಏಳು ರೂಪಾಯಿಗಳನ್ನು ಕೊಡಬೇಕೆಂದು ರಾಣಿ ರಾಸ್ಮಣಿ ತನ್ನ ಮರಣ ಶಾಸನದಲ್ಲಿ

ಬರೆದಿದ್ದಳು. ಶ್ರೀರಾಮಕೃಷ್ಣರು ಕಾಲವಾದ ಮೇಲೆ ತ್ರೈಲೋಕ್ಯ ನಾಥ ಎಂಬ ರಾಣಿಯ ಮೊಮ್ಮಗ ಶಾರದಾದೇವಿಗೆ ಆ ಹಣವನ್ನು ಸಲ್ಲಿಸುತ್ತಿದ್ದ. ಕ್ರಮೇಣ ದಕ್ಷಿಣೇಶ್ವರ ದೇವಸ್ಥಾನದ ದೀನನಾಥ್ ಎಂಬುವನು ಆ ದುಡ್ಡು ಶಾರದಾದೇವಿಗೆ ಹೋಗ ದಂತೆ ಮಾಡಿದ. ನರೇಂದ್ರ ಗುಡಿಯ ಅಧಿಕಾರಿಗಳೊಡನೆ ಎಷ್ಟೋ ಚರ್ಚೆಮಾಡಿದನು. ಅದರಿಂದ ಏನೂ ಪ್ರಯೋಜನ ವಾಗಲಿಲ್ಲ. ಅನಂತರ ತಮ್ಮ ಬೋಧನೆಯಿಂದ ಪ್ರಪಂಚವನ್ನೇ ಮುಗ್ಧಗೊಳಿಸಿದ ನರೇಂದ್ರನಿಗೆ (ಸ್ವಾಮಿ ವಿವೇಕಾನಂದರು) ದೇವಸ್ಥಾನದ ಅಧಿಕಾರಿಗಳಿಂದ ಶಾರದಾದೇವಿಗೆ ಬರುವ ಏಳು ರೂಪಾಯಿಯನ್ನು ಕೊಡಿಸಲಾಗಲಿಲ್ಲ.

ಕಾಮಾರಪುಕುರಿನ ಜನರು ಹಳ್ಳಿಯವರು. ಪೂರ್ವಾಚಾರ ಪರಾಯಣರು. ಶ್ರೀಶಾರದಾದೇವಿಯವರ ಜೀವನ ಮಹತ್ವವನ್ನು ಅರಿತು ಅವರನ್ನು ಗೌರವಿಸಲಿಲ್ಲ. ಅದಕ್ಕೆ ಬದಲಾಗಿ ಅವರನ್ನು ಟೀಕಿಸಲು ಆರಂಭಿಸಿದರು. ಶ್ರೀಶಾರದಾದೇವಿಯವರು ಸಾಧಾರಣ ಹೆಂಗಸಿನಂತೆ ವಿಧವೆಯ ವೇಷದಲ್ಲಿ ಇರಲಿಲ್ಲ. ಇದೇ ಸಾಕು ಅವರ ಟೀಕೆಗೆ. ಅವಳ ವೈಯ್ಯಾರ ನೋಡಿ, ಕೈಯಲ್ಲಿ ಬಳೆ ಇದೆ, ಅಂಚಿನ ಸೀರೆ ಬೇರೆ ಉಡುತ್ತಾರೆ. ಈಕೆ ಕಾಮ ಕಾಂಚನ ತ್ಯಾಗಮಾಡಿದ ಶ್ರೀರಾಮಕೃಷ್ಣರ ಪತ್ನಿಯಂತೆ ಎಂದು ಹಂಗಿಸತೊಡಗಿದರು. ಶ್ರೀಶಾರದಾದೇವಿಗೆ ಈ ಟೀಕೆಯನ್ನು ಕೇಳಿ ಒಂದು ದಿನ ರೋಸಿಹೋಯಿತು. ಇದಕ್ಕೆಲ್ಲ ಕೈಯ್ಯಲ್ಲಿರುವ ಬಳೆ ತಾನೇ ಕಾರಣ ಎಂದು ಅದನ್ನು ತೆಗೆದು ಒಂದು ಮೂಲೆ ಯಲ್ಲಿಟ್ಟರು. ಆ ಸಮಯದಲ್ಲಿಯೇ ಶ್ರೀರಾಮಕೃಷ್ಣರು ಮತ್ತೊಮ್ಮೆ ಇವರಿಗೆ ಗೋಚರಿಸಿದಂತೆ ಆಗಿ "ನೀನು ಬಳೆಗಳನ್ನು ತೆಗೆಯಬೇಡ. ನಿನಗೆ ವೈಷ್ಣವ ತಂತ್ರ ಗೊತ್ತೆ?" ಎಂದು

ಕೇಳಿದರು. ಅದಕ್ಕೆ ಶ್ರೀಶಾರದಾದೇವಿಯವರು ಗೊತ್ತಿಲ್ಲ ಎಂದರು. ಆಗ ಶ್ರೀರಾಮಕೃಷ್ಣರು "ಗೌರೀ ದಾಸಿ ಇವತ್ತು ಬಂದು ಅದನ್ನು ಹೇಳುತ್ತಾರೆ" ಎಂದು ಅದೃಶ್ಯರಾದರಂತೆ. ಆಕೆ ಅಂದು ಮಧ್ಯಾಹ್ನ ಬಂದು "ವೈಷ್ಣವ ತಂತ್ರದ ಪ್ರಕಾರ ಸತಿಗೆ ಪತಿ ಚಿನ್ಮಯಮೂರ್ತಿ. ಆತನು ಕಾಲವಾದರೂ ಅವನ ಆತ್ಮ ಅಮರವಾದುದು. ಯಾರು ಪತಿಯ ಮೇಲೆ ನಿಜವಾದ ಪ್ರೇಮವನ್ನು ಇಟ್ಟಿರುವರೋ ಅವರು ಎಂದಿಗೂ ವಿಧವೆಯಂತೆ ಆಚರಿಸುವುದಿಲ್ಲ" ಎಂದು ಹೇಳಿದಳು. ಇದರಿಂದ ಶ್ರೀಶಾರದಾದೇವಿಯವರ ಸಂದೇಹ ಪರಿಹಾರವಾಯಿತು. ಜನರ ನಿಂದೆಗೆ ಅಂಜುವುದನ್ನು ಬಿಟ್ಟರು. ತೆಗೆದಿಟ್ಟ ಬಳೆಗಳನ್ನು ಪುನಃ ಧರಿಸಿದರು. ಪ್ರತ್ಯಕ್ಷ ಪತಿಯೇ ಬಂದು ತಮಗೆ ಹೇಳಿರುವಾಗ, ಯಾರು ಅದಕ್ಕೆ ವಿರೋಧವಾಗಿ ಏನನ್ನು ಹೇಳಿದರೂ ಅದಕ್ಕೆ ಕಿವಿಗೊಡದೆ, ಕೊಟ್ಟ ಹಿಂಸೆಯನ್ನು ಸಹಿಸಿ, ನಿಂದೆಯನ್ನು ಕೇಳಿದರೂ ನಿಂದಿಸುವವರನ್ನು ದೂರದೆ ಅವರಿಗೆ ಒಳ್ಳೆಯದನ್ನೇ ಬಯಸುತ್ತಿದ್ದರು.

ಶ್ರೀಶಾರದಾದೇವಿಯವರು ಒಂಟಿಯಾಗಿ ಮನೆಯಲ್ಲಿ ಕಾಲವನ್ನು ಕಳೆಯುತ್ತಿದ್ದ ಕಾಲದಲ್ಲಿಯೇ ಕಾಮಾಂಧನೊಬ್ಬನು ಇವರನ್ನು ಅಟ್ಟಿಸಿಕೊಂಡು ಬಂದನು. ಅವನನ್ನು ನೋಡಿ ಮೊದಲು ಇವರಿಗೆ ದಿಗಿಲಾಯಿತು. ಇವರು ಕಣಜದ ಹಿಂದೆ ಹೋಗಿ ಅವಿತುಕೊಂಡರು, ಅಲ್ಲಿಯೂ ಅವನು ಇವರನ್ನು ಬೆನ್ನಟ್ಟಿಕೊಂಡು ಬಂದನು. ಸುತ್ತಲೂ ಮೂರು ನಾಲ್ಕು ಬಾರಿ ಅದರ ಹಿಂದೆ ಸುತ್ತಿ ಅವನಿಂದ ತಪ್ಪಿಸಿಕೊಳ್ಳಬೇಕೆಂದು ಬಯಸಿದರು. ಆದರೆ ಪ್ರಯೋಜನವಾಗಲಿಲ್ಲ. ಹತ್ತಿರ ಯಾರೂ ಇರಲಿಲ್ಲ. ಸುಮ್ಮನೆ ಕಿರುಚಿಕೊಂಡರೆ ಪ್ರಯೋಜನವಿಲ್ಲವೆಂದು ತಾವೇ ಅವನಿಗೆ ಬುದ್ಧಿ ಕಲಿಸಲು ಸಿದ್ಧರಾದರು. ಇವರು ಸ್ವಭಾವತಃ

ಲಜ್ಜಾಪ್ರಕೃತಿಯವರು ಆಗ ರುದ್ರಿಯಂತೆ ಅವನೆದುರಿಗೆ ನಿಂತು ಅವನನ್ನು ಅಪ್ಪಳಿಸಿ ನೆಲಕ್ಕೆ ಕೆಡವಿ ಅವನ ಎದೆಯ ಮೇಲೆ ಕುಳಿತು ಚೆನ್ನಾಗಿ ಪೆಟ್ಟು ಕೊಟ್ಟರು. ಆಗ ಆತ ತನ್ನ ಕೃತ್ಯಕ್ಕೆ ತಾನೆ ನಾಚಿ ಹಿಂತಿರುಗಿಹೋದನು.

ಮೇಲಿನ ಘಟನೆಯಾದ ಮೇಲೆ ಪ್ರಸನ್ನಮಯಿ ಎಂಬ ವೃದ್ಧ ಹೆಂಗಸು ಶ್ರೀ ಶಾರದಾದೇವಿಯವರೊಂದಿಗೆ ರಾತ್ರಿ ಮಲಗಿ ಕೊಳ್ಳಲು ಬರುತ್ತಿದ್ದಳು. ಅವರ ಮೂಲಕ ಕಲ್ಕತ್ತೆಯಲ್ಲಿರುವ ಶ್ರೀರಾಮಕೃಷ್ಣರ ಭಕ್ತರಿಗೆ ಶ್ರೀಶಾರದಾದೇವಿ ಎಂತಹ ಬಡತನ ದಲ್ಲಿ ಕಾಲಕಳೆಯುತ್ತಿರುವರು ಎಂಬುದು ಗೊತ್ತಾಯಿತು. ಶ್ರೀರಾಮಕೃಷ್ಣರ ಭಕ್ತರಿಗೆ ಶ್ರೀಶಾರದಾದೇವಿಗೆ ಕಲ್ಕತ್ತೆಯಲ್ಲಿ ತಮ್ಮ ಮನೆಗೆ ಬಂದು ಇರಬೇಕೆಂದು ಕೋರಿಕೊಂಡು ಕಾಗದ ಬರೆದರು. ಅನಂತರ ಶ್ರೀಶಾರದಾದೇವಿಯವರ ಜವಾಬ್ದಾರಿ ಯನ್ನೆಲ್ಲ ಶ್ರೀರಾಮಕೃಷ್ಣರ ಶಿಷ್ಯರಾದ ಶಾರದಾನಂದರು ವಹಿಸಿ ಕೊಂಡು ಕಲ್ಕತ್ತೆಯಲ್ಲಿ ಅವರಿಗೆ ಒಂದು ಮನೆಯನ್ನು ಕಟ್ಟಿಸಿ ಕೊಟ್ಟರು.

ಅನಂತರ ಜೀವನದಲ್ಲಿ ಶ್ರೀಶಾರದಾದೇವಿಯವರು ಅರ್ಧ ಕಾಲವನ್ನು ಕಲ್ಕತ್ತೆಯ ಭಕ್ತರ ಮಧ್ಯದಲ್ಲಿಯೂ ಅರ್ಧ ಕಾಲ ವನ್ನು ತಮ್ಮ ಹಳ್ಳಿಯಾದ ಜಯರಾಮವಟಿಯಲ್ಲಿಯೂ ಕಳೆಯು ತ್ತಿದ್ದರು. ಜಯರಾಮವಟಿಗೆ ಹೋದಾಗಲೆಲ್ಲ ತಮ್ಮ ತಾಯಿಯ ಹಳೆಯ ಮನೆಯಲ್ಲಿ ಇರುತ್ತಿದ್ದರು. ಅವರಿಗೆ ಪ್ರಸನ್ನಕುಮಾರ, ವರದಾ ಪ್ರಸಾದ, ಕಾಲಿಕುಮಾರ, ಅಭಯಚರಣ ಎಂಬ ನಾಲ್ಕು ಜನ ತಮ್ಮಂದಿರು ಇದ್ದರು. ಇವರಲ್ಲಿ ಕೊನೆಯಾತನು ವಿನಃ ಉಳಿದವರು ಯಾರೂ ವಿದ್ಯಾವಂತರಾಗಿ ಹಣವಂತರಾಗಿ ಬಾಳುವ ಅದೃಷ್ಟ ಪಡೆಯಲಿಲ್ಲ. ಶ್ರೀಶಾರದಾದೇವಿಯವರು

ಹಳ್ಳಿಯ ತಮ್ಮ ಮನೆಯಲ್ಲಿರುವಾಗ, ವಯಸ್ಸಾದ ತಾಯಿ ಯಾಗಲಿ, ಇನ್ನೂ ಕಿರಿಯ ವಯಸ್ಸಿನ ತಮ್ಮಂದಿರ ಹೆಂಡತಿಯರಿ ಗಾಗಲಿ ಕಷ್ಟಕೊಡದೆ ಮನೆಯ ಕೆಲಸವನ್ನೆಲ್ಲ ತಾವೇ ಮಾಡು ತ್ತಿದ್ದರು. ಅಕ್ಕನನ್ನು ಎಲ್ಲರೂ ಪ್ರೀತಿಸುತ್ತಿದ್ದರು. ಆದರೆ ಅದು ನಿಜವಾದ ಪ್ರೀತಿಯಲ್ಲ. ಇವರ ಸಂಸಾರ ತಾಪತ್ರಯಕ್ಕೆ ಏನಾದರೂ ದುಡ್ಡನ್ನು ವಸೂಲಿ ಮಾಡುವುದಕ್ಕೆ ತೋರುತ್ತಿದ್ದ ಆಷಾಢಭೂತಿತನ.

ಶ್ರೀಶಾರದಾದೇವಿಯವರ ತಾಯಿ ೧೯೦೬ನೇ ವರುಷದಲ್ಲಿ ಕಾಲವಾದರು. ಅನಂತರ ಇದ್ದ ಸ್ವಲ್ಪ ಆಸ್ತಿಗೆ ಅಣ್ಣತಮ್ಮಂದಿರೆಲ್ಲ ವ್ಯಾಜ್ಯವಾಡತೊಡಗಿದರು. ಆಗ ಶ್ರೀಶಾರದಾದೇವಿಯವರು ಶಾರದಾನಂದರನ್ನು ಕಲ್ಕತ್ತೆಯಿಂದ ಕರೆಸಿ ಎಲ್ಲರಿಗೂ ಸಮನಾಗಿ ಆಸ್ತಿಯನ್ನು ಪಾಲುಮಾಡಿಸಿಕೊಟ್ಟರು. ಅನಂತರ ಇವರು ಜಯರಾಮವಟಿಗೆ ಬಂದಾಗ ೧೯೧೫ನೇ ವರುಷದವರೆಗೆ ಮೊದ ಲನೆಯ ತಮ್ಮ ಪ್ರಸನ್ನಕುಮಾರ ಎಂಬುವರ ಮನೆಯಲ್ಲಿ ಇದ್ದರು. ಅನಂತರ ಆತನ ಹೆಂಡತಿ ಕಾಲವಾದಳು. ಅವಳು ಕಾಲವಾದಾಗ ನಳಿನಿ ಮತ್ತು ಮಾಕು ಎಂಬ ಇಬ್ಬರು ಮಕ್ಕಳನ್ನು ಬಿಟ್ಟುಹೋದಳು. ಶ್ರೀಶಾರದಾದೇವಿ ಅನಾಥ ಮಕ್ಕಳನ್ನು ತಮ್ಮ ಸಂರಕ್ಷಣೆ ಕೆಳಗೆ ತೆಗೆದುಕೊಂಡರು.

ಪಾಲಾದರೂ ಜಗಳ ಮಾತ್ರ ಕೊನೆಗಾಣಲಿಲ್ಲ. ಎಲ್ಲರಿಗೂ ಸೇರಿದ ಪಾಲುಮಾಡಿಕೊಳ್ಳಲಾಗದ ಒಂದು ವಸ್ತು ಇತ್ತು. ಅದೇ ಶ್ರೀಶಾರದಾದೇವಿ. ಪ್ರತಿಯೊಬ್ಬನೂ ಇನ್ನು ಯಾರೂ ಇಲ್ಲದೇ ಇರುವ ಸಮಯ ಹೊಂಚುಹಾಕಿಕೊಂಡಿದ್ದು ಆ ಸಮಯದಲ್ಲಿ ಬಂದು ಶ್ರೀಶಾರದಾದೇವಿ ಅವರಿಂದ ಏನನ್ನಾದರೂ ಕೇಳಿ ತೆಗೆದುಕೊಂಡು ಹೋಗುತ್ತಿದ್ದರು. ಒಬ್ಬ ಇರುವಾಗ

ಇನ್ನೊಬ್ಬ ಬಂದರೆ ಆಗಲೇ ಅವರಿಬ್ಬರಿಗೂ ಜಗಳವಾಗುತ್ತಿತ್ತು. ಆಗಲೆ ಮೊದಲು ಬಂದವನು ಏನನ್ನೋ ಶ್ರೀಶಾರದಾದೇವಿ ಅವರಿಂದ ವಸೂಲಿ ಮಾಡಿಕೊಂಡುಬಿಟ್ಟಿರುವನು ಎಂಬುದೇ ಅದಕ್ಕೆ ಕಾರಣ. ಶ್ರೀಶಾರದಾದೇವಿಯವರು ಜಯರಾಮವಟಿಗೆ ಬರುತ್ತಾರೆ ಎಂದು ಒಂದುಸಲ ನಾಲ್ಕುಜನ ತಮ್ಮಂದಿರಿಗೂ ಕಾಗದ ಬರೆದಿದ್ದರು. ಮನೆಗೆ ಬಂದು ಎಷ್ಟು ಹೊತ್ತಾದರೂ ಯಾರೂ ಇವರನ್ನು ನೋಡಲು ಬರಲಿಲ್ಲ. ಅನಂತರ ಒಬ್ಬೊಬ್ಬರಾಗಿ ಬರಲು ಪ್ರಾರಂಭಿಸಿದರು. ಆಗ ಶಾರದಾದೇವಿ, "ಏನು ಒಬ್ಬರೂ ನನ್ನನ್ನು ನೋಡಲು ಬರಲಿಲ್ಲವಲ್ಲ" ಎಂದು ಕೇಳಿದರು. ಆಗ ಬಂದ ತಮ್ಮ "ನಾನು ಮೊದಲು ಬಂದರೆ ಇನ್ನೊಬ್ಬ ತಮ್ಮಂದಿಗೆ ಆಗಲೆ ನಿಮ್ಮಿಂದ ಏನನ್ನೊ ವಸೂಲಿ ಮಾಡಿಬಿಟ್ಟ ಅಂದು ಜಗಳವಾಡುತ್ತಾನೆ. ಅದಕ್ಕಾಗಿ ಬರಲಿಲ್ಲ. ಆದರೆ ನಿಮ್ಮ ಮೇಲೆ ಪ್ರೀತಿ ಇಲ್ಲ ಎಂದಲ್ಲ. ಜನ್ಮಜನ್ಮದಲ್ಲಿ ನನಗೆ ನೀವೇ ಅಕ್ಕನಾಗಿರಬೇಕೆಂದು ದೇವರನ್ನು ಬೇಡುತ್ತೇನೆ" ಎಂದನು. ಆಗ ಶ್ರೀಶಾರದಾದೇವಿ ಅವರು "ಒಂದು ಜನ್ಮದಲ್ಲಿ ಈ ತಮ್ಮಂದಿರ ಪ್ರೀತಿಯ ಸವಿಯನ್ನುಂಡದ್ದಾಯಿತು. ಪ್ರತಿ ಜನ್ಮದಲ್ಲಿಯೂ ಅದನ್ನು ಸವಿಯಬೇಕೆ? ಎಲ್ಲೋ ನಾನು ಶಿವನನ್ನು ಹಿಂದಿನ ಜನ್ಮದಲ್ಲಿ ಮುಳ್ಳಿರುವ ಬಿಲ್ವಪತ್ರೆಯಿಂದ ಅರ್ಚಿಸಿರಬೇಕು. ಅದಕ್ಕೆ ನನಗೆ ಈ ನೆಂಟರ ಮುಳ್ಳನ್ನು ಕೊಟ್ಟನು" ಎಂದರು. ತಮ್ಮಂದಿರು ಅಕ್ಕನೆದುರಿಗೇ ಹಣಕ್ಕಾಗಿ ವ್ಯಾಜ್ಯಮಾಡುತ್ತಿದ್ದಾಗ ಶ್ರೀ ಶಾರದಾದೇವಿ ಅವರು "ಅಯ್ಯೋ, ಹಣದ ಮಾಯೆಯಲ್ಲಿ ಇವರು ಸಿಕ್ಕಿ ನರಳುತ್ತಿರುವರಲ್ಲ" ಎಂದು ಪಶ್ಚಾತ್ತಾಪ ಪಡುತ್ತಿದ್ದರು. "ಯಾವಾಗಲೂ ಅವರು ನನ್ನನ್ನು ಕೇಳುವುದು ದುಡ್ಡನ್ನೇ. ಒಂದು ಬಾರಿಯಾದರೂ ಬಾಯಿತಪ್ಪಿ ಆದರೂ

ಭಕ್ತಿ ಜ್ಞಾನಗಳನ್ನು ಕೊಡೆಂದು ಬೇಡುವುದಿಲ್ಲ'' ಎಂದು ಮರುಗುತ್ತಿದ್ದರು.

ಶಾರದಾದೇವಿಯ ಕೊನೆಯ ತಮ್ಮ ಅಭಯಚರಣ ಎಂಬು ವನು ಒಬ್ಬನೇ ಬುದ್ಧಿವಂತನಾದನು. ಅವನು ಕಲ್ಕತ್ತೆಯ ಮೆಡಿಕಲ್ ಕಾಲೇಜಿನಲ್ಲಿ ಓದಿ ವೈದ್ಯನಾದ. ಆದರೆ ಒಂದು ವರುಷದೊಳಗೆ ಕಾಲರಾ ಜಾಡ್ಯಕ್ಕೆ ತುತ್ತಾಗಿ ತೀರಿಕೊಂಡ. ಸಾಯುವ ಸಮಯದಲ್ಲಿ ತನ್ನ ಅನಾಥ ಹೆಂಡತಿಯಾದ ಸೌರ ಬಾಲೆಯನ್ನು ನೋಡಿಕೊಳ್ಳಬೇಕೆಂದು ಶ್ರೀ ಶಾರದಾದೇವಿ ಅವರನ್ನು ಬೇಡಿಕೊಂಡು ಸತ್ತ. ಆ ಹೆಂಗಸು ಆಗ ಗರ್ಭಿಣಿ ಯಾಗಿದ್ದರು. ಕೆಲವು ಕಾಲದ ಮೇಲೆ ಒಂದು ಹೆಣ್ಣು ಮಗುವನ್ನು ಹೆತ್ತಳು. ಅದಕ್ಕೆ ರಾಧೆ ಎಂದು ಹೆಸರಿಟ್ಟರು. ತನ್ನ ತಮ್ಮನ ಹೆಂಡತಿ ಮತ್ತು ಅವಳ ಮಗು ಇಬ್ಬರೂ ಶ್ರೀ ಶಾರದಾದೇವಿಯ ಸಂಸಾರಕ್ಕೆ ಸೇರಿದಂತಾದರು.

ಸೌರಬಾಲೆ ಮತ್ತು ಅವರ ಮಗಳು ರಾಧೆ ಶ್ರೀಶಾರದಾದೇವಿ ಅವರ ಜೀವನದ ಎರಡು ದೊಡ್ಡ ಮುಳ್ಳಿನಂತೆ ಆದರು. ಇಬ್ಬರಿಗೂ ಶಾರದಾದೇವಿ ಅವರನ್ನು ಪೀಡಿಸಿ ಕಾಡುವುದೊಂದೇ ಗೊತ್ತಿತ್ತು. ಸಾವಿರಾರು ಮೈಲಿಗಳಿಂದ ಭಕ್ತರು ಬಂದು ಶ್ರೀಮಾತೆಯ ಉಪದೇಶವನ್ನು ಕೇಳಿ ಧನ್ಯರಾಗುತ್ತಿದ್ದರೆ, ಇವರ ಬಳಿಯೇ ಇರುತ್ತಿದ್ದ ಈ ಎರಡು ವ್ಯಕ್ತಿಗಳಿಗಾದರೋ ಶ್ರೀಶಾರದಾದೇವಿ ಯವರ ಜೀವನವನ್ನು ಅಸಹನೀಯವಾಗಿ ಮಾಡುವುದಕ್ಕೆ ಏನು ಬೇಕೋ ಅದನ್ನೆಲ್ಲ ಮಾಡುತ್ತಿದ್ದರು. ಆದರೆ ಶ್ರೀಶಾರದಾ ದೇವಿ ಧೀರ ಹೆಂಗಸು, ಇದನ್ನು ಸಹಿಸಿಕೊಂಡರು. ಇವರ ಸುತ್ತ ನೆಂಟರಿಷ್ಟರ ಪರಿವಾರ ಯಾವಾಗಲೂ ಸುತ್ತಿಕೊಂಡಿರುತ್ತಿತ್ತು. ಆದರೂ ಇವರು ಅದರಲ್ಲಿ ಮುಳುಗಿಹೋಗಲಿಲ್ಲ. ಶ್ರೀರಾಮಕೃಷ್ಣ

ರಂತೆ ಬಾಳುವುದು ಸುಲಭ. ಅವರ ಬಳಿ ಲೌಕಿಕ ವಾಸನೆ ಯುವರು ಯಾರೂ ಇರುತ್ತಿರಲಿಲ್ಲ. ಆದರೆ ಶಾರದಾದೇವಿಯಂತೆ ಇರುವುದು ಪರಮಕಷ್ಟ ಮತ್ತು ಯಾತನಾಮಯ ಜೀವನ. ಸುತ್ತಲಿರುವ ನೆಂಟರಿಷ್ಟರು ದೇವರನ್ನು ಒಲ್ಲದವರು, ಲೌಕಿಕರು ಇವರ ಮಧ್ಯದಲ್ಲಿ ಬಾಳಬೇಕು. ಆದರೆ ಶಾರದಾದೇವಿ ಈ ನೆಂಟರಿಷ್ಟರ ಪಂಕದಲ್ಲಿ ಸಿಕ್ಕಿಕೊಂಡಿದ್ದರೂ ಅವರ ಜೀವನ ಒಂದು ಕಮಲದಂತೆ ಆ ಕೆಸರಿನಿಂದ ಮೇಲೆದ್ದು ಯಾವಾಗಲೂ ಸೂರ್ಯನ ಕಡೆಗೇ ತಿರುಗಿರುತ್ತಿತ್ತು. ಭಕ್ತರೆಂಬ ದುಂಬಿಗಳು ಬಂದು ಇವರ ಮಕರಂದವನ್ನು ಹೀರಿಹೋಗುತ್ತಿದ್ದರು. ಆದರೆ ಕೆಸರಿನಲ್ಲಿದ್ದ ಕ್ರಿಮಿಗಳಂತಹ ನಂಟರಾದರೋ ಕಮಲದ ಅಡಿ ಯಲ್ಲಿರುವ ಕೊಳಕನ್ನು ತಿಂದು ವಿಹರಿಸುತ್ತಿದ್ದರು. ಶ್ರೀರಾಮ ಕೃಷ್ಣರು ಒಮ್ಮೆ ಭಕ್ತನೊಬ್ಬನಿಗೆ ಉಪದೇಶ ಕೊಡುವಾಗ ಸಂಸಾರದಲ್ಲಿ ನಿನ್ನ ಜೀವನದೋಣಿ ತೇಲುತ್ತಿರಲಿ, ಆದರೆ ಸಂಸಾರದ ನೀರು ದೋಣಿಯೊಳಗೆ ಬರದೆ ಇರಲಿ ಎಂದು ಹೇಳಿದರು. ಶ್ರೀಶಾರದಾದೇವಿ ಅವರೇ ಅದಕ್ಕೆ ನಿದರ್ಶನ. ಸಂಸಾರದಲ್ಲಿ ಹೇಗೆ ಇರಬೇಕು ಎಂಬುದನ್ನು ತಮ್ಮ ಜೀವನದ ಮೂಲಕವಾಗಿಯೇ ತೋರುತ್ತಿದ್ದರು.

ಶ್ರೀಶಾರದಾದೇವಿ ಅವರ ಆಪ್ತ ಗೆಳತಿ ಯೋಗಿನ್ ಮಾ ಎಂಬುವರು ಶ್ರೀರಾಮಕೃಷ್ಣರನ್ನು ಕಂಡಿದ್ದರು. ಅವರ ಹತ್ತಿರ ಬಹಳ ಕಾಲ ಬಂದು ಹೋಗುತ್ತಿದ್ದರು. ಅವರ ಜೀವನ ದೊಂದಿಗೆ ಶಾರದಾದೇವಿ ಅವರ ಜೀವನವನ್ನು ಹೋಲಿಸಿ ನೋಡಿದರು. ಶ್ರೀರಾಮಕೃಷ್ಣರಾದರೋ ಸರ್ವಸಂಗ ಪರಿತ್ಯಾಗಿ ಗಳು. ಅವರ ಸುತ್ತಲೂ ಕೇವಲ ಭಗವತ್ ಭಕ್ತಿಯಿಂದ ಪ್ರೇರೇಪಿತರಾಗಿ ಬಂದವರಲ್ಲದೆ ಉಳಿದ ಯಾರ ಸ್ಪರ್ಶವನ್ನಾಗಲೀ,

ನೋಟವನ್ನಾಗಲೀ ಅವರಿಗೆ ಸಹಿಸಲು ಆಗುತ್ತಿರಲಿಲ್ಲ. ಆದರೆ ಶಾರದಾದೇವಿಯ ಸುತ್ತಲೂ ಹಗಲಿರುಳೂ ನಂಟರಿಷ್ಟರು ತುಂಬಿದ್ದರು. ಅವರೂ ಎಂತಹ ನಂಟರು ! ಬಾಯಿ ತಪ್ಪಿಯೂ ಭಕ್ತಿಯ ಮಾತನ್ನು ಎತ್ತುವವರಲ್ಲ. ಶ್ರೀರಾಮಕೃಷ್ಣರು ಏರಿದ ಆಧ್ಯಾತ್ಮಿಕ ಅನುಭವಕ್ಕೆ ಶ್ರೀಶಾರದಾದೇವಿ ನಿಜವಾಗಿ ಏರಿರುವರೆ ಎಂದು ಅನುಮಾನಿಸಿಕೊಂಡು ಒಮ್ಮೆ ಗಂಗಾಸ್ನಾನಕ್ಕೆ ಹೋದರು. ಗಂಗಾನದಿಯಲ್ಲಿ ಮಿಂದು ಸೋಪಾನಪಂಕ್ತಿಯ ಮೇಲೆ ಜಪವನ್ನು ಮಾಡುತ್ತ ಕುಳಿತಿದ್ದರು. ಅವರ ಕಣ್ಣೆದುರಿಗೆ ಒಂದು ಕೊಳೆತ ಹೆಣ ಗಂಗಾನದಿಯ ಮೇಲೆ ತೇಲಿಕೊಂಡು ಹೋಗುತ್ತಿತ್ತು. ಆಗ ಶ್ರೀರಾಮಕೃಷ್ಣರು ಇವರಿಗೆ ಕಂಡಂತೆ ಆಗಿ "ಏನು ಆ ಹೆಣದಿಂದ ಗಂಗೆ ಮಲಿನವಾಗಿರುವಳೆ?" ಎಂದು ಕೇಳಿದರು. ಯೋಗಿನ್ ಮಾ ಇಲ್ಲ ಎಂದರು. ಆಗ ಶ್ರೀರಾಮಕೃಷ್ಣರು "ಅದರಂತೆಯೇ ಅನೇಕ ಜನ ಶ್ರೀಶಾರದಾ ದೇವಿಯ ಪ್ರೀತಿ ಜಲದಲ್ಲಿ ತೇಲುತ್ತಿರುವರು. ಆದರೆ ಅದರಿಂದ ಅವಳು ಮಲಿನವಾಗಿಲ್ಲ" ಎಂದರು.

ಶ್ರೀಶಾರದಾದೇವಿ ಅವರ ಮಾತೃಸಹಜವಾದ ಪ್ರೀತಿ, ಅನುಕಂಪ ಭಕ್ತಿ ಜ್ಞಾನಗಳೆಲ್ಲ ಅವರು ಶಿಷ್ಯರಾದ ಭಕ್ತರಾದ ಆವೃತರಾಗಿದ್ದಾಗ ನೋಡುವೆವು. ಆಧ್ಯಾತ್ಮಿಕ ಜೀವನದಲ್ಲಿ ಗುರುವಾಗುವುದು ಬಹಳ ಜವಾಬ್ದಾರಿಯ ಕೆಲಸ. ಆದರೆ ಇಂತಹ ದೊಡ್ಡ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಶ್ರೀಶಾರದಾದೇವಿ ಅವರು ಎಲ್ಲಾ ವಿಧದಿಂದಲೂ ಅರ್ಹರಾಗಿದ್ದರು. ಶ್ರೀರಾಮ ಕೃಷ್ಣರಂತಹ ಆಧ್ಯಾತ್ಮಿಕ ಜೀವನ ನೇತೃತ್ವದಲ್ಲಿ ಇವರ ಜೀವನ ವಿಕಾಸವಾಯಿತು. ಪತಿಯ ಸಹಾಯದಿಂದ ಜಪತಪ ಸಾಧನೆ ಯಿಂದ ನಿರ್ವಿಕಲ್ಪ ಸಮಾಧಿಯವರೆಗೆ ಏರಿ ಹೋಗಿದ್ದರು.

ಶಾಸ್ತ್ರಗಳ ಸಾರವಾದ ಆಧ್ಯಾತ್ಮಿಕ ಅನುಭವ ಇವರಿಗೆ ಆಗಿತ್ತು. ಭವಜೀವಿಗಳ ಮೇಲೆ ಅಪಾರವಾದ ಅನುಕಂಪವಿತ್ತು. ಶ್ರೀರಾಮಕೃಷ್ಣರು ತಾವು ಪ್ರಪಂಚವನ್ನು ಬಿಟ್ಟು ಹೋಗುವಾಗ ''ಸುತ್ತಲೂ ಜನರು ಅಜ್ಞಾನದ ಕತ್ತಲೆಯಲ್ಲಿ ತೊಳಲುತ್ತಿರುವರು. ನೀನು ಅವರನ್ನು ಉದ್ಧರಿಸಬೇಕು'' ಎಂದು ಹೇಳಿದ್ದರು. ಬದ್ಧಜೀವಿಗಳ ಸಹಾಯಕ್ಕೆ ತಮ್ಮ ಕೈಲಾದುದನ್ನೆಲ್ಲ ಮಾಡಲು ಸಿದ್ಧರಾಗಿದ್ದರು.

ಉಪದೇಶವೆಂದರೆ ಗುರು ಶಿಷ್ಯನಿಗೆ ಕೇವಲ ಮಂತ್ರವನ್ನು ಮಾತ್ರ ಕೊಡುವುದಲ್ಲ. ಅದರೊಡನೆ ತನ್ನ ತಪಸ್‌ಶಕ್ತಿಯನ್ನೂ ಧಾರೆ ಎರೆಯುವನು. ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರೇ ತಾವು ಸ್ವೀಕರಿಸುವುದಕ್ಕೆ ಕಷ್ಟವಾದ ಕೆಲವು ಶಿಷ್ಯರನ್ನು ಶ್ರೀಶಾರದಾದೇವಿ ಬಳಿಗೆ ಕಳುಹಿಸುತ್ತಿದ್ದರು. ಅವರು ಶಿವನಂತೆ ಎಂತಹ ವಿಷವನ್ನಾದರೂ ತೆಗೆದುಕೊಳ್ಳಬಲ್ಲರು ಎಂದು ಹೇಳುತ್ತಿದ್ದರು. ಹೀನ ಜೀವನ ನಡೆಸಿದವರು ಬಂದು ಇವರ ಕಾಲುಗಳನ್ನು ಮುಟ್ಟಿ ನಮಸ್ಕಾರ ಮಾಡಿದರೆ ಇವರಿಗೆ ಚೇಳು ಕುಟುಕಿದಂತೆ ವ್ಯಥೆ ಆಗುತ್ತಿತ್ತು. ಆದರೂ ಅವರ ಎದುರಿಗೆ ಅದನ್ನು ಹೇಳುತ್ತಿರಲಿಲ್ಲ. ಅನಂತರ ಗಂಗಾನದಿಯ ನೀರಿನಿಂದ ಪ್ರೋಕ್ಷಿಸಿದಾಗ ಮಾತ್ರ ಅವರಿಗೆ ಶಮನವಾಗುತ್ತಿತ್ತು. ಇದನ್ನು ಹತ್ತಿರವಿದ್ದ ಶಾರದಾದೇವಿ ಅವರಿಗೆ ಹೇಳಿದರೆ ಎಲ್ಲಿ ಜನರಿಗೆ ಮುಟ್ಟಬೇಡ ಎಂದು ಹೇಳುವರೊ ಎಂದು ತಿಳಿದು ಹೇಳುತ್ತಿರಲಿಲ್ಲ. ತಮಗೆ ವ್ಯಥೆಯಾದರೂ ಇತರರಿಗೆ ಒಳ್ಳೆಯದಾದರೆ ಅದೇ ತಮಗೆ ಸಂತೋಷವೆಂದು ಭಾವಿಸಿದ್ದರು.

ಒಂದು ಸಲ ಶ್ರೀಶಾರದಾದೇವಿ ಜಯರಾಮವಟಿಯಲ್ಲಿದ್ದಾಗ ಒಬ್ಬ ಭಕ್ತ ಇವರ ಬಳಿಗೆ ಬಂದ. ಆತನಿಗೆ ತನ್ನ ಹೀನ

ಜೀವನದ ನೆನಪಾಗಿ ಶ್ರೀ ಶಾರದಾದೇವಿಯವರನ್ನು ಮುಟ್ಟದೆ ಅನುಮಾನಿಸುತ್ತ ದೂರದಲ್ಲಿ ನಿಂತಿದ್ದ. ಇದನ್ನು ತಿಳಿದು ಶ್ರೀಶಾರದಾದೇವಿ ಅವರು "ಮಗು ಏಕೆ ಅನುಮಾನಿಸುತ್ತಿರುವಿ? ನಾನು ಹುಟ್ಟಿರುವುದೇ ಇದಕ್ಕೆ. ಇನ್ನೊಬ್ಬರ ಪಾಪಗಳನ್ನು ಮುಟ್ಟಿ ನಾವು ಭಸ್ಮಮಾಡದೆ ಇದ್ದರೆ ಮತ್ತಾರು ಮಾಡುವರು? ನಾವೇ ನಿರಾಕರಿಸಿದರೆ ಪಾಪಿಗಳಿಗೆ ಯಾರು ಆಶ್ರಯ ಕೊಡುವರು?" ಎಂದು ಹೇಳುತ್ತ ಅವನಿಗೆ ತಮ್ಮ ಪಾದಗಳನ್ನು ಮುಟ್ಟಿ ನಮಸ್ಕಾರಮಾಡಲು ಅವಕಾಶ ಕೊಟ್ಟರು.

ಸಹಜ ಮಾತೃಪ್ರೇಮ ಯಾವಾಗಲೂ ಇವರೆದೆಯಲ್ಲಿ ತುಂಬಿ ತುಳುಕಾಡುತ್ತಿತ್ತು. ಯಾರು ಯಾವ ಹೊತ್ತಿನಲ್ಲಿ ಇವರ ಬಳಿಗೆ ಬರಲಿ, ತಮ್ಮ ಆರೋಗ್ಯ ಅನಾನುಕೂಲಗಳನ್ನೆಲ್ಲ ಒತ್ತಟ್ಟಿಗಿಟ್ಟು ಸರ್ವದಾ ಇವರಿಗೆ ಸಹಾಯಮಾಡಲು ಸಿದ್ಧರಾಗಿರುತ್ತಿದ್ದರು. ಒಮ್ಮೆ ಜಯರಾಮವಟಿಯಲ್ಲಿ ಇವರು ಮಲೇರಿಯಾ ಜ್ವರದಿಂದ ನರಳುತ್ತಿದ್ದಾಗ ಭಕ್ತನೊಬ್ಬನು ದೂರದಿಂದ ಬಂದು ಇವರಿಂದ ಉಪದೇಶವನ್ನು ಸ್ವೀಕರಿಸಬೇಕೆಂದು ಬಯಸಿದನು. ಹತ್ತಿರವಿದ್ದ ಪರಿಚಾರಕರು ಶಾರದಾದೇವಿ ಅವರಿಗೆ ಈಗ ಅನಾರೋಗ್ಯ, ಇನ್ನೊಮ್ಮೆ ಬನ್ನಿ ಎಂದು ಹೇಳಿ, ಒಳಗೆ ಹೋಗಲು ಅನುಮತಿಯನ್ನು ಕೊಡಲಿಲ್ಲ. ಆದರೆ ಭಕ್ತನು "ಒಮ್ಮೆಯಾದರೂ ಮಾತೆಯ ದರ್ಶನ ಮಾಡಿಕೊಂಡು ಹೋಗುತ್ತೇನೆ; ಬಿಡಿ" ಎಂದು ಕೇಳಿಕೊಂಡ. ಆದರೂ ಅವರು ಒಳಗೆ ಬಿಡಲಿಲ್ಲ. ಶ್ರೀಶಾರದಾದೇವಿಗೆ ಇದು ಕೇಳಿಸಿ ಅವರು ಪರಿಚಾರಕನನ್ನು ಕರೆದು ಆತನನ್ನು ಒಳಗೆ ಬಿಡಿ ಎಂದು ಹೇಳಿದರು. ತಾವು ಹುಟ್ಟಿರುವುದೇ ಅದಕ್ಕೆ; ಅವನನ್ನು ಏತಕ್ಕೆ ತಡೆಯುತ್ತೀರಿ ಎಂದು ಹೇಳಿದರು.

ಶ್ರೀಶಾರದಾದೇವಿ ಅವರ ಶಿಷ್ಯರು ಕೇವಲ ಹಿಂದೂಗಳೇ ಆಗಿರಲಿಲ್ಲ. ಅವರಲ್ಲಿ ಪಾರ್ಸಿಯವರು ಇದ್ದರು. ಕ್ರೈಸ್ತರಿದ್ದರು, ಮತ್ತು ಇನ್ನುಳಿದ ಜಾತಿ ಮತಗಳವರೂ ಇದ್ದರು. ಎಲ್ಲರನ್ನೂ ಪಕ್ಷಪಾತವಿಲ್ಲದೆ ಇವರು ಹರಸಿದರು. ಅನೇಕವೇಳೆ ಇವರ ಬಳಿಗೆ ಬರುವ ಜನರ ಆಂತರಿಕ ಸ್ವಭಾವ ತಿಳಿದಿತ್ತು. ಅವರಲ್ಲಿ ಅನೇಕರು ಅಯೋಗ್ಯರಾಗಿದ್ದರು. ಆದರೂ ಇವರನ್ನು ಒಮ್ಮೆ ತಾಯಿ ಎಂದು ಕರೆದರೆ ಸಾಕು, ಅವರ ಪಾಪವನ್ನೆಲ್ಲ ಮರೆತು, ತಮ್ಮ ಪ್ರೀತಿ ಆಶೀರ್ವಾದಾಮೃತದಿಂದ ಅವರನ್ನು ತೃಪ್ತಿಪಡಿಸುತ್ತಿದ್ದರು.

ಧಾರಾಳವಾಗಿ ಇವರು ಯಾರು ಬಂದು ಕೇಳಿದರೂ ಉಪದೇಶವನ್ನು ಕೊಟ್ಟು ಕಳುಹಿಸುತ್ತಿದ್ದರು. ಇದರ ಪರಿಣಾಮವಾಗಿ ಇವರಿಂದ ಉಪದೇಶ ಪಡೆದವರೆಲ್ಲರೂ ಉತ್ತಮ ದರ್ಜೆಗೆ ಸೇರಿದವರಾಗಿರಲಿಲ್ಲ. ಇವರ ಹತ್ತಿರ ಇದ್ದ ಯೋಗಿನ್ ಮಾ ತಮಾಷೆಗಾಗಿ ಶ್ರೀಶಾರದಾದೇವಿ ಅವರನ್ನು, "ನೋಡಿ ಪ್ರತಿಯೊಬ್ಬ ಶ್ರೀರಾಮಕೃಷ್ಣರ ಶಿಷ್ಯರೂ ಆಧ್ಯಾತ್ಮಿಕ ಜೀವನದಲ್ಲಿ ಬಹಳ ಮುಂದುವರಿದು ಹೋಗಿರುವರು. ನಿಮ್ಮ ಶಿಷ್ಯರಲ್ಲಿ ಎಷ್ಟು ಜನ ಹಾಗಿರುವರು ?" ಎಂದು ಕೇಳಿದರು. ಅದಕ್ಕೆ ಶ್ರೀಶಾರದಾದೇವಿ, "ಅದಕ್ಕೆ ಆಶ್ಚರ್ಯಪಡುವುದೇನಿದೆ ? ಅವರು ತಮ್ಮ ಬಳಿಗೆ ಬಂದವರಲ್ಲಿ ತುಂಬಾ ಉತ್ತಮರಾದವರನ್ನು ಆರಿಸಿಕೊಂಡು ಸ್ವೀಕರಿಸಿದರು. ಆದರೆ ನನ್ನ ಪಾಲಿಗೆ ಸಾವಿರಾರು ಜೊಳ್ಳು ಜೀವಿಗಳನ್ನು ಬಿಟ್ಟು ಹೋಗಿರುವರು. ಅವರ ಶಿಷ್ಯರೊಂದಿಗೆ ನನ್ನ ಶಿಷ್ಯರನ್ನು ಹೋಲಿಸಬೇಡ" ಎಂದರು.

ಒಬ್ಬ ಶಿಷ್ಯನಿಗೆ ಶ್ರೀಶಾರದಾದೇವಿ ಅವರು ಉಪದೇಶಕೊಡುವ ಧಾರಾಳತನ ಸರಿಯೆಂದು ತೋರಲಿಲ್ಲ. "ನೀವು ಇಷ್ಟೊಂದು

ಜನರಿಗೆ ಉಪದೇಶ ಕೊಡುತ್ತೀರಿ. ಅವರನ್ನೆಲ್ಲ ನೀವು ಜ್ಞಾಪಕ ದಲ್ಲಿಟ್ಟುಕೊಳ್ಳಲು ಆಗುವುದೇ ? ಗುರು ಶಿಷ್ಯನನ್ನು ಜ್ಞಾಪಕ ದಲ್ಲಿಟ್ಟುಕೊಂಡು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರೆಯುವು ದನ್ನು ನೋಡಿಕೊಳ್ಳಬೇಕು. ಅದಕ್ಕಾಗಿ ನೀವು ಎಷ್ಟು ಜನ ರನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ಸಾಧ್ಯವೋ ಅಷ್ಟು ಮಂದಿಗೆ ಮಾತ್ರ ಉಪದೇಶಕೊಟ್ಟರೆ ಮೇಲಲ್ಲವೇ ? ಎಂದು ಕೇಳಿದ. ಅದಕ್ಕೆ ಶ್ರೀಶಾರದಾದೇವಿ ಹೀಗೆಂದರು : "ಮಗು, ಶ್ರೀರಾಮ ಕೃಷ್ಣರು ತಮಗೆ ಹಾಗೆ ಮಾಡಬೇಡವೆಂದು ಹೇಳಲಿಲ್ಲ. ಅವರು ನನಗೆ ಅನೇಕ ವಿಚಾರಗಳಲ್ಲಿ ಬುದ್ಧಿಯನ್ನು ಹೇಳಿರುವರು. ನಾನು ಮಾಡುವುದು ಸರಿಯಲ್ಲದೆ ಇದ್ದರೆ ಅವರು ಈ ವಿಷಯ ದಲ್ಲಿ ನನಗೆ ಏನನ್ನಾದರೂ ಹೇಳುತ್ತಿರಲಿಲ್ಲವೆ ? ನಾನು ಶಿಷ್ಯ ಜವಾಬ್ದಾರಿಯನ್ನೆಲ್ಲ ಶ್ರೀರಾಮಕೃಷ್ಣರಿಗೇ ಬಿಡುತ್ತೇನೆ ಮತ್ತು ಪ್ರತಿದಿನ ಶ್ರೀರಾಮಕೃಷ್ಣರಿಗೆ, ಅವರ ಶಿಷ್ಯರು ಎಲ್ಲಿದ್ದರೂ ಅವರನ್ನು ಕಾಪಾಡಬೇಕೆಂದು ಬೇಡುತ್ತೇನೆ. ಅದಲ್ಲದೆ ನಾನು ಕೊಡುವ ಉಪದೇಶ ಮಂತ್ರಗಳೆಲ್ಲ ಶ್ರೀರಾಮಕೃಷ್ಣರೇ ನನಗೆ ಕಲಿಸಿಕೊಟ್ಟದ್ದು. ಇವುಗಳ ಮೂಲಕ ಒಬ್ಬನು ಮುಕ್ತಿಯನ್ನು ನಿಜವಾಗಿ ಗಳಿಸಬಹುದು."

ನಿಜವಾಗಿ ಶ್ರೀಶಾರದಾದೇವಿ ಅವರು ಯಾವಾಗಲೂ ಶಿಷ್ಯರ ಆಧ್ಯಾತ್ಮಿಕ ಜೀವನದ ಮೇಲ್ವಿಚಾರಣೆಯನ್ನು ನೋಡಿಕೊಳ್ಳು ತ್ತಿದ್ದರು. ಶಿಷ್ಯರು ಸದಾ ಇವರ ಮನಸ್ಸಿನಲ್ಲಿ ಇರುತ್ತಿದ್ದರು. ಅವರನ್ನು ಮೇಲೆತ್ತುವುದಕ್ಕೆ ತಾವು ಜೀವಿಸಿರುವ ಪರ್ಯಂತ ಪ್ರಯತ್ನಿಸುತ್ತಿದ್ದರು. ತಾವು ರೋಗದ ಶಯ್ಯೆಯಲ್ಲಿ ಮಲಗಿರು ವಾಗಲೂ ರಾತ್ರಿ ಎರಡು ಗಂಟೆಯ ಹೊತ್ತಿಗೆ ಎದ್ದು ಜಪ ಮಾಡುತ್ತಿದ್ದರು. ಇದನ್ನು ನೋಡಿ ಭಕ್ತನೊಬ್ಬನು "ನೀವು

ರಾತ್ರಿಹೊತ್ತು ಸರಿಯಾಗಿ ನಿದ್ರೆ ಮಾಡುವುದಿಲ್ಲ'' ಎಂದನು. ಅದಕ್ಕೆ ಶ್ರೀಶಾರದಾದೇವಿ ಹೀಗೆ ಹೇಳಿದರು. ''ಮಗು ನಾನು ಹೇಗೆ ನಿದ್ರೆ ಮಾಡುವುದು ? ಅನೇಕರು ಬಹಳ ಉತ್ಸಾಹದಿಂದ ಬಂದು ಉಪದೇಶವನ್ನು ತೆಗೆದುಕೊಂಡು ಹೋಗುತ್ತಾರೆ. ಆದರೆ ನಾನು ಅವರ ಜವಾಬ್ದಾರಿಯನ್ನು ವಹಿಸಿಕೊಂಡಿರುವುದರಿಂದ ಅವರಿಗೋಸ್ಕರ ನಾನು ಮಾಡಬೇಡವೇ ? ಅದಕ್ಕಾಗಿಯೇ ಶ್ರೀರಾಮಕೃಷ್ಣರಿಗೆ 'ಅವರ ಆಧ್ಯಾತ್ಮಿಕ ಶಕ್ತಿಯನ್ನು ಜಾಗ್ರತ ಗೊಳಿಸು. ಅವರಿಗೆ ಮುಕ್ತಿಯನ್ನು ಕೊಡು. ಜಗದಲ್ಲಿ ದುಃಖ ತುಂಬಿದೆ. ಮತ್ತೊಮ್ಮೆ ಇವರು ಬರದಿರಲಿ' ಎಂದು ಬೇಡುವೆ."

ಮತ್ತೊಂದು ದಿನ ಚಂಡಿಯ 'ಪೂಜೆ ಆದಮೇಲೆ ತಮಗೆ ಜ್ಞಾಪಕ ಇರುವ ಮತ್ತು ಇಲ್ಲದೆ ಇರುವ ಶಿಷ್ಯರ ಪರವಾಗಿ ಪುಷ್ಪಾಂಜಲಿಯನ್ನು ಅರ್ಪಿಸಿದರು.

ಶ್ರೀಶಾರದಾದೇವಿ ಅವರು ಧಾರಾಳವಾಗಿ ಉಪದೇಶವನ್ನು ಕೊಡುವಂತೆಯೇ, ಭಕ್ತರನ್ನು ಪ್ರೀತಿಯಿಂದ ನೋಡಿಕೊಳ್ಳು ವುದರಲ್ಲಿ ಮತ್ತು ಅವರು ಕೊಡುವ ಕಷ್ಟಗಳನ್ನು ಸಹಿಸುವುದರಲ್ಲಿ ತಾಳ್ಮೆಯನ್ನೂ ತೋರುತ್ತಿದ್ದರು. ಅವರ ಹಳ್ಳಿಗೆ ಹೋಗಿ ಅವರ ಮನೆಯಲ್ಲಿದ್ದು ಒಮ್ಮೆ ಅವರ ಪ್ರೀತಿಯನ್ನು ಸವಿದವರಿಗೆ ತಮ್ಮ ಮನೆಯ ತಾಯಿತಂದೆಗಳ ಪ್ರೀತಿಯೂ ಸಪ್ಪೆಯಾಗುತ್ತಿತ್ತು. ಅವರು ತಮ್ಮ ಪ್ರಿಯ ಶಿಷ್ಯರಿಗೆ ಮಾತ್ರ ಅಷ್ಟು ಪ್ರೀತಿಯನ್ನು ತೋರುತ್ತಿರಲಿಲ್ಲ. ದೇವರ ಹೆಸರಿನಲ್ಲಿ ಯಾರು ಬರಲಿ, ಅವರು ಎಂತಹ ತಪ್ಪನ್ನು ಮಾಡಿರಲಿ ಎಲ್ಲರನ್ನೂ ಒಂದೇ ರೀತಿಯಿಂದ ನೋಡುತ್ತಿದ್ದರು. ಕೆಲವು ವೇಳೆ ಭಕ್ತರು ಇವರು ಜಯರಾಮ ವಟಿಯಲ್ಲಿದ್ದಾಗ ಹೋಗುತ್ತಿದ್ದರು. ಶ್ರೀಶಾರದಾದೇವಿ ಅವರಿಗೆ ದೇಹಾರೋಗ್ಯ ಚೆನ್ನಾಗಿ ಇರುವವರೆಗೆ ಅವರೇ ಇವರಿಗೆ ಅಡಿಗೆ

ಮಾಡಿ ಬಡಿಸುತ್ತಿದ್ದರು. ಊಟವಾದ ಮೇಲೆ ಎಲೆಯನ್ನು ಕೂಡ ಎತ್ತಲು ಅವರಿಗೆ ಅವಕಾಶವನ್ನು ಕೊಡದೆ ತಾವೇ ಅದನ್ನು ಮಾಡುತ್ತಿದ್ದರು. ಅವರಿಗೆ ಕೈತೊಳೆದುಕೊಳ್ಳುವುದಕ್ಕೆ ನೀರು ಕೊಡುತ್ತಿದ್ದರು. ಕುಳಿತುಕೊಂಡಮೇಲೆ ಬೀಸಣಿಗೆ ಯಿಂದ ಬೀಸುತ್ತಿದ್ದರು. ಭಕ್ತನೊಬ್ಬನಿಗೆ ಇಂತಹ ಸೇವೆಯನ್ನು ಶ್ರೀಮಾತೆ ಅವರಿಂದ ತೆಗೆದುಕೊಳ್ಳಲು ನಾಚಿ ಹಾಗೆ ಮಾಡಬೇಡಿ ಎಂದು ಬೇಡಿಕೊಂಡಾಗ, ಶ್ರೀಶಾರದಾದೇವಿ ''ನಾನು ನಿನ್ನ ತಾಯಿ ಅಲ್ಲವೇ ? ಮಗುವಿನ ಕೆಲಸವನ್ನು ಮಾಡುವುದು ತಾಯಿಯ ಹಕ್ಕು. ಮಗು ಕೊಳೆ ಆಗಿದ್ದರೆ ತೊಳೆಯುವುದು ಕೂಡ ನನ್ನ ಕೆಲಸ'' ಎಂದರು.

ಜಯರಾಮವಟಿಗೆ ಯಾವ ಭಕ್ತರು ಬರಲಿ ಅವರನ್ನು ಒಂದೆರಡು ದಿನ ಇಟ್ಟುಕೊಂಡೇ ಕಳುಹಿಸುತ್ತಿದ್ದರು. ''ಗಯ ಕಾಶಿ ಮುಂತಾದ ಊರಿಗೆ ಹೋಗುವುದು ಸುಲಭ. ಇಲ್ಲಿಗೆ ಬರುವುದು ಕಷ್ಟ. ಆದರೂ ಅವರು ಇದನ್ನೆಲ್ಲ ಸಹಿಸಿಕೊಂಡು ಬರುತ್ತಾರಲ್ಲ ಎಂದು ಅವರನ್ನು ಉಪಚಾರ ಮಾಡದೆ ಕಳುಹಿಸುತ್ತಿರಲಿಲ್ಲ. ಬಂದ ಭಕ್ತರು ಬೀಳ್ಕೊಡುವಾಗ ತಾಯಿ ಮಗುವಿನಿಂದ ಅಗಲದಂತೆ ವ್ಯಸನಪಡುತ್ತಿದ್ದರು. ಇವರ ಬಳಿಗೆ ಚಿತ್ರವಿಚಿತ್ರ ಭಕ್ತರು ಬರುತ್ತಿದ್ದರು. ಅವರು ಕೊಡುವ ಕಿರುಕುಳಗಳನ್ನೆಲ್ಲ ಸಹಿಸುತ್ತಿದ್ದರು. ಒಂದು ದಿನ ಪೂಜೆಯೆಲ್ಲ ಆದಮೇಲೆ ದೇವರ ಮನೆಯಿಂದ ತಮ್ಮ ಕೋಣೆಯ ಕಡೆ ಬರುತ್ತಿದ್ದಾಗ, ಭಕ್ತನೊಬ್ಬನು ಇವರನ್ನು ನಿಲ್ಲಿಸಿ, ಪೂಜಿಸಿ, ಇವರ ಮುಂದೆ ಪ್ರಾಣಾಯಾಮ ಮಾಡಲು ಕುಳಿತನು. ಎಷ್ಟು ಹೊತ್ತಾದರೂ ಹೋಗಲಿಲ್ಲ. ಆಗ ಗುಲಾಬ್ ಮಾ ಎಂಬಾಕೆ ಅವನಿಗೆ "ನೀನು ಮರದ ವಿಗ್ರಹದ ಎದುರಿಗೆ ಕುಳಿತಿರುವೆ

ಎಂದು ಭಾವಿಸಿದೆಯಾ? ನಿನ್ನ ಪ್ರಾಣಾಯಾಮದಿಂದ ವಿಗ್ರಹಕ್ಕೆ ಜೀವ ತುಂಬಬೇಕೆಂದು ಇರುವೆಯೇನು? ಶ್ರೀಶಾರದಾದೇವಿ ಅವರಿಗೆ ಕುಳಿತು ಸಾಕಾಗಿದೆ ಎಂಬ ತಿಳಿವಳಿಕೆ ಕೂಡ ನಿನಗಿಲ್ಲವೆ?'' ಎಂದು ಗದರಿಸಿ ಕಳುಹಿಸಬೇಕಾಯಿತು.

ಮತ್ತೊಂದು ದಿನ ಭಕ್ತನೊಬ್ಬನು ಇವರಿಗೆ ನಮಸ್ಕಾರ ಮಾಡುವುದಕ್ಕೆ ಬಗ್ಗಿ ಬಲವಾಗಿ ತಲೆಯಿಂದ ಇವರ ಕಾಲನ್ನು ಅಮುಕಿದನು. ಹೀಗೇಕೆ ಮಾಡಿದೆ ಎಂದು ಕೇಳಿದಾಗ ''ಶ್ರೀಶಾರದಾದೇವಿ ನನ್ನನ್ನು ಜ್ಞಾಪಕದಲ್ಲಿಟ್ಟಿರಲಿ'' ಎಂದು ಹೇಳಿದ.

ಶಿಷ್ಟಾಚಾರ ಪದ್ಧತಿಯನ್ನೇ ಯಾವಾಗಲೂ ಉಪದೇಶ ಕೊಡುವಾಗ ಅನುಸರಿಸುತ್ತಿರಲಿಲ್ಲ. ಕೆಲವು ವೇಳೆ ಎಂತಹ ಸಮಯ ಮತ್ತು ಸ್ಥಳದಲ್ಲಾದರೂ ಕೊಡುತ್ತಿದ್ದರು. ಒಬ್ಬನಿಗೆ ಸೂತಕದಲ್ಲಿದ್ದಾಗ ಉಪದೇಶಕೊಟ್ಟರು. ಇನ್ನೊಬ್ಬನಿಗೆ ಹುಲ್ಲಿನ ಮೆದೆಯ ಮೇಲೆ ಕೊಟ್ಟರು. ಒಬ್ಬನಿಗೆ ಒಂದು ರೈಲ್ವೆ ಸ್ಟೇಷನ್ನಿನಲ್ಲಿ, ಇನ್ನೊಬ್ಬನಿಗೆ ಕೊಡೆಯ ನೆರಳಿನಲ್ಲಿ, ಮಳೆಯ ನೀರನ್ನೇ ಅಭಿಷೇಕ ಮಾಡಿ ಕೊಟ್ಟರು. ಉಪದೇಶವನ್ನು ಅತ್ಯಂತ ಸ್ವಲ್ಪ ಬಾಹ್ಯಾಚಾರದಿಂದ ಪೂರೈಸಿಬಿಡುತ್ತಿದ್ದರು. ಶ್ರೀರಾಮಕೃಷ್ಣ ಸಂಘದ ಹಿರಿಯ ಸ್ವಾಮಿಗಳು ಇದೇ ಕೆಲಸವನ್ನು ಮಾಡುವುದಕ್ಕೆ ಹೆಚ್ಚು ಕಾಲವನ್ನು ತೆಗೆದು ಕೊಳ್ಳುತ್ತಿದ್ದರು. ಇದಕ್ಕೆ ಕಾರಣವನ್ನು ಕೇಳಿದಾಗ ಅವರು, "ಶ್ರೀಶಾರದಾದೇವಿ ಅವರು ಇಚ್ಛೆಪಟ್ಟರೆ ಸಾಕು, ಅವರು ಶಿಷ್ಯರನ್ನು ಸ್ವೀಕರಿಸುವರು. ಆದರೆ ಆ ಶಕ್ತಿ ನನ್ನಲ್ಲಿ ಇಲ್ಲ. ಆದಕಾರಣವೇ ಉಪದೇಶಕ್ಕೆ ಮುಂಚೆ ಸ್ವಲ್ಪ ಕಾಲವನ್ನು ಧ್ಯಾನದಲ್ಲಿ ಕಳೆಯಬೇಕಾಗುವುದು'' ಎಂದರು.

ಶ್ರೀಶಾರದಾದೇವಿ ಅವರಲ್ಲಿ ವ್ಯಕ್ತವಾಗುತ್ತಿದ್ದ ಅತ್ಯಂತ ಹಿರಿಯ ಗುಣವೇ ಅವರ ತಾಯೊಲುಮೆ. ಸಾಧಾರಣ ಹೆಂಗಸಿನಂತೆ ಕಾಮಪಾಶಕ್ಕೆ ಸಿಕ್ಕಿ, ನವಮಾಸಗಳು ಹೊತ್ತು, ಬೇನೆ ತಿಂದು ಇವರು ತಾಯ್ತನವನ್ನು ಸಂಪಾದಿಸಬೇಕಾಗಿರಲಿಲ್ಲ. ಆಧ್ಯಾತ್ಮಿಕ ಜೀವನದ ದೃಷ್ಟಿಯಿಂದಲೇ ಇದನ್ನು ಕಲಿತರು. ಎಂತಹ ಪಾಪಿಗಳಾಗಿರಲಿ ನೀಚರಾಗಿರಲಿ ಇವರ ತಾಯ್ತನದ ಪ್ರೇಮಕ್ಕೆ ಬಾಹಿರರಾಗಿರಲಿಲ್ಲ. ಅವರ ಸಮೀಪದಲ್ಲಿ ಎಲ್ಲರಿಗೂ ಒಂದು ಸಲಿಗೆ ಬರುತ್ತಿತ್ತು. ತಾವೊಂದು ಪೂಜ್ಯತಮ ವ್ಯಕ್ತಿಯ ಸಮೀಪದಲ್ಲಿರುವೆವು ಎಂಬ ಭಾವನೆ ಬರುತ್ತಿತ್ತು. ಅನೇಕರು ಪ್ರಶ್ನೆಗಳನ್ನು ಕೇಳಬೇಕೆಂದು ಇವರ ಹತ್ತಿರ ಬರುತ್ತಿದ್ದರು. ಇವರ ಹತ್ತಿರ ಹೋಗುತ್ತಲೇ ಆ ಶಾಂತಿ ವಾತಾವರಣದಲ್ಲಿ ಪ್ರಶ್ನೆಗಳಾವುವೂ ನಿಲ್ಲದೆ ಎಲ್ಲಾ ಮಾಯ ವಾಗುತ್ತಿದ್ದವು. ಬಂದವನು ಎಂತಹ ಜೀವನವನ್ನು ನಡೆಸಿರಲಿ ಅವನನ್ನು ಕರುಣೆಯಿಂದ ನೋಡಿ ಮೇಲೆತ್ತಲು ಪ್ರಯತ್ನಿಸು ತ್ತಿದ್ದರು. ಯಾರು ಅದಕ್ಕೆ ಪ್ರತಿಯಾಗಿ ಏನು ಹೇಳಿದರೂ ಕೇಳುತ್ತಿರಲಿಲ್ಲ. ಒಬ್ಬ ಭಕ್ತನು ಒಮ್ಮೆ ಏನೋ ಕೆಟ್ಟ ಕೆಲಸ ಮಾಡಿದ್ದನು. ಆತನನ್ನು ತಮ್ಮ ಎದುರಿಗೆ ಸೇರಿಸಬೇಡಿ ಎಂದು ಹಿರಿಯ ಸ್ವಾಮಿಗಳು ಹೇಳಿದ್ದರು. ಆಗ ಶ್ರೀಶಾರದಾದೇವಿ ಅವರು "ನನ್ನ ಮಗು ಕೆಸರಿನಲ್ಲಿ ಬಿದ್ದು ಕೊಳೆಮಾಡಿಕೊಂಡರೆ ಅದನ್ನು ಮೇಲೆತ್ತಿ ಕೆಸರನ್ನು ತೊಳೆದು ಪ್ರೀತಿಸುವುದು ನನ್ನ ಕರ್ತವ್ಯವಲ್ಲವೆ?" ಎಂದರು. ಮತ್ತೊಮ್ಮೆ ತನ್ನ ಯೌವನದಲ್ಲಿ ಕೆಟ್ಟ ಕೆಲಸಕ್ಕೆ ತುತ್ತಾದ ಮಹಿಳೆಯೊಬ್ಬಳು, ಇವರ ಬಾಗಿಲಿನ ಹತ್ತಿರ ಅಳುತ್ತ ಕುಳಿತಿದ್ದಳು. ಆಕೆಯನ್ನು ಕರೆದು ಆಕೆಯ ಕಥೆಯನ್ನೆಲ್ಲ ಸಾವಧಾನದಿಂದ ಕೇಳಿದರು. ಅನಂತರ

ಕಣ್ಣೀರಿನ ಗಂಗೆ ನಿನ್ನ ಪಾಪವನ್ನೆಲ್ಲ ತೊಳೆದಿದೆ. ಹೋಗಿ ಗುರುದೇವನಿಗೆ ನಮಸ್ಕರಿಸಿ ಬಾ. ಉಪದೇಶ ಕೊಡುತ್ತೇನೆ'' ಎಂದರು. ಹತ್ತಿರಿದ್ದ ಶಿಷ್ಯರು ''ಅಂತಹವರಿಗೆಲ್ಲ ನೀವು ಉಪದೇಶ ಕೊಡುವುದು ಸರಿಯಲ್ಲ'' ಎಂದಾಗ ಶ್ರೀಶಾರದಾದೇವಿ ''ಶ್ರೀರಾಮಕೃಷ್ಣರು ಬಂದದ್ದು ಸಜ್ಜನರ ಉದ್ಧಾರಕ್ಕೆ ಮಾತ್ರ ವಲ್ಲ ಅವರಿಗೆ ಮತ್ತೊಬ್ಬರಿಂದ ಅಷ್ಟು ಉಪಕಾರ ಬೇಕಿಲ್ಲ. ಹೊರ ಲಾರದ ಪಾಪದ ಹೊರೆಯನ್ನು ಹೊತ್ತುತೊಳಲಿ ಗತಿಕೆಟ್ಟಿರು ವವರ ಸಹಾಯಕ್ಕೆ ಅವತಾರ ಪುರುಷರು ಬರುವರು'' ಎಂದರು.

ಇನ್ನೊಬ್ಬರಲ್ಲಿ ಎಂತಹ ತಪ್ಪು ಇದ್ದರೂ ಅದನ್ನು ಗಣನೆಗೆ ತರುತ್ತಿರಲಿಲ್ಲ. ತಮ್ಮ ಜೀವನದಲ್ಲಿ ಹಾಗೆ ಮಾಡುವುದು ತುಂಬಾ ಹೀನಚಾಳಿ ಎಂದು ಭಾವಿಸಿದ್ದರು. ಶ್ರೀಶಾರದಾದೇವಿ ಕಲ್ಕತ್ತೆಯಲ್ಲಿದ್ದಾಗ ಮನೆಯ ಪರಿಚಾರಿಕೆ ಏನನ್ನೋ ತಪ್ಪು ಮಾಡಿದಳು. ಗುಲಾಬ್ ಮಾ ಎಂಬಾಕೆ ಅವಳನ್ನು ನಿಂದಿಸು ತ್ತಿದ್ದರು. ಶ್ರೀಶಾರದಾದೇವಿ ಏನು ಕಾರಣ ಎಂದು ಕೇಳಿದಾಗ ಅವರು ''ನಿಮಗೆ ಕಾರಣ ಹೇಳಿ ಪ್ರಯೋಜನವೇನು ? ಅವರು ಏನು ತಪ್ಪು ಮಾಡಿದರೂ ನೀವು ನೋಡುವ ಹಾಗಿಲ್ಲ'' ಎಂದರು. ಅದಕ್ಕೆ ಶ್ರೀಶಾರದಾದೇವಿ ಅವರು ''ಗುಲಾಬ್, ಪ್ರಪಂಚದಲ್ಲಿ ಸದಾ ಇನ್ನೊಬ್ಬರ ತಪ್ಪನ್ನು ಹುಡುಕುತ್ತಿರುವ ವ್ಯಕ್ತಿಗಳಿಗೆ ಬರಗಾಲವಿಲ್ಲ. ನಾನು ಹಾಗೆ ಮಾಡದೆ ಇದ್ದರೆ ಪ್ರಪಂಚವೇನು ನನಗಾಗಿ ನಿಂತುಬಿಡುವುದಿಲ್ಲ'' ಎಂದರು.

ಎಂತಹ ಕೆಲಸವನ್ನಾದರೂ ಇವರು ಮತ್ತೊಬ್ಬರಿಗಾಗಿ ಮಾಡಲು ಸಿದ್ಧವಾಗಿದ್ದರು. ಸಾಧ್ಯವಾದ ಮಟ್ಟಿಗೆ ಒಬ್ಬರನ್ನು ಮತ್ತೊಬ್ಬರ ದೂರಿನಿಂದ ಪಾರುಮಾಡಲು ಯತ್ನಿಸುತ್ತಿದ್ದರು. ಒಂದು ದಿನ ಇವರು ಜಯರಾಮವಟಿ

ಯಲ್ಲಿದ್ದಾಗ ಭಕ್ತನೊಬ್ಬ ಕೂಲಿಯ ಹೆಂಗಸಿನ ಕೈಯ್ಯಲ್ಲಿ ಶ್ರೀಶಾರದಾದೇವಿಗೆಂದು ತರಕಾರಿಯನ್ನು ಕಳುಹಿಸಿದ ಆಕೆ ಬಂದಾಗ ರಾತ್ರಿ ಆಗಿತ್ತು. ರಾತ್ರಿ ಅಲ್ಲಿಯೇ ಮಲಗಿಕೊಂಡಳು. ಅರ್ಧರಾತ್ರಿಯ ಸಮಯದಲ್ಲಿ ಆಕೆ ಅನಾರೋಗ್ಯದಿಂದ ಮನೆಯ ಒಳಗೆ ವಾಂತಿ ಮಾಡಿದ್ದಳು. ಶ್ರೀಶಾರದಾದೇವಿ ಬೆಳಗ್ಗೆ ಎದ್ದು ಬಂದವರು, ಈಕೆಯ ಸ್ಥಿತಿಯನ್ನು ನೋಡಿ, ಬೇರೆ ಕಡೆ ಇವಳನ್ನು ಮಲಗಿಸಿ, ವಾಂತಿಯನ್ನೆಲ್ಲ ಇವರೇ ಬಳಿದರು. ಮನೆಯಲ್ಲಿ ಬೇಕಾದಷ್ಟು ಜನರಿದ್ದರು. ಈ ಕೆಲಸ ಮಾಡುವುದಕ್ಕೆ, ಆದರೆ ಅವರು ಹಾಗೆ ಮಾಡುವಾಗ ಈ ಹೆಂಗಸನ್ನು ದೂರಿಯಾರು ಎಂದು ತಾವೇ ಮಾಡಿ ಮುಗಿಸಿದರು.

ಮತ್ತೊಮ್ಮೆ ಮಹಮ್ಮದೀಯ ಕೂಲಿ ಆಳು ಕೈಯಲ್ಲಿ ಒಂದು ಬಾಳೆಯಹಣ್ಣಿನ ಚಿಪ್ಪನ್ನು ಹಿಡಿದುಕೊಂಡು ಬಂದಿದ್ದ. ಶ್ರೀಶಾರದಾದೇವಿಯವರನ್ನು ನೋಡಿ ನಮಸ್ಕಾರ ಮಾಡಿ ಪೂಜೆಗೆ ಇದನ್ನು ಸ್ವೀಕರಿಸಿ ಎಂದು ಹೇಳಿದ. ಶ್ರೀಶಾರದಾದೇವಿ ಅದನ್ನು ಸ್ವೀಕರಿಸಿದರು. ಆತ ಹೊರಟುಹೋದ ಮೇಲೆ ಹತ್ತಿರ ಇದ್ದವರು, "ಅವನು ಎಷ್ಟು ಕೊಲೆ ದರೋಡೆ ಮಾಡಿರುವನೊ. ಅವನಿಂದ ಇದನ್ನು ನೀವು ಸ್ವೀಕರಿಸಿದಿರಲ್ಲ?" ಎಂದು ಕೇಳಿದ. ಅದಕ್ಕೆ ಇವರು "ನನಗೆ ಅವನ ಹಿಂದಿನ ಜೀವನವೆಲ್ಲ ತಿಳಿದಿದೆ. ಆದರೂ ಅದನ್ನು ಸ್ವೀಕರಿಸಿದೆ. ಪುಣ್ಯಾತ್ಮರಿಗೆ ಮಾತ್ರ ದೇವರ ಸೇವೆ ಮಾಡುವ ಅಧಿಕಾರವಿದ್ದರೆ ಪಾಪಿಗಳು ಅತಂಹ ಪದವಿಗೆ ಏರುವುದು ಯಾವಾಗ ?'' ಎಂದು ಉತ್ತರಕೊಟ್ಟರು.

ಒಂದು ದಿನ ಅಮಜಾನ್ ಎಂಬ ಮಹಮ್ಮದೀಯನನ್ನು ಊಟಕ್ಕೆ ಕರೆದು ತನ್ನ ತಮ್ಮನ ಮಗಳಾದ ನಳಿನಿಗೆ ಅವನಿಗೆ ಬಡಿಸುವಂತೆ ಹೇಳಿದರು. ಆ ಹುಡುಗಿ ದೂರದಿಂದ ನಿಂತು

ಕೊಂಡೆ ಅವನೆಲೆಗೆ ಆಹಾರವನ್ನು ಎಸೆಯುತ್ತಿದ್ದಳು, ಹತ್ತಿರ ಹೋದರೆ ಜಾತಿಗೆ ಎಲ್ಲಿ ಚ್ಯುತಿ ಬರುವುದೋ ಎಂದು. ಶ್ರೀಶಾರದಾದೇವಿ ಇದನ್ನು ನೋಡಿ, "ನೀನು ಹಾಗೆ ಬಡಿಸಿದರೆ ಅವನು ಊಟವನ್ನು ಹೇಗೆ ಮಾಡುತ್ತಾನೆ?" ಎಂದು ಹೇಳಿ ತಾವೆ ಅವಳ ಕೈಯಿಂದ ತೆಗೆದುಕೊಂಡು ಅವನ ಹತ್ತಿರ ಕುಳಿತು ಕೊಂಡು ಬಡಿಸಿದರು. ಅವನ ಊಟವಾದ ಮೇಲೆ ತಾವೇ ಆ ಜಾಗವನ್ನು ತೊಳೆದರು. ನಳಿನಿ ಇದನ್ನು ನೋಡಿ "ನೀವು ಹಾಗೆ ಮಾಡಿದರೆ ಜಾತಿ ಹೋಗುವುದಿಲ್ಲವೆ ?" ಎಂದು ಕೇಳಿದಳು. ಅದಕ್ಕೆ ಶ್ರೀಶಾರದಾದೇವಿ "ಶಾರದಾನಂದ ಹೇಗೆ ನನ್ನ ಮಗನೋ ಇವನೂ ಹಾಗೆಯೇ" ಎಂದರು.

ಮತ್ತೊಮ್ಮೆ ಜಾಡಮಾಲಿಯೊಬ್ಬನು ಇವರಿಗೆ ನೀರಿನ ಪಾತ್ರೆಯನ್ನು ಇಡಲು ಹುಲ್ಲಿನ ಸಿಂಬಿಯನ್ನು ಮಾಡಿಕೊಡಲು ಬಂದ. ಆತನಿಗೆ ಅಂಗಳದಲ್ಲಿ ಅದನ್ನು ಇಟ್ಟು ಹೋಗು ಎಂದರು. ಆದರೆ ಅಂಗಳದ ಒಳಕ್ಕೆ ಹೋಗಲು ಅವನಿಗೆ ತುಂಬಾ ಅಂಜಿಕೆ. ಆದರೂ ಶಾರದಾದೇವಿ ಹೇಳಿದ ಮೇಲೆ ಧೈರ್ಯ ಬಂದು ಒಳಗೆ ಹೋಗಿ ಅದನ್ನು ಇಟ್ಟು ಹಿಂತಿರುಗಿ ಬರುವಾಗ ಅವನ ದುರದೃಷ್ಟಕ್ಕೆ ಸರಿಯಾಗಿ ಒಬ್ಬ ಹೆಂಗಸು ಇದನ್ನು ನೋಡಿ ಇವನನ್ನು ನಿಂದಿಸಲು ಶುರು ಮಾಡಿದಳು. ಶ್ರೀಶಾರದಾದೇವಿ ಆಕೆಯನ್ನು ಸುಮ್ಮನಿರಿಸಿ ಅವನಿಗೆ ಏನನ್ನಾದರೂ ತಿಂಡಿಯನ್ನು ತೆಗೆದುಕೊಳ್ಳಲು ಕಾಸನ್ನು ಕೊಟ್ಟು ಕಳುಹಿಸಿದರು.

ಅವರು ಮಾಡುವ ಪೂಜಾವಿಧಾನವೇ ಒಂದು ವಿಧ. ಅಲ್ಲಿ ಮಂತ್ರ ತಂತ್ರ ಮುದ್ರೆಗಳ ಆಡಂಬರವಿರಲಿಲ್ಲ. ಅವರ ಪೂಜೆಗೆ ಬಹಳ ಸ್ವಲ್ಪ ಸಲಕರಣೆ ಸಾಕಾಗುತ್ತಿತ್ತು. ಅದನ್ನು ಶ್ರದ್ಧೆಯಿಂದ ಶುಚಿಯಾಗಿ ಮಾಡುತ್ತಿದ್ದರು. ಅವರ ಪೂಜೆ ಸರಳ

ವಾಗಿದ್ದರೂ ಭಕ್ತಿಯಿಂದ ತುಂಬಿ ತುಳುಕಾಡುತ್ತಿತ್ತು. ನಿಜವಾಗಿ ದೇವರೊಡನೆ ಇವರು ಮಾತನಾಡುತ್ತಿರುವರೆ ಎಂಬಂತೆ ಇತ್ತು ಇವರ ಪೂಜೆ. ದೇವರಿಗೆ ನೈವೇದ್ಯವನ್ನು ಇಡುವಾಗ ಎಲ್ಲವನ್ನೂ ಚೆನ್ನಾಗಿ ಅಣಿಮಾಡಿ "ಪ್ರಭು ಊಟಕ್ಕೆ ಸಿದ್ಧವಾಗಿದೆ. ಏಳಿ'' ಎನ್ನುತ್ತಿದ್ದರು. ಒಮ್ಮೆ ಶಿಷ್ಯರೊಬ್ಬರು ಶ್ರೀಶಾರದಾದೇವಿ, ದೇವರಿಗೆ ಕೊಡುವುದನ್ನು ಅವನು ಸ್ವೀಕರಿಸುವನೆ? ಎಂದು ಕೇಳಿದರು. ಅದಕ್ಕೆ ಶ್ರೀಶಾರದಾದೇವಿ "ಹೌದು. ಮೂರು ರೀತಿ ಅವನು ಇದನ್ನು ಸ್ವೀಕರಿಸುವನು. ಕೆಲವು ವೇಳೆ ಅವನು ಬಡಿಸಿದ ಪದಾರ್ಥವನ್ನು ರುಚಿ ನೋಡುವನು. ಕೆಲವು ವೇಳೆ ಅವನಿಂದ ಒಂದು ಕಾಂತಿಯು ಬಂದು ಪದಾರ್ಥವನ್ನೆಲ್ಲ ಆವರಿಸಿ ಹೋಗುವುದು. ಮತ್ತೆ ಕೆಲವು ವೇಳೆ, ಇದು ನನಗೆ ಬಂದಿದೆ ಎಂಬ ಸಮ್ಮತಿಯನ್ನು ತೋರುವನು'' ಎಂದರು.

ಪ್ರಾಚೀನ ಸಂಪ್ರದಾಯದ ಬ್ರಾಹ್ಮಣ ಕುಲದಲ್ಲಿ ಜನಿಸಿದರೂ ಎಂತಹ ಸುಧಾರಕ ಚಿತ್ತವಿತ್ತು ಎಂಬುದಕ್ಕೆ ಕೆಳಗೆ ಬರುವ ಘಟನೆ ಉದಾಹರಣೆಯಾಗಿದೆ.

ಭಕ್ತೆಯೊಬ್ಬಳು ಇವರ ಬಳಿಗೆ ಬಂದು "ನನಗೆ ಐದು ಮಂದಿ ಹೆಣ್ಣು ಮಕ್ಕಳು ಇರುವರು. ಇವರಿಗೆ ಮದುವೆ ಮಾಡವುದೇ ಒಂದು ಚಿಂತೆಯಾಗಿದೆ'' ಎಂದಳು. ಅದಕ್ಕೆ ಶ್ರೀಶಾರದಾದೇವಿ "ಮದುವೆ ಮಾಡುವುದಕ್ಕೆ ಆಗದೆ ಇದ್ದರೆ ಚಿಂತೆಯೇಕೆ? ಶಾಲೆಗೆ ಕಳುಹಿಸು. ಓದು ಬರಹ ಕಲಿಯಲಿ. ಆಮೇಲೆ ಇವರೂ ವಿದ್ಯಾಪ್ರಚಾರ ಮಾಡಿ ದೇಶಸೇವೆ ಮಾಡುತ್ತಾರೆ. ಇದರಿಂದ ಆತ್ಮೋದ್ಧಾರವೂ ಆಗುವುದು'' ಎಂದರು. ಅಲ್ಲಿದ್ದ ಇನ್ನೊಬ್ಬರು "ಈಗ ಗಂಡು ಸಿಕ್ಕುವುದೇ ಕಷ್ಟವಾಗಿದೆ. ಅನೇಕರು ಮದುವೆಗೆ

ಒಪ್ಪುವುದಿಲ್ಲ'' ಎಂದರು. ಅದಕ್ಕೆ ಶಾರದಾದೇವಿ ''ಹೌದು! ಈಗ ಅವರಿಗೂ ಬುದ್ಧಿ ಬಂದಿದೆ ಹೆಂಗಸಿನಿಂದ ಎಷ್ಟು ದೂರ ವಿದ್ದರೆ ಅಷ್ಟು ಮೇಲು. ಏಕಾಗ್ರಚಿತ್ತದಿಂದ ಸೇವೆಮಾಡಲು ಸಾಧ್ಯವಾಗುವುದು'' ಎಂದರು.

ಒಂದು ದಿನ ನೆರೆದ ಗೃಹಿಣೀ ಭಕ್ತರಿಗೆ ಹೀಗೆ ಹೇಳಿದರು. ''ವಿವಾಹಿತ ಸ್ತ್ರೀ ಪುರುಷರು ಒಂದೆರಡು ಮಕ್ಕಳಾದ ಮೇಲೆ ಸಂಯಮಿಗಳಾಗಿ ಬಾಳಬೇಕೆಂದು ಶ್ರೀರಾಮಕೃಷ್ಣರು ಹೇಳು ತ್ತಿದ್ದರು. ನಮ್ಮಲ್ಲಿ ತಂದೆತಾಯಿಗಳಿಗೆ ಹೊಟ್ಟೆಗೆ ಇರಲಿ, ಇಲ್ಲದಿರಲಿ ಮಕ್ಕಳಾಗುವುದೇನೊ ತಪ್ಪುವುದಿಲ್ಲ. ಆ ಮಕ್ಕಳೋ ಹುಟ್ಟುತ್ತಲೇ ದಾರಿದ್ರ್ಯಕ್ಕೆ ಈಡಾಗಿ ನರಕ ಜೀವನವನ್ನು ಮಾಡಬೇಕಾಗಿದೆ. ಹುಡುಗಿ ನೋಡಿದರೆ ಚೋಟುದ್ದ ಇರುವಳು. ಆಗಲೆ ಕಂಕುಳಲ್ಲಿ ಹಿಂದೆ ಮುಂದೆ ಮಕ್ಕಳು. ಸಂಸಾರದಲ್ಲಿ ಬೇಸತ್ತು ಮಾನವ ಜೀವನವನ್ನೇ ಹಳಿಯುತ್ತಾರೆ'' ಅಲ್ಲಿದ್ದವರೊಬ್ಬರು "ಪತಿಯೇ ಪರದೈವವೆಂದು ಶಾಸ್ತ್ರಗಳು ಸಾರುತ್ತವೆ. ಹೀಗಿರುವಾಗ ಅವರಿಗೆ ವಿರೋಧವಾಗಿ ಸಂಯಮಿ ಯಾಗುವುದು ಪಾಪವಲ್ಲವೆ?" ಎಂದು ಕೇಳಿದರು. ಅದಕ್ಕೆ ಶ್ರೀಶಾರದಾದೇವಿ "ದೇವರಿಗಾಗಿ ಹಾಗೆ ಮಾಡಿದರೆ ಪತಿ ಉದ್ಧಾರ ವಾಗಿ ಪರದೈವವಾಗುತ್ತಾನೆ" ಎಂದರು.

ಶ್ರೀಶಾರದಾದೇವಿ ಅವರಿಗೆ ಸ್ವಾಮಿ ವಿವೇಕಾನಂದರಂತಹ ಜಗದ್ವಿಖ್ಯಾತಶಿಷ್ಯರೆಲ್ಲ ಗೌರವಕೊಡುತ್ತಿದ್ದರು. ಆದರೂ ಇವರು ''ತಮ್ಮಲ್ಲಿ ಯಾವ ಹಿರಿಯ ಗುಣವೂ ಇಲ್ಲ. ತಾವು ಏನೂ ಅರಿಯದ ಹಳ್ಳಿಯ ಹುಡುಗಿ ಶ್ರೀಗುರುದೇವನ ಪದತಲ ದಲ್ಲಿ ಶರಣು ಹೊಂದಿದಮೇಲೆ, ಕಿಂಚಿತ್ ಅವರ ಪ್ರಭೆ ಇಲ್ಲಿ ಕಾಣುವುದೇ ಹೊರತು ಇದು ನನ್ನದಲ್ಲ'' ಎಂದು ಜನರ

ಅವರಿಗೆ ಸಲ್ಲಿಸುತ್ತಿದ್ದ ಕೀರ್ತಿ ಗೌರವಗಳನ್ನೆಲ್ಲ ತೆಗೆದುಕೊಂಡು ಶ್ರೀರಾಮಕೃಷ್ಣರ ಪಾದಗಳಿಗೆ ಅರ್ಪಣೆಮಾಡಿ ಧನ್ಯರಾಗುತಿದ್ದರು. ಅವರ ಜೀವನದಲ್ಲಿ ನಾನೆಂಬ ಅಹಂಕಾರ ಸ್ವಲ್ಪವೂ ಇರಲಿಲ್ಲ. ನೀನು ಎಂಬ ದೈನ್ಯತೆಯ ಭಾವವೊಂದೇ ಸದಾ ತಾಂಡವವಾಡುತ್ತಿತ್ತು.

ಶ್ರೀಶಾರದಾದೇವಿ ನಂತರ ೧೯೧೧ರಲ್ಲಿ ರಾಮೇಶ್ವರಕ್ಕೆ ಯಾತ್ರೆಗೆ ಹೊರಟರು. ಆ ಸಮಯದಲ್ಲಿ ಮದ್ರಾಸು ಬೆಂಗಳೂರು ಆಶ್ರಮಗಳಿಗೂ ಬಂದಿದ್ದರು. ಅನಂತರ ಕಲ್ಕತ್ತೆಗೆ ಹಿಂತಿರುಗಿ ಹೋದರು. ೧೯೨೦ರವರೆಗೆ ಬದುಕಿದ್ದು ಭವಜೀವಿಗಳ ಉದ್ಧಾರಕ್ಕೆ ತಮ್ಮ ಆಯುಸ್ಸನ್ನು ಸವೆಸಿ ಮಹಾಸಮಾಧಿಯನ್ನು ಪಡೆದರು.

ಸ್ವಾಮಿ ವಿವೇಕಾನಂದರ ಪ್ರಖ್ಯಾತ ಶಿಷ್ಯರಾದ ಸೋದರಿ ನಿವೇದಿತಾ ಎಂಬಾಕೆ ಶ್ರೀಶಾರದಾದೇವಿ ಅವರನ್ನು ಕಂಡು ಅವರೊಡನೆ ಹಲವು ವರುಷಗಳು ಸಂಪರ್ಕವಿಟ್ಟುಕೊಂಡಿದ್ದರು. ಆಕೆ ಶ್ರೀಶಾರದಾದೇವಿ ಅವರ ವಿಷಯವಾಗಿ ಬರೆಯುತ್ತ "ಶ್ರೀರಾಮಕೃಷ್ಣರು ಭಾರತೀಯ ನಾರಿಯರ ವಿಷಯದಲ್ಲಿ ಹೇಳಿದ ಕೊನೆಯ ಮಾತು ಶ್ರೀಶಾರದಾದೇವಿಯವರ ಜೀವನ" ಎಂದಿರುವರು. ಶ್ರೀರಾಮಕೃಷ್ಣರು ಇದುವರೆಗೆ ಬಂದ ಪ್ರಖ್ಯಾತ ಸ್ತ್ರೀಯರಲ್ಲಿದ್ದ ಪಾತಿವ್ರತ್ಯ, ಜ್ಞಾನ, ಭಕ್ತಿ, ತಾಯೊಲುಮೆ ಅನುಕಂಪ ಮುಂತಾದ ಗುಣಗಳನ್ನೆಲ್ಲ ಶ್ರೀಶಾರದಾದೇವಿ ಎಂಬ ವ್ಯಕ್ತಿಯಲ್ಲಿ ಆವಾಹನೆಮಾಡಿ ನಮ್ಮ ನಾರಿಯರಿಗೆ ಆದರ್ಶವಾಗುವಂತೆ ಅದನ್ನು ಒಂದು ನಂದಾದೀಪದಂತೆ ಇಟ್ಟುಹೋಗಿರುವರು. ಶ್ರೀರಾಮಕೃಷ್ಣರು ಭಾರತೀಯ ನಾರಿಯರಿಗೆ ಕೊಟ್ಟ ಒಂದು ಉಡುಗೊರೆ ಶ್ರೀಶಾರದಾದೇವಿ ಅವರ ಬದುಕು ಎಂದು

ಬೇಕಾದರೆ ಹೇಳಬಹುದು. ಅವರು ಭಕ್ತರೊಡನೆ ಆಡಿದ ಮಾತು ಕತೆಗಳಿಂದ ಕೆಲವು ಉಪದೇಶಗಳನ್ನು ಆಯ್ದು ಕೆಳಗೆ ಕೊಡುವೆವು.

* * * *

ಪ್ರತಿಯೊಂದೂ ಒಬ್ಬನ ಮನಸ್ಸಿನ ಮೇಲೆ ನಿಂತಿದೆ. ಚಿತ್ತ ಶುದ್ಧಿಯಿಲ್ಲದೆ ಏನನ್ನೂ ಪಡೆಯಲಾಗುವುದಿಲ್ಲ. ಶಿಷ್ಯನಿಗೆ ಗುರು, ದೇವರು ಮತ್ತು ಅವನ ಭಕ್ತರ ಆಶೀರ್ವಾದ ದೊರೆತಿರ ಬಹುದು. ಆದರೆ ಒಬ್ಬನ ಆಶೀರ್ವಾದವಿಲ್ಲದೇ ಇದ್ದರೆ ಅವನು ಕಷ್ಟಕ್ಕೆ ಈಡಾಗುವನು. ಆ ಒಬ್ಬನೇ ಮನಸ್ಸು. ಸಾಧಕನ ಮನಸ್ಸೆ ಅವನಿಗೆ ಸಹಾಯ ಮಾಡಬೇಕು.

ಹಲವಾರು ಪ್ರಶ್ನೆಗಳಿಂದ ಸುಮ್ಮನೆ ಮನಸ್ಸನ್ನು ಕೆಡಿಸಿಕೊಳ್ಳ ಬೇಡಿ. ಜೀವನದಲ್ಲಿ ಯಾವುದೋ ಒಂದನ್ನು ಅನುಷ್ಠಾನಕ್ಕೆ ತರುವುದೇ ಕಷ್ಟ. ಆದರೂ ಬೇಕಾದಷ್ಟು ಸಮಸ್ಯೆಗಳ ಔತಣ ವನ್ನು ಕೊಡುವನು.

ನಿರ್ಜನ ಪ್ರದೇಶದಲ್ಲಿ ಸಾಧನೆಯನ್ನು ಮಾಡುವುದು ಮುಖ್ಯ. ಸಸಿ ಚಿಕ್ಕದಾಗಿರುವಾಗ ಅದಕ್ಕೆ ಬೇಲಿ ಆವಶ್ಯಕ. ಆದರೆ ಅದೇ ದೊಡ್ಡ ಮರವಾದಮೇಲೆ ದನಗಳು ಏನನ್ನೂ ಮಾಡಲಾರವು. ಇದರಂತೆಯೇ ಹಲವಾರು ವರುಷಗಳ ಸಾಧನೆಯಿಂದ ಮನಸ್ಸನ್ನು ರೂಢಿಸಿದ ಮೇಲೆ, ನೀವು ಎಲ್ಲಿ ಬೇಕಾದರೂ ಇರಬಹುದು. ಯಾರೊಡನೆ ಬೇಕಾದರೂ ಬೆರೆಯಬಹುದು, ಆಗ ಮನಸ್ಸು ಅದಕ್ಕೆ ಒಳಗಾಗುವುದಿಲ್ಲ.

ಧ್ಯಾನವನ್ನು ಅಭ್ಯಾಸಮಾಡಿ ಕ್ರಮೇಣ ನಿಮಗೆ ಏಕಾಗ್ರತೆ ಮತ್ತು ಶಾಂತಿ ದೊರಕುತ್ತದೆ. ಅನಂತರ ಧ್ಯಾನವನ್ನು

ಬಿಡುವುದಕ್ಕೇ ಆಗುವುದಿಲ್ಲ. ದೇವರಲ್ಲದೆ ಬೇರೆ ವಸ್ತುವಿನ ಕಡೆ ಮನಸ್ಸು ಹೋದಾಗಲೆಲ್ಲ, ಅದು ಕ್ಷಣಿಕವೆಂದು ಮನಸ್ಸಿಗೆ ಹೇಳಿ ಮನಸ್ಸನ್ನು ಭಗವಂತನ ಅಡಿದಾವರೆಯಲ್ಲಿ ಸಮರ್ಪಿಸಿ.

ಸಂಸಾರಕ್ಕೆ ನೀನು ಅನಾಸಕ್ತನಾಗಿದ್ದಷ್ಟೂ ಹೆಚ್ಚು ಶಾಂತಿಯನ್ನು ಅನುಭವಿಸುವೆ.

ಅನೇಕರು ಪ್ರಪಂಚದಲ್ಲಿ ಬೇಕಾದಷ್ಟು ದುಃಖ ಕಷ್ಟಗಳನ್ನು ಅನುಭವಿಸಿ ಆದಮೇಲೆ ದೇವರ ಕಡೆ ತಿರುಗುವರು. ಆದರೆ ಬಾಲ್ಯದಿಂದಲೆ ಭಗವಂತನಿಗೆ ಒಂದು ಪುಷ್ಪದಂತೆ ತನ್ನ ಮನಸ್ಸನ್ನು ಅರ್ಪಿಸಿರುವವನೇ ಧನ್ಯಾತ್ಮ.

ಮನಸ್ಸು ಒಂದು ಕಾಡಾನೆಗಿಂತ ಏನೂ ಮೇಲಲ್ಲ. ಅದು ಸಿಕ್ಕಿದ ಕಡೆಗೆ ಓಡುವುದು. ಆದಕಾರಣವೇ ಭಗವತ್ ಸಾಕ್ಷಾತ್ಕಾರಕ್ಕಾಗಿ ನಿತ್ಯಅನಿತ್ಯವಸ್ತು ವಿವೇಚನೆಮಾಡಿ ಅವನನ್ನ ಪಡೆಯಲು ಸಾಧನೆಮಾಡಬೇಕು.

ಒಬ್ಬ ತನ್ನ ಕರ್ಮಪಾಶದಿಂದ ಪಾರಾಗಲಾರ. ಆದರೆ ಒಬ್ಬ ಸಾಧನೆಯಲ್ಲಿ ಕಾಲಕಳೆದರೆ, ಅವನಿಗೆ ಕಾಲೇಕತ್ತರಿಸಿಹೋಗುವ ಕರ್ಮ ಬರೆದಿದ್ದರೆ, ಅವನು ಒಂದು ಮುಳ್ಳಿನ ಗಾಯದಿಂದಲೇ ಪಾರಾಗಿಹೋಗುವನು.

ನೀನು ಪ್ರಾರ್ಥನೆಮಾಡದೇ ಇದ್ದರೆ ದೇವರಿಗೆ ಏನು ನಷ್ಟ? ಅದು ನಿನ್ನ ದುರದೃಷ್ಟ ಅಷ್ಟೆ.

ಯಾವಾಗ ಒಬ್ಬ ಮತ್ತೊಬ್ಬರಲ್ಲಿ ದೋಷಾರೋಪಣೆ ಮಾಡುವನೋ ಆಗ ಇವನ ಮನಸ್ಸೇ ದೋಷದಿಂದ ಕೂಡುವುದು. ಇತರರಲ್ಲಿ ದೋಷಾರೋಪಣೆ ಮಾಡಿ ಇವನಿಗೇನು ಪ್ರಯೋಜನ? ಇದರಿಂದ ಇವನಿಗೇ ನಷ್ಟ.

ಆಸೆಯಿಂದ ಈ ದೇಹ ಹುಟ್ಟಿರುವುದು, ಆಸೆ ಇಲ್ಲದೇ ಇದ್ದರೆ

ಈ ದೇಹಬಿದ್ದು ಹೋಗುವುದು. ಆಸೆಯೆಲ್ಲ ನಿರ್ನಾಮವಾದ ಮೇಲೆಯೇ ಪರಮನಿರ್ವಾಣ.

ಒಬ್ಬನಲ್ಲಿ ಆಸೆ ಇರುವ ತನಕ ಜನನ ಮರಣಗಳು ಅವನಿಗೆ ತಪ್ಪಿದ್ದಲ್ಲ. ಆಸೆಯೇ ಒಂದು ದೇಹವಾದ ಮೇಲೆ ಮತ್ತೊಂದು ದೇಹವನ್ನು ಧರಿಸುವಂತೆ ಮಾಡಿರುವುದು. ಆಸೆ ಇರುವವರೆಗೆ ಪುನಃ ಜನ್ಮ ಧರಿಸಲೇಬೇಕಾಗಿದೆ.

ಒಬ್ಬ ಕರ್ಮವನ್ನು ಮಾಡಲೇಬೇಕಾಗಿದೆ. ಕರ್ಮದಿಂದಲೇ ಕರ್ಮಬಂಧನದಿಂದ ಪಾರಾಗಬೇಕಾಗಿದೆ. ಅನಾಸಕ್ತಿಯನ್ನು ಪಡೆಯಬೇಕಾಗಿದೆ. ಒಬ್ಬ ಒಂದು ಕ್ಷಣವಾದರೂ ಕೆಲಸವಿಲ್ಲದೆ ಇರಕೂಡದು.

ನೀನು ನಿಸ್ಸಂದೇಹವಾಗಿ ಕೆಲಸವನ್ನು ಮಾಡಬೇಕು. ಕರ್ಮ ಮನಸ್ಸಿನ ಚಾಂಚಲ್ಯವನ್ನು ತಗ್ಗಿಸುವುದು. ಅದರೊಡನೆ ಪ್ರಾರ್ಥನೆ ಮತ್ತು ಧ್ಯಾನವೂ ಅತ್ಯಾವಶ್ಯಕ. ನೀನು ಬೆಳಗ್ಗೆ ಮತ್ತು ಸಾಯಂಕಾಲವಾದರೂ ಧ್ಯಾನಕ್ಕೆ ಕುಳಿತುಕೊಳ್ಳಬೇಕು. ಧ್ಯಾನ ದೋಣಿಗೆ ಚುಕ್ಕಾಣಿ ಇದ್ದಂತೆ. ಒಬ್ಬ ಸಂಜೆ ಧ್ಯಾನಕ್ಕೆ ಕುಳಿತಾಗ ದಿನವೆಲ್ಲ ಮಾಡಿದ ಕೆಲಸವನ್ನು ಪರೀಕ್ಷೆ ಮಾಡಬಹುದು.

ಗಾಳಿ ಹೇಗೆ ಮೋಡವನ್ನು ಚದುರಿಸುವುದೋ ಹಾಗೆಯೇ ಭಗವಂತನ ನಾಮವನ್ನು ಉಚ್ಚರಿಸಿದರೆ ಅದು ಲೌಕಿಕವಾಸನೆಯನ್ನು ಹೊಡೆದು ಓಡಿಸುವುದು.

ಮೇಲಿನಿಂದ ಕೆಳಗೆ ಹರಿಯುವ ನೀರಿನ ಸ್ವಭಾವ ಕೂಡ ಸೂರ್ಯನ ಕಿರಣದಿಂದ ಆವಿಯಂತೆ ಮೇಲೇಳುವುದು. ಇದರಂತೆಯೇ ಭಗವಂತನ ದಯೆ ವಿಷಯವಸ್ತುವಿನ ಕಡೆ ಹರಿಯುತ್ತಿರುವ ಮನಸ್ಸನ್ನು ಅವನ ಕಡೆಗೆ ಮೇಲಕ್ಕೆ ಎತ್ತುವುದು.

ನಮಗೆ ಮುಖ್ಯವಾಗಿ ಬೇಕಾಗಿರುವುದು ಅವನ ದಯೆ. ಭಗವತ್‌ಕೃಪೆಗಾಗಿ ಪ್ರಾರ್ಥನೆ ಮಾಡಬೇಕು. ನದೀತೀರದಲ್ಲಿ ಕುಳಿತು ದೇವರನ್ನು ಪ್ರಾರ್ಥಿಸುತ್ತಿರಬೇಕು. ಅವನು ಸಕಾಲದಲ್ಲಿ ನಮ್ಮನ್ನು ಕಡೆಹಾಯಿಸುವನು. ಮಾನವ ಗುರು ಶಿಷ್ಯನ ಕಿವಿಗೆ ಮಂತ್ರವನ್ನು ಉಚ್ಚರಿಸುವನು. ಆದರೆ ದೇವರು ಆತ್ಮಶಕ್ತಿಯನ್ನೇ ಜೀವಿಗೆ ಧಾರೆಯೆರೆಯುವನು.

ಅವನ ಪಾದಪದ್ಮಗಳಲ್ಲಿ ಶರಣಾಗತನಾಗು. ಅನಂತರ ನೀನು ಅವನ ಕೃಪೆಯನ್ನು ಅನುಭವಿಸುವೆ.

ಪ್ರೀತಿಯಿಲ್ಲದೆ ಭಗವಂತನನ್ನು ಪಡೆಯಲಾರೆವು. ಹೌದು, ಹೃತ್‌ಪೂರ್ವಕವಾದ ಪ್ರೀತಿ ಇರಬೇಕು.

ಮಂತ್ರಗಳಾಗಲಿ ಶಾಸ್ತ್ರಗಳಾಗಲಿ ನಮ್ಮ ನೆರವಿಗೆ ಬಾರವು. ಭಕ್ತಿಯೊಂದೇ ಎಲ್ಲವನ್ನೂ ಪಡೆಯುವುದು. ಭಕ್ತಿಯಿಂದ ಅಸಾಧ್ಯವಾಗಿರುವುದೂ ಸಾಧ್ಯವಾಗುವುದು.

ಸಾಧಾರಣ ಮಾನವಪ್ರೇಮ ದುಃಖದಲ್ಲಿ ಪರ್ಯವಸಾನವಾಗುವುದು. ಆದರೆ ಭಗವತ್‌ಪ್ರೇಮವಾದರೋ ಧನ್ಯತೆಯನ್ನು ನೀಡುವುದು.

ಕಷ್ಟ ಮತ್ತು ಅಪಾಯಗಳು ಬರುವುದಿಲ್ಲ ಎಂದು ಯೋಚಿಸುವುದು ಮೌಢ್ಯ. ಅವು ಬಂದೇ ಬರುವುವು. ಆದರೆ ಅವು ಭಕ್ತನಿಗೆ ಅವನ ಕಾಲಿನ ಕೆಳಗೆ ನೀರು ಹರಿದುಕೊಂಡು ಹೋಗುವಂತೆ ಹೊರಟುಹೋಗುವುವು.

ದೇವರನ್ನು ಕಂಡಮೇಲೆ ಅವನಿಗೆ ಏನಾಗುವುದು? ಅವನಿಗೇನಾದರೂ ಒಂದು ಜೊತೆ ಕೊಂಬು ಬೆಳೆಯುವುದೆ? ಇಲ್ಲ. ನಿತ್ಯ ಅನಿತ್ಯವಸ್ತು ವಿವೇಕ ಅವನಿಗೆ ಬರುವುದು, ಆಧ್ಯಾತ್ಮಿಕ ಅನುಭವವನ್ನು ಪಡೆದು ಜನನಮರಣಗಳನ್ನು ಅತಿಕ್ರಮಿಸುವನು.

ಆಧ್ಯಾತ್ಮಿಕಜೀವನದಲ್ಲಿ ಮುಂದುವರಿದಂತೆ, ನಿನ್ನಲ್ಲಿ ನನ್ನಲ್ಲಿ ಮತ್ತು ಎಲ್ಲರಲ್ಲಿ–ಅದು ಎಷ್ಟೇ ನೀಚವಾಗಿರಲಿ–ಎಲ್ಲರಲ್ಲಿಯೂ ಒಂದನ್ನೇ ನೋಡುವೆ. ಆಗಲೆ ನಿನಗೆ ದೈನ್ಯ ಬರಬೇಕಾದರೆ, ದಯೆ ಇಲ್ಲದವನನ್ನು ಮನುಷ್ಯನೆಂದು ಕರೆಯಲು ಸಾಧ್ಯವೆ ? ಅವನೊಂದು ಸಾಕ್ಷಾತ್ ಮೃಗ.

ಭಗವಂತನಲ್ಲಿ ಶರಣಾಗತನಾದವನು ಅವನ ಎಲ್ಲಾ ಕರ್ಮ ಪಾಶದಿಂದಲೂ ಮುಕ್ತನಾಗುವನು. ಬ್ರಹ್ಮನೇ ತನ್ನ ಒಂದು ಕೈಯಿಂದ ಕಪಾಲದ ಮೇಲೆ ಏನನ್ನು ಬರೆದಿರುವನೋ ಅದನ್ನು ಮತ್ತೊಂದು ಕೈಯಿಂದ ಅಳಿಸಿಬಿಡುವನು.

ಕೆ.ಸಂ. ೨೫೧೨೯–ಎಂ.ಯು.ಪಿ.ಎಂ.–೧೦,೦೦೦ ಪ್ರತಿಗಳು–೧೦–೯–೮೭

ಕೆಲವು ಸಾಹಿತ್ಯ ಕೃತಿಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ. ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ. ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ. ಹಿರಣ್ಮಯಿ
೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ. ಎಚ್. ತಿಪ್ಪೇರುದ್ರಸ್ವಾಮಿ

೨೯. ಅಲ್ಲಮಪ್ರಭು—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ. ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—
ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ
೩೪. ಜನ್ನ—ಡಾ. ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ. ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ. ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀ ಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ. ಹಿರಣ್ಮಯ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ. ಆರ್. ಎಸ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ
೫೬. ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ
೫೮. ಭಾರತೀಯ ಮಹಿಳಾ ಪರಂಪರೆ—ಬಿ. ಪಿ. ಚಂದ್ರಾಬಾಯಿ
೫೯. ಬಂಧುವರ್ಮ—ಬಿ. ಎಸ್. ಸಣ್ಣಯ್ಯ
೬೦. ಶ್ರೀರಾಮಾಯಣದರ್ಶನಂ—ಒಂದು ಸಮೀಕ್ಷೆ—ಡಾ. ಸಿ.ಪಿ.
ಕೃಷ್ಣಕುಮಾರ್